ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 23 ಭಾನುವಾರ 2022

ಸಂಪುಟ: 43 | ಸಂಚಿಕೆ: 187 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಟಿ20 ವಿಶ್ವಕಪ್: ಇಂದು ಭಾರತ–ಪಾಕ್ ಹೈವೋಲ್ಟೇಜ್ ಪಂದ್ಯ

ಸಂಭಾವ್ಯ ಭಾರತ ತಂಡ: ರೋಹಿತ್ ಶರ್ಮಾ (ನಾಯಕ), ಕೆ.ಎಲ್ ರಾಹುಲ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ದಿನೇಶ್ ಕಾರ್ತಿಕ್/ ರಿಷಬ್ ಪಂತ್ (ವಿಕೆಟ್ ಕೀಪರ್), ಆರ್.ಅಶ್ವಿನ್ ಅಥವಾ ಯಜ್ವೇಂದ್ರ ಚಹಲ್, ಭುವನೇಶ್ವರ್ ಕುಮಾರ್, ಮೊಹಮ್ಮದ್ ಶಮಿ/ಹರ್ಷಲ್ ಪಟೇಲ್, ಅರ್ಷದೀಪ್ ಸಿಂಗ್.





ಸಂಭಾವ್ಯ ಪಾಕಿಸ್ತಾನ ತಂಡ: ಬಾಬರ್ ಅಜಮ್ (ನಾಯಕ), ಮೊಹಮ್ಮದ್ ರಿಜ್ವಾನ್, ಶಾನ್ ಮಸೂದ್, ಶಾದಾಬ್ ಖಾನ್, ಮೊಹಮ್ಮದ್ ನವಾಜ್, ಹೈದರ್ ಅಲಿ, ಇಫ್ತಿಕರ್ ಅಹ್ಮದ್, ಆಸಿಫ್ ಅಲಿ, ನಸೀಮ್ ಶಾ, ಹಾರಿಸ್ ರೌಫ್, ಶಾಹೀನ್ ಶಾ ಅಫ್ರಿದಿ.



ಮೆಲ್ಬೋರ್ನ್, ಅ. 22– ಆಸ್ಟ್ರೇಲಿಯಾದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಸಾಂಪ್ರದಾಯಿಕ ಎದುರಾಳಿಗಳಾದ ಭಾರತ–ಪಾಕಿಸ್ತಾನ ತಂಡಗಳು ನಾಳೆ(ಭಾನುವಾರ) ಕಾದಾಡಲಿವೆ. ಭಾರೀ ಕುತೂಹಲ ಕೆರಳಿಸಿರುವ ಪಂದ್ಯಕ್ಕೆ ಕ್ಷಣಗಣನೆ ಆರಂಭವಾಗಿದೆ. ಇಲ್ಲಿನ ಮೆಲ್ಬೋರ್ನ್ ಕ್ರಿಕೆಟ್ ಮೈದಾನದಲ್ಲಿ ಪಂದ್ಯ ಭಾರತೀಯ ಕಾಲಮಾನ ಮಧ್ಯಾಹ್ನ 1.30ಕ್ಕೆ ಆರಂಭವಾಗಲಿದೆ.

ವಿಶ್ವಕಪ್ ಪಂದ್ಯಾವಳಿಗಳಲ್ಲಿ ಪಾಕ್ ವಿರುದ್ಧ ತನ್ನ ಪ್ರಭುತ್ವ ಸಾಧಿಸಿದ್ದ ಭಾರತ ಕಳೆದ ವಿಶ್ವಕಪ್‌ನಲ್ಲಿ ಮೊದಲ ಬಾರಿಗೆ ಸೋಲು ಅನುಭವಿಸಿತ್ತು. ಆ ಸೋಲಿನ ಸೇಡು ತೀರಿಸಿಕೊಳ್ಳಲು ರೋಹಿತ್ ಶರ್ಮಾ ನೇತೃತ್ವದ ಟೀಂ ಇಂಡಿಯಾ ಹವಣಿಸುತ್ತಿದೆ. ಟಿ20 ವಿಶ್ವಕಪ್‌ನಲ್ಲಿ ಉಭಯ ತಂಡಗಳು 6 ಬಾರಿ ಮುಖಾಮುಖಿಯಾಗಿದ್ದು, ಟೀಮ್ ಇಂಡಿಯಾ 5 ಬಾರಿ ಗೆದ್ದಿದ್ದರೆ, ಪಾಕಿಸ್ತಾನ 1 ಪಂದ್ಯ ಗೆದ್ದಿದೆ. ಎಂದಿನಂತೆ ಆರಂಭಿಕರಾಗಿ ಕೆ.ಎಲ್.ರಾಹುಲ್ ಹಾಗೂ ನಾಯಕ ರೋಹಿತ್ ಶರ್ಮಾ ಕಣಕ್ಕಿಳಿಯಲಿದ್ದು, ಮೂರನೇ ಕ್ರಮಾಂಕದಲ್ಲಿ ಮಾಜಿ ನಾಯಕ ವಿರಾಟ್ ಕೊಹ್ಲಿ ಆಡಲಿದ್ದಾರೆ. ನಾಲ್ಕು ಮತ್ತು ಐದನೇ ಕ್ರಮಾಂಕಗಳಲ್ಲಿ ಕ್ರಮವಾಗಿ ಸೂರ್ಯಕುಮಾರ್ ಯಾದವ್ ಹಾಗೂ ಹಾರ್ದಿಕ್ ಪಾಂಡ್ಯ ಬ್ಯಾಟ್ ಬೀಸುವುದು ಬಹುತೇಕ ಖಚಿತ. ಆರನೇ ಕ್ರಮಾಂಕದಲ್ಲಿ ಸ್ಪಿನ್ ಆಲ್‌ರೌಂಡರ್ ಅಕ್ಷರ್ ಪಟೇಲ್ ಅವರನ್ನು ಆಡಿಸುವ ಸಾಧ್ಯತೆ ಇದೆ. ಏಳನೇ ಕ್ರಮಾಂಕದಲ್ಲಿ ದಿನೇಶ್ ಕಾರ್ತಿಕ್ ಅಥವಾ ರಿಷಬ್ ಪಂತ್ ಕಣಕ್ಕಿಳಿಯಲಿದ್ದಾರೆ. ಇನ್ನು ಬೌಲಿಂಗ್ ವಿಭಾಗದಲ್ಲಿ ಭುವನೇಶ್ವರ್ ಕುಮಾರ್ ಹಾಗೂ ಅರ್ಷದೀಪ್ ಸಿಂಗ್ ಇಬ್ಬರು ವೇಗಿಗಳು ಕಣಕ್ಕೆ ಇಳಿಯುವುದು ಬಹುತೇಕ ಖಚಿತ. ಆದರೆ, ಇನ್ನುಳಿದ ಒಂದು ವೇಗದ ಬೌಲಿಂಗ್ ಸ್ಥಾನಕ್ಕೆ ಹರ್ಷಲ್ ಪಟೇಲ್ ಹಾಗೂ ಮೊಹಮ್ಮದ್ ಶಮಿ ನಡುವೆ ಪೈಪೋಟಿ ಏರ್ಪಡಲಿದೆ. ಅದೇ ರೀತಿ ಪೂರ್ಣ ಪ್ರಮಾಣದ ಸ್ಪಿನ್ನರ್ ಜಾಗಕ್ಕೆ ಆರ್.ಅಶ್ವಿನ್ ಹಾಗೂ ಯಜ್ವೇಂದ್ರ ಚಹಲ್ ಅವರಲ್ಲಿ ಒಬ್ಬರು ಆಯ್ಕೆಯಾಗಲಿದ್ದಾರೆ.

ಅತ್ತ ಪಾಕಿಸ್ತಾನವೂ ಬ್ಯಾಟಿಂಗ್ ಹಾಗೂ ಬೌಲಿಂಗ್‌ನಲ್ಲಿ ಬಲಿಷ್ಠವಾಗಿದ್ದು, ಭಾರತದ ವಿರುದ್ಧದ ಪಂದ್ಯ ಗೆಲ್ಲುವ ಮೂಲಕ ಟೂರ್ನಿಯಲ್ಲಿ ಶುಭಾರಂಭ ಮಾಡುವ ತವಕದಲ್ಲಿದೆ. ಪಾಕ್ ಬೌಲರ್‌ಗಳು ತಮ್ಮ ಕರಾರುವಾಕ್ ಬೌಲಿಂಗ್‌ನಿಂದ ಭಾರತೀಯ ಬ್ಯಾಟ್ಸ್‌ಮನ್‌ಗಳನ್ನು ಕಂಗೆಡಿಸಲು ಮಾಸ್ಟರ್ ಪ್ಲಾನ್ ರೂಪಿಸಿದ್ದಾರೆ. ಒಟ್ಟಾರೆ ನಾಳಿನ ಪಂದ್ಯದಲ್ಲಿ ಕ್ರಿಕೆಟ್ ಅಭಿಮಾನಿಗಳಿಗೆ ಭರಪೂರ ಮನರಂಜನೆ ಸಿಗಲಿದ್ದು, ಭಾರತೀಯ ಬ್ಯಾಟ್ಸ್‌ಮನ್ ಪಾಕ್ ಬೌಲರ್‌ಗಳಿಗೆ ಹೇಗೆ ಸವಾಲಾಗಲಿದ್ದಾರೆ ಎಂಬುದನ್ನು ತಿಳಿಯಲು ನಾಳಿನ ಪಂದ್ಯದವರೆಗೂ ಕಾಯಬೇಕಿದೆ.

ಪಂದ್ಯಕ್ಕೆ ವರುಣನ ಕಾಟ?: ಭಾರತ ಹಾಗೂ ಪಾಕಿಸ್ತಾನ ನಡುವಿನ ಹೈವೋಲ್ಟೇಜ್ ಪಂದ್ಯಕ್ಕೆ ಇಡೀ ವಿಶ್ವವೇ ಕಾತುರದಿಂದ ಕಾದು ಕುಳಿತಿದೆ. ಆದರೆ ಪಂದ್ಯಕ್ಕೆ ಮಳೆರಾಯ ಅಡ್ಡಿಪಡಿಸುವ ಸಾಧ್ಯತೆ ಹೆಚ್ಚಾಗಿದೆ. ಸ್ಥಳೀಯ ಹವಾಮಾನ ಇಲಾಖೆಯ ಪ್ರಕಾರ, 80 ರಿಂದ 90 ರಷ್ಟು ಮಳೆಯಾಗುವ ಸಾಧ್ಯತೆಯಿದ್ದು, ಸುಮಾರು 1 ಮಿಮೀನಿಂದ 5 ಮಿಮೀ ನಡುವೆ ಮಳೆ ಸುರಿಯಬಹುದು ಎಂದು ಹೇಳಿರುವ ಹವಾಮಾನ ಇಲಾಖೆ, ಚಂಡಮಾರುತದ ಮುನ್ಸೂಚನೆಯೂ ನೀಡಿದೆ. ಶುಕ್ರವಾರ ಸಂಜೆ, ಮೆಲ್ಬೋರ್ನ್‌ನಲ್ಲಿ ತುಂತುರು ಮಳೆಯಾಗಿದೆ. ಭಾನುವಾರದಂದು ಇದೇ ರೀತಿ ಮಳೆ ಮುಂದುವರಿಯಲಿದ್ದು, ಕ್ರಿಕೆಟ್ ಅಭಿಮಾನಿಗಳಿಗೆ ಬೇಸರ ಉಂಟು ಮಾಡಬಹುದಾಗಿದೆ. ಆದರೆ, ಹವಾಮಾನ ವೈಪರೀತ್ಯದ ಬಗ್ಗೆ ತಕ್ಕಮಟ್ಟಿನ ಕಲ್ಪನೆ ಹೊಂದಿರುವ ಸ್ಥಳೀಯರು ಪಂದ್ಯ ನಡೆಯಬಹುದು ಎಂಬ ವಿಶ್ವಾಸ ವ್ಯಕ್ತಪಡಿಸಿದ್ದಾರೆ.



ದೀಪಾವಳಿಯಿಂದ ದೀಪಾವಳಿಗೆ ವರ್ಷ ಭವಿಷ್ಯ ■ ಪುಟ 5

ರಾಜ್ಯದಲ್ಲಿ 1747 ಕೋಟಿ ವೆಚ್ಚದ 35 ಕೈಗಾರಿಕಾ ಯೋಜನೆಗೆ ಅನುಮೋದನೆ

● 4904 ಉದ್ಯೋಗ ಸೃಷ್ಟಿ ● ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಮಾಹಿತಿ



ಬೆಂಗಳೂರು, ಅ. 22(ಕೆಎಂಶಿ)– ಕೈಗಾರಿಕೆಗಳ ಬೆಳವಣಿಗೆ ಹಾಗೂ ಉದ್ಯೋಗ ಸೃಷ್ಟಿಗೆ ಮತ್ತಷ್ಟು ಉತ್ತೇಜನ ನೀಡಿರುವ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯು 1747.37 ಕೋಟಿ ರೂ. ಬಂಡವಾಳ ಹೂಡಿಕೆಯ 35 ಯೋಜನೆಗಳಿಗೆ ಅನುಮೋದನೆ ನೀಡಿದೆ.

ಕರ್ನಾಟಕ ಉದ್ಯೋಗ ಮಿತ್ರ ಕಚೇರಿಯಲ್ಲಿ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ಆರ್ ನಿರಾಣಿ ಅವರ ಅಧ್ಯಕ್ಷತೆಯಲ್ಲಿ ನಡೆದ 135ನೇ ರಾಜ್ಯ ಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿ ಸಭೆಯಲ್ಲಿ ಬಂಡವಾಳ ಹೂಡಿಕೆಯ ಯೋಜನೆಗೆ ಅನುಮೋದನೆ ನೀಡಲಾಗಿದೆ. ಒಟ್ಟು 35 ಬೃಹತ್ ಮತ್ತು ಮಧ್ಯಮ ಯೋಜನೆಗಳಿಂದ 1747.47 ಕೋಟಿ ರೂ. ಬಂಡವಾಳ ಹೂಡಿಕೆಯಾಗಲಿದ್ದು, ಇದರಿಂದಾಗಿ 4904 ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದು ಸಚಿವ ಮುರುಗೇಶ್ ಆರ್.ನಿರಾಣಿ ಅವರು ತಿಳಿಸಿದ್ದಾರೆ.

50 ಕೋಟಿ ರೂ.ಗೂ ಹೆಚ್ಚು ಬಂಡವಾಳ ಹೂಡಿಕೆಯ 8 ಪ್ರಮುಖ ಬೃಹತ್ ಮತ್ತು ಮಧ್ಯಮ ಯೋಜನೆಗಳಿಗೆ ಅನುಮೋದನೆ ನೀಡಿದ್ದು, ಇವುಗಳಿಂದ ರೂ. 949.11 ▶ 8ನೇ ಪುಟಕ್ಕೆ

ದೀಪಾವಳಿಗೆ ಮೋದಿ ಸರ್ಕಾರದ ಗಿಫ್ಟ್

ರಾಜ್ಯದಲ್ಲಿ ಯುವಕರಿಗೆ ಉದ್ಯೋಗದ ನೇಮಕಾತಿ ಪತ್ರ ವಿತರಿಸಿದ ಜೋಶಿ



ಬೆಂಗಳೂರು: ದೀಪಾವಳಿ ಹಬ್ಬಕ್ಕೆ ದೇಶದ ಯುವಕರಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ಬಂಪರ್ ಕೊಡುಗೆ ನೀಡಿದ್ದಾರೆ. ವರ್ಚುವಲ್ ಮೂಲಕ ಇಂದು 75 ಸಾವಿರ ಯುವಕರಿಗೆ ಉದ್ಯೋಗದ ನೇಮಕಾತಿ ಪತ್ರ ವಿತರಿಸಿದ್ದಾರೆ. ಇದರ ಭಾಗವಾಗಿ ಬೆಂಗಳೂರಿನಲ್ಲೂ ಇಂದು ಶನಿವಾರ ರೋಜ್‌ಗಾರ್ ಮೇಳ ನಡೆಯಿತು. ಸರ್ಕಾರದ ವಿವಿಧ ಹುದ್ದೆಗಳಿಗೆ ಆಯ್ಕೆಯಾದ ಯುವಕರಿಗೆ ಕೇಂದ್ರ ಸಂಸದೀಯ ಮತ್ತು ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಶಿ ನೇಮಕಾತಿ ಪತ್ರವನ್ನು ವಿತರಿಸಿದರು. ನೇಮಕಗೊಂಡ ▶ 8ನೇ ಪುಟಕ್ಕೆ

ಇಂದು ರಾಜ್ಯದಿಂದ ನಿರ್ಗಮಿಸಲಿರುವ ರಾಹುಲ್ ಗಾಂಧಿ ಭಾರತ್ ಜೋಡೋ ಯಾತ್ರೆ

● ರಾಜ್ಯದಲ್ಲಿ ಯಶಸ್ವಿಯಾಗಿ ಸಾಗಿದ ಭಾರತ ಐಕ್ಯತಾ ಯಾತ್ರೆ
● ಸೆ.30ರಿಂದ ಉತ್ಸಾಹದಿಂದ ಪಾಲ್ಗೊಂಡ ರಾಜ್ಯದ ಲಕ್ಷಾಂತರ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು

ಬೆಂಗಳೂರು, ಅ. 22(ಕೆಎಂಶಿ)– ಕಾಂಗ್ರೆಸ್ ಪಕ್ಷದ ನಾಯಕ ರಾಹುಲ್ ಗಾಂಧಿ ಕೈಗೊಂಡಿರುವ ಭಾರತ ಐಕ್ಯತಾ ಯಾತ್ರೆ ನಾಳೆ ರಾಜ್ಯದಲ್ಲಿ ಮುಕ್ತಾಯವಾಗಲಿದೆ. ಸೆ.30 ರಿಂದ ಆರಂಭವಾದ ಭಾರತ ಐಕ್ಯತಾ ಯಾತ್ರೆಯಲ್ಲಿ ಲಕ್ಷಾಂತರ ಮಂದಿ ಭಾಗವಹಿಸಿ ಕಾಂಗ್ರೆಸ್ ಕಾರ್ಯಕರ್ತರ ಉತ್ಸಾಹ ಹೆಚ್ಚಿಸಿದ್ದಾರೆ.

ಈ ಯಾತ್ರೆಯಲ್ಲಿ ಅತೀ ಹೆಚ್ಚು ಸಂಖ್ಯೆಯಲ್ಲಿ ಯುವಕರು, ಮಹಿಳೆಯರು, ರೈತರು ಹಾಗೂ ಮಕ್ಕಳು ಬಹಳ ಉತ್ಸಾಹದಿಂದ ಭಾಗವಹಿಸಿದ್ದು, ಮುಖಂಡರು ಹಾಗೂ ನಾಯಕರಲ್ಲಿ ವಿಶ್ವಾಸ ಹೆಚ್ಚಿರುವುದಲ್ಲದೆ, ಹೊಸ ಆಸೆ ಚಿಗುರೊಡೆದಿದೆ.

ಇಂದಿರಾ ಗಾಂಧಿ ಅವರನ್ನು ನೋಡಿ ಖುಷಿ ಪಡಲು ಜನ ಹಳ್ಳಿ, ಹಳ್ಳಿಗಳಿಂದ ಆಗಮಿಸಿದಂತೆ ಇಂದು ರಾಹುಲ್ ಗಾಂಧಿ ಅವರನ್ನು ನೋಡಿ ಶುಭ ಕೋರಲು ಉತ್ಸುಕರಾಗಿ ಬಂದದ್ದಲ್ಲದೆ, ಅವರ ಆಚಾರ, ವಿಚಾರ, ಭಾವನೆಗಳನ್ನು ವ್ಯಕ್ತಪಡಿಸಿದ್ದಾರೆ. ಜಾತಿ, ಧರ್ಮ, ಪಕ್ಷ ಭೇದ ಮರೆತು ಎಲ್ಲ ವರ್ಗದವರು ಈ ಯಾತ್ರೆಯಲ್ಲಿ ಭಾಗಿಯಾಗಿದ್ದಾರೆ. ಈ ನಡಿಗೆ ದೇಶಕ್ಕೆ ಒಂದು ಕೊಡುಗೆಯಾಗಿದೆ ಎಂದು ಕಾಂಗ್ರೆಸ್ ನಾಯಕರು ಭಾವಿಸಿದ್ದಾರೆ. ಇದು ಪಕ್ಷ ಅಥವಾ ಧರ್ಮದ ಆಧಾರದ ಮೇಲೆ ನಡೆದಿರುವ ಯಾತ್ರೆ ಅಲ್ಲ. ▶ 8ನೇ ಪುಟಕ್ಕೆ



ರಾಜ್ಯದಲ್ಲಿ ಕೊನೇ ದಿನದ ಭಾರತ ಐಕ್ಯತಾ ಯಾತ್ರೆಗೆ ರಮ್ಯಾ ಸಾಥ್

ರಾಯಚೂರು: ರಾಜ್ಯದಲ್ಲಿ ಕೊನೆಯ ದಿನ ರಾಯಚೂರು ನಗರದಲ್ಲಿ ಶನಿವಾರ ನಡೆದ ಭಾರತ ಐಕ್ಯತಾ ಯಾತ್ರೆಯಲ್ಲಿ ಚಿತ್ರ ನಟಿಯೂ ಆದ ಮಾಜಿ ಸಂಸದೆ ರಮ್ಯಾ ಭಾಗವಹಿಸಿದ್ದರು. ಮಂತ್ರಾಲಯ ಮಾರ್ಗದ ಐಬಿ ಕಾಲೋನಿಯಿಂದ ಸಾರ್ವಜನಿಕ ಸಭೆ ಆಯೋಜಿಸಿದ್ದ ವಾಲ್ಕಟ್ ಮೈದಾನದವರೆಗೂ ರಾಹುಲ್ ಗಾಂಧಿ ಮತ್ತು ರಮ್ಯಾ ಕೈಕೈ ಹಿಡಿದು ಹೆಜ್ಜೆ ಹಾಕುತ್ತಾ ಮಾತಾಡುತ್ತಾ ಗಮನ ಸೆಳೆದರು. ಹೀಗೆ ಮಾತಾಡುತ್ತಾ ಹೆಜ್ಜೆ ಹಾಕುವಾಗ ದಿಢೀರ್ ಎಂದು ರಮ್ಯಾ, ರಾಹುಲ್ ಗಾಂಧಿ ಕಾಲು ಮುಟ್ಟಿ ನಮಸ್ಕರಿಸಿದರು.

ಜನ, ಜನರ ಮೇಲೆ ನಿಯಂತ್ರಣ ಕಳೆದುಕೊಂಡು ಹುಚ್ಚರಾಗ್ತಾರೆ



ಹಾಸನ: ಬಾಂಬ್‌ಗಳು, ಭೂಕಂಪ, ಯುದ್ಧಭೀತಿ ಹೆಚ್ಚಾಗುತ್ತೆ, ಜನ ಜನರ ಮೇಲೆ ನಿಯಂತ್ರಣ ಕಳೆದುಕೊಂಡು ಹುಚ್ಚರಾಗುವರು ಎಂದು ಹಾಸನದ ಅರಸೀಕೆರೆ ತಾಲೂಕಿನ ಹಾರನಹಳ್ಳಿ ಕೋಡಿಮಠದ ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಭವಿಷ್ಯ ನುಡಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಮಧ್ಯಾಬಾಗಿಲಿನಿಂದ ಪ್ರಾರಂಭವಾಗಿ ಕಾರ್ತಿಕ ಮಾರ್ಗಶಿರ, ಜನವರಿ ಪ್ರಥಮದಲ್ಲಿಯೂ ಲೋಕಕ್ಕೆ ಕಂಟಕವಿದೆ. ಪ್ರಾಕೃತಿಕವಾಗಿ, ಪ್ರಾದೇಶಿಕವಾಗಿ ಇರಬಹುದು, ಭೂ ಕಂಟಕ ಇರಬಹುದು, ರಾಜಬೀದಿ ಇರಬಹುದು, ಜನ ಜನರ ಮೇಲೆ ನಿಯಂತ್ರಣ ಕಳೆದುಕೊಂಡು ಹುಚ್ಚರಾಗುವುದು, ದೇಹ ಅಶಕ್ತಿಯಿಂದ ದಾರಿಯಲ್ಲಿ ಬಿದ್ದು ಸಾಯುವುದು, ಅಂಗಾಂಗಗಳ ಮೇಲೆ ಪ್ರಭಾವ ಕಳೆದುಕೊಳ್ಳುತ್ತಾರೆ ಎಂದು ಹೇಳಿದರು. ಜಾಗತಿಕ ದೋಷ, ರಾಷ್ಟ್ರೀಯ ದೋಷವೂ ಹೆಚ್ಚಾಗಿದೆ. ಎರಡು, ಮೂರು ತಿಂಗಳು ಮನುಷ್ಯರು ದೈವ, ಭಕ್ತಿಯಿಂದ, ನಂಬಿಕೆಯಿಂದ ಇರುವುದು ಬಹಳ ಮುಖ್ಯ. ಕಾರ್ತಿಕದವರೆಗೂ ಮಳೆ ಇರುತ್ತೆ. ಮಠದಲ್ಲಿ ಜನವರಿಯವರೆಗೂ ಬೆಳಗ್ಗೆ, ಸಂಜೆ, ಮಹಾರುದ್ರ ಜಪವನ್ನು ಪ್ರಾರಂಭ ಮಾಡಿದ್ದೇವೆ ಎಂದರು.

ರಾಜ್ಯದಲ್ಲಿ ಲೌಡ್ ಸ್ಪೀಕರ್ ಬಳಸಲು 10,889 ಮಸೀದಿಗಳಿಗೆ ರಾಜ್ಯ ಸರ್ಕಾರದಿಂದ ಅನುಮತಿ

ಬೆಂಗಳೂರು: ಬೆಂಗಳೂರಿನಲ್ಲಿ 1,841 ಸೇರಿ ರಾಜ್ಯದಲ್ಲಿ ಒಟ್ಟು 10,899 ಮಸೀದಿಗಳಿಗೆ ಲೌಡ್ ಸ್ಪೀಕರ್ ಬಳಸಲು ರಾಜ್ಯ ಸರ್ಕಾರ ಅನುಮತಿ ನೀಡಿದೆ. ಮಸೀದಿ, ಮಂದಿರ ಹಾಗೂ ಚರ್ಚ್‌ಗಳಿಂದ ಧ್ವನಿವರ್ಧಕ ಬಳಕೆಗೆ 17 ಸಾವಿರಕ್ಕೂ ಅಧಿಕ ಅರ್ಜಿಗಳು ಬಂದಿದ್ದವು. ಇದರಲ್ಲಿ 10,889 ಮಸೀದಿಗಳು, 3 ಸಾವಿರಕ್ಕೂ ಹೆಚ್ಚು ಹಿಂದೂ ದೇವಾಲಯ, 1,400ಕ್ಕೂ ಹೆಚ್ಚು ಚರ್ಚ್‌ಗಳಿಗೆ ಸರ್ಕಾರ ಅನುಮತಿ ನೀಡಲಾಗಿದೆ. ಸರ್ಕಾರದಿಂದ 2 ವರ್ಷಗಳ ಅವಧಿಗೆ ಅನುಮತಿ ಸಿಕ್ಕಿದ್ದು, ಅನುಮತಿ ಪಡೆದ ಧಾರ್ಮಿಕ ಕೇಂದ್ರಗಳು 450 ರೂ. ಶುಲ್ಕ ಪಾವತಿಸಬೇಕಿದೆ.

ಹಿಂದೂ ಸಂಘಟನೆಗಳು ಮಸೀದಿಗಳಲ್ಲಿನ ಆಜಾನ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಮಸೀದಿ, ದೇವಸ್ಥಾನ, ಚರ್ಚ್‌ಗಳಲ್ಲಿ ಲೌಡ್ ಸ್ಪೀಕರ್ ಬಳಕೆ ನಿಷೇಧಿಸಬೇಕು ಹಾಗೂ ಧ್ವನಿವರ್ಧಕ ಬಳಕೆಯ ನಿಯಮ ರೂಪಿಸಬೇಕು ಎಂದು ಚರ್ಚೆಗಳು ನಡೆದಿದ್ದವು.

ಚನ್ನಪಟ್ಟಣದಲ್ಲಿ ಮಾತ್ರ ಸ್ಪರ್ಧೆ: ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಲ್ಲ



ಚನ್ನಪಟ್ಟಣ, ಅ.22– ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ, ತಾವು ಚನ್ನಪಟ್ಟಣ ಕ್ಷೇತ್ರ ಬಿಟ್ಟು ಹೋಗುವುದಿಲ್ಲ. ಅಲ್ಲಿಂದಲೇ ಸ್ಪರ್ಧೆ ಮಾಡುತ್ತೇನೆ ಎಂದು ಘೋಷಣೆ ಮಾಡಿದ್ದಾರೆ. ಚನ್ನಪಟ್ಟಣದಲ್ಲಿ ಇಂದು ಅಲ್ಪಸಂಖ್ಯಾತರ ಘಟಕದ ಕಚೇರಿ ಉದ್ಘಾಟನೆ ನೆರವೇರಿಸಿದ ನಂತರ ಅವರು ಮಾಧ್ಯಮಗಳ ಜತೆ ಮಾತನಾಡಿದರು. ಹಲವಾರು ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡುವಂತೆ ನಮ್ಮ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಕರೆಯುತ್ತಿದ್ದಾರೆ. ಆದರೆ ನಾನು ಚನ್ನಪಟ್ಟಣದಿಂದಲೇ ▶ 8ನೇ ಪುಟಕ್ಕೆ

ದೀಪಾವಳಿ ಅಂಗವಾಗಿ ಫೋಟೊ ಸ್ಟುಡಿಯೋ ಬೋರ್ಡ್ ಸ್ವಚ್ಛಗೊಳಿಸುವ ವೇಳೆ ದುರಂತ

ವಿದ್ಯುತ್ ತಂತಿ ತಗುಲಿ ಫೋಟೋಗ್ರಾಫರ್ ಸಾವು

ಮದ್ದೂರು, ಅ.22– ತಾಲೂಕಿನ ಬೆಸಗರಹಳ್ಳಿ ಗ್ರಾಮದಲ್ಲಿ ವಿದ್ಯುತ್ ಅವಘಡ ಸಂಭವಿಸಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಶನಿವಾರ ಮಧ್ಯಾಹ್ನ ಸಂಭವಿಸಿದೆ.

ಮರಳಿಗ ಗ್ರಾಮದ ರಾಮೇಗೌಡ–ಜಯಲಕ್ಷ್ಮಮ್ಮ ಅವರ ಪುತ್ರ ಎಂ.ಆರ್. ವಿವೇಕ(42) ಹಾಗೂ ತಾಲೂಕಿನ ಗೆಜ್ಜಲಗೆರೆ ಗ್ರಾಮದ ಜಿ.ಕೆ.ಶಿವಣ್ಣ–ಅನ್ನಪೂರ್ಣ ದಂಪತಿ ಪುತ್ರ ಜಿ.ಎಸ್. ಮಧುಕುಮಾರ್ (27) ದುರಂತ ಸಾವಿಗೀಡಾದವರು. ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಬೆಸಗರಹಳ್ಳಿ ಗ್ರಾಮದಲ್ಲಿರುವ ಲಕ್ಷ್ಮಿ ಫೋಟೋ ಸ್ಟುಡಿಯೋ ಸ್ವಚ್ಛಗೊಳಿಸಿದ ನಂತರ ನಾಮಫಲಕವನ್ನು ಶುದ್ಧಿಗೊಳಿಸಿ, ಅದನ್ನು ಅಂಗಡಿಯ ಮೇಲೆ ಅಳವಡಿಸಲು ಹೋದ ಸಂದರ್ಭದಲ್ಲಿ ಪಕ್ಕದಲ್ಲೇ ಹಾದು ಹೋಗಿದ್ದ ವಿದ್ಯುತ್ ತಂತಿ ▶ 8ನೇ ಪುಟಕ್ಕೆ



ವಿವೇಕ್



ಮಧುಕುಮಾರ್

ಭಾರೀ ಆಕ್ರೋಶದ ಹಿನ್ನೆಲೆಯಲ್ಲಿ ಮಕ್ಕಳ ಪಾಲಕರಿಂದ ದೇಣಿಗೆ ಸಂಗ್ರಹಿಸುವ ಸುತ್ತೋಲೆ ಹಿಂದಕ್ಕೆ

ಬೆಂಗಳೂರು, ಅ.22–ವ್ಯಾಪಕ ಆಕ್ರೋಶ ವ್ಯಕ್ತವಾದ ಕಾರಣ ಸರ್ಕಾರಿ ಶಾಲೆ ಮಕ್ಕಳ ಪಾಲಕರಿಂದ ದೇಣಿಗೆ ಸಂಗ್ರಹಿಸಲು ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಹೊರಡಿಸಿದ್ದ ಸುತ್ತೋಲೆಯನ್ನು ಇಂದು ಸಂಜೆ ಹಿಂಪಡೆಯಲಾಗಿದೆ.

ಸರ್ಕಾರಿ ಶಾಲೆಗಳ ಅಭಿವೃದ್ಧಿ ಹಾಗೂ ನಿರ್ವಹಣೆಗಾಗಿ ಪ್ರತೀ ತಿಂಗಳು ಮಕ್ಕಳ ಪಾಲಕರಿಂದ 100 ರೂ. ದೇಣಿಗೆಯನ್ನು ಎಸ್‌ಡಿಎಂಸಿಗಳು ಸಂಗ್ರಹಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಅ.19ರಂದು ಸುತ್ತೋಲೆ ಹೊರಡಿಸಿದ್ದರು. ಈ ಸುತ್ತೋಲೆ ವಿಚಾರವಾಗಿ ರಾಜ್ಯಾದ್ಯಂತ ▶ 8ನೇ ಪುಟಕ್ಕೆ

ಕೆಆರ್‌ಎಸ್ ಬೃಂದಾವನದಲ್ಲಿ ಚಿರತೆ ಪ್ರತ್ಯಕ್ಷ

● ಪ್ರವಾಸಿಗರಿಗೆ ಪ್ರವೇಶ ನಿರ್ಬಂಧ ● ಚಿರತೆ ಸೆರೆಗೆ ಬೋನ್ ಇರಿಸಿದ ಅಧಿಕಾರಿಗಳು



ಕೆಆರ್‌ಎಸ್‌ನಲ್ಲಿ ಬ್ಯಾರಿಕೇಡ್ ಅಳವಡಿಸಿ ಪ್ರವೇಶ ನಿರ್ಬಂಧ

ವಿನಯ್ ಕಾರೇಕುರ

ಶ್ರೀರಂಗಪಟ್ಟಣ, ಅ.22–ತಾಲೂಕಿನ ಕೆಆರ್‌ಎಸ್ ಅಣೆಕಟ್ಟೆ ಹಾಗೂ ಬೃಂದಾವನ ಉದ್ಯಾನವನ ವ್ಯಾಪ್ತಿಯಲ್ಲಿ ಚಿರತೆ ಪ್ರತ್ಯಕ್ಷವಾಗಿದ್ದು, ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಬೃಂದಾವನ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದೆ. ಶನಿವಾರ ಮಧ್ಯಾಹ್ನ 12 ಗಂಟೆ ಸಮಯದಲ್ಲಿ ನಿಗಮದ ಕೆಲಸಗಾರರು ಅಣೆಕಟ್ಟೆ ಬಳಿ ಗಿಡ–ಗಂಟಿ ತೆರವು ಮಾಡುತ್ತಿದ್ದ ವೇಳೆ ಅಣೆಕಟ್ಟೆಯ ದಕ್ಷಿಣ ದ್ವಾರದ ಬಳಿಯ ನಗುವನ ತೋಟದಿಂದ ಅಣೆಕಟ್ಟೆ ಮೇಲ್ಭಾಗದ ಸೌತ್ ಗೇಟ್ ಮೂಲಕ ಚಿರತೆ ಬರುತ್ತಿರುವುದನ್ನು ಗಮನಿಸಿ, ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳು ಹಾಗೂ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ ಸಿಬ್ಬಂದಿಗೆ ಮಾಹಿತಿ ನೀಡಿದ್ದಾರೆ.

ಸ್ಥಳಕ್ಕೆ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ ಉಸ್ತುವಾರಿ ಅಧಿಕಾರಿ ಸಂತೋಷ್ ಆಗಮಿಸಿ, ಪರಿಶೀಲನೆ ನಡೆಸಿದಾಗ ಚಿರತೆಯ ಹೆಜ್ಜೆ ಗುರುತು ಕಂಡು ಬಂದಿದೆ. ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ತಕ್ಷಣ ಬೃಂದಾವನ ಪ್ರವೇಶಕ್ಕೆ ನಿರ್ಬಂಧ ವಿಧಿಸಿರುವುದಾಗಿ ನಿಗಮದ ಸಹಾಯಕ ಕಾರ್ಯಪಾಲಕ ಅಭಿಯಂತರ ಫಾರೂಕ್ ಅಬು ತಿಳಿಸಿದ್ದಾರೆ.


ಅಣೆಕಟ್ಟೆಯ ಎರಡು ಕಡೆಯ ಮೇಲ್ಭಾಗದಲ್ಲಿ ಪ್ರವಾಸಿಗರು ಒಳಗೆ ಬಾರದಂತೆ ಸಿಬ್ಬಂದಿ ವಾಪಸ್ ಕಳುಹಿಸುತ್ತಿದ್ದ ದೃಶ್ಯ ಕಂಡು ಬಂದಿತು. ಪ್ರವಾಸಿಗರು ಒಂದೇ ಬಾರಿಗೆ ಹಿಂದಿರುಗಿದ್ದರಿಂದ ನೂಕು–ನುಗ್ಗಲು ಉಂಟಾಗಿ ಹೆದ್ದಾರಿಯಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗಿ ಸವಾರು ಪರದಾಡುವ ಸ್ಥಿತಿ ನಿರ್ಮಾಣವಾಗಿತ್ತು. ಚಿರತೆ ಬಗ್ಗೆ ಶ್ರೀರಂಗಪಟ್ಟಣ ವಲಯ ಅರಣ್ಯ ಅಧಿಕಾರಿಗೆ, ಸ್ಥಳೀಯ ಅಧಿಕಾರಿಗಳು ಮಾಹಿತಿ ನೀಡಿದ ಮೇರೆಗೆ ಸ್ಥಳಕ್ಕೆ ಆಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ, ಚಿರತೆ ಸೆರೆ ಹಿಡಿಯಲು ರಾಯಲ್ ಆರ್ಕಿಡ್ ಬಳಿ ಬೋನ್ ಇರಿಸಿದ್ದಾರೆ.

ಆದಾಯಕ್ಕೆ ಕುತ್ತು: ಸಾಲು ಸಾಲು ರಜೆಗಳಿಂದ ನಿತ್ಯ ಸಾವಿರಾರು ಜನ ▶ 8ನೇ ಪುಟಕ್ಕೆ

> “ಸುಮಾರು 12 ಘಂಟೆ ಸುಮಾರಿಗೆ ಗೇಟ್ ನಂ.14ರ ಬಳಿ ಗಿಡ ಕೀಳುವ ಸಂದರ್ಭದಲ್ಲಿ ಭಾರೀ ಚಿರತೆಯೊಂದು ಬರುತ್ತಿತ್ತು. ಈ ವೇಳೆ ನಾನು ಸದ್ದು ಮಾಡದೆ ಕೆಲಸ ಮಾಡುವ ಸ್ಥಳದಲ್ಲೇ ಅಡಗಿ ಕುಳಿತೆ. ಆ ಚಿರತೆ ಅಲ್ಲಿಂದ ನಾರ್ತ್ ಗೇಟ್ ಕಡೆ ಹೋಗಿ, ನಂತರ ರಾಯಲ್ ಆರ್ಕಿಡ್ ಹೋಟೆಲ್ ಹಿಂಭಾಗ ಬೃಹದಾಕಾರವಾಗಿ ಬೆಳೆದಿರುವ ಗಿಡ–ಗಂಟಿಗಳ ಪೊದೆ ಸೇರಿತು. –ಚಂದ್ರು, ನೌಕರ.



ಚಿರತೆ ಸೆರೆಗೆ ಬೋನ್ ಅಳವಡಿಸುತ್ತಿರುವುದು



(ಸಂಗ್ರಹ ಚಿತ್ರ)

ವರದಾಚಾರ್ಯರ ಶತಮಾನೋತ್ಸವ ಕಾರ್ಯಕ್ರಮಕ್ಕೆ ಚಾಲನೆ; ಅಪಾರ ವಿದ್ವತ್‌ಪೂರ್ಣ ಕೊಡುಗೆ ನೀಡಿದ

ಕೆ.ಎಸ್.ವರದಾಚಾರ್ಯರ ಸಮನ್ವಯ ದೃಷ್ಟಿಯಲ್ಲಿ ರಾಷ್ಟ್ರಹಿತದ ಕಲ್ಪನೆ ಇತ್ತು

'ಸಮನ್ವಯ ವರದ' ಸಂಸ್ಮರಣ ಗ್ರಂಥ ಬಿಡುಗಡೆಗೊಳಿಸಿ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿಮತ



ಮೈಸೂರಿನ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಪಂಡಿತರತ್ನಂ ಕೆ.ಎಸ್.ವರದಾಚಾರ್ಯರ 2 ದಿನಗಳ ಶತಮಾನೋತ್ಸವ ಸಮಾರಂಭಕ್ಕೆ ಚಾಲನೆ ನೀಡಲಾಯಿತು.

ಮೈಸೂರು,ಅ.22(ಪಿಎಂ)–ನಮ್ಮ ಸಮಾಜಕ್ಕೆ ಅಪಾರ ವಿದ್ವತ್‌ಪೂರ್ಣ ಕೊಡುಗೆ ನೀಡಿದ ಕೆ.ಎಸ್.ವರದಾಚಾರ್ಯರ ಸಮನ್ವಯ ದೃಷ್ಟಿಯಲ್ಲಿ ರಾಷ್ಟ್ರಹಿತದ ಕಲ್ಪನೆ ಇತ್ತು ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿಪ್ರಾಯಪಟ್ಟರು.

ಮೈಸೂರಿನ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಪಂಡಿತರತ್ನಂ ಕೆ.ಎಸ್.ವರದಾಚಾರ್ಯ ಶತಮಾನೋತ್ಸವ ಸಮಿತಿ ವತಿಯಿಂದ ಹಮ್ಮಿಕೊಂಡಿರುವ ಎರಡು ದಿನಗಳ ಕೆ.ಎಸ್.ವರದಾಚಾರ್ಯ ಶತಮಾನೋತ್ಸವ ಸಮಾರಂಭ ಹಾಗೂ ವಿಚಾರಗೋಷ್ಠಿಯ ಉದ್ಘಾಟನೆಯಲ್ಲಿ ಶನಿವಾರ 'ಸಮನ್ವಯ ವರದ' ಸಂಸ್ಮರಣ ಗ್ರಂಥ ಬಿಡುಗಡೆಗೊಳಿಸಿ, ಮಾತನಾಡಿದರು.

ಕೆ.ಎಸ್.ವರದಾಚಾರ್ಯ ಅವರಂತಹ ವಿದ್ವಾಂಸರ ಶತಮಾನೋತ್ಸವ ಏರ್ಪಡಿಸಿರುವುದು ಸ್ವಾಗತಾರ್ಹ. ಅವರ ವಿಚಾರಗಳನ್ನು ಹಸಿರಾಗಿಡಲು ಈ ಕಾರ್ಯಕ್ರಮ ಪೂರಕವಾಗಲಿದೆ. ಒಂದು ಸಕ್ರಿಯ ಸಮಾಜದ ಲಕ್ಷಣವೇ ಇಂತಹ ಕಾರ್ಯಕ್ರಮಗಳು. ಅಲ್ಲದೆ ವರದಾಚಾರ್ಯರ ಸಾಧನೆಗಳು ಮುಂದಿನ ಪೀಳಿಗೆಗೆ ಪ್ರೇರಣೆಯಾಗಲು ಇಂತಹ ಕಾರ್ಯಕ್ರಮಗಳು ಅಗತ್ಯ. ಈ ಕಾರ್ಯಕ್ರಮದ ಮೂಲಕ ವರದಾಚಾರ್ಯರ ಜ್ಞಾನದ ಬೆಳಕನ್ನು ನಾಡಿಗೆ ತಿಳಿಸುವ ಪ್ರಯತ್ನ ಆಗುತ್ತಿದ್ದು, ಇದು ಪ್ರಶಂಸನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮೈಸೂರು ಮಹಾರಾಜರ ಸ್ಮರಣೆ: 'ಸಮನ್ವಯ ವರದ' ಗ್ರಂಥದಲ್ಲಿ ವಿದ್ವತ್‌ಪೂರ್ಣ ಲೇಖನಗಳಿವೆ. ಇದು ನಿಶ್ಚಿತವಾಗಿ ಅದ್ಭುತ ಕೊಡುಗೆಯಾಗಲಿದೆ. ಮೈಸೂರಿನಲ್ಲಿ ವಿದ್ವತ್ ಪರಂಪರೆ, ಜ್ಞಾನದ ಸಂಪತ್ತು ವೃದ್ಧಿಸಲು ಮೈಸೂರು ರಾಜಮನೆತನ ಅಪಾರ ಕೊಡುಗೆ ನೀಡಿದ್ದು, ಇದನ್ನು ನಾವು ಸ್ಮರಿಸಿಕೊಳ್ಳಬೇಕು. ಮೈಸೂರು ಮಹಾರಾಜರು ವಿದ್ವಾಂಸರಿಗೆ ರಾಜಾಶ್ರಯ ನೀಡಿದ್ದರಿಂದಲೇ ನಮ್ಮ ಸನಾತನ ಹಿಂದೂ ಧರ್ಮ ಹಾಗೂ ಸನಾತನ ಸಂಸ್ಕೃತಿಯ ರಕ್ಷಣೆಯಾಗಿದೆ ಎಂದು ನುಡಿದರು.

ಜಗತ್ತಿಗೆ ಜ್ಞಾನ ನೀಡುವ ಉನ್ನತ ಸ್ಥಿತಿಯಲ್ಲಿ ಭಾರತ: ಪರಕೀಯರು ದಾಳಿ ನಡೆಸಿ, ನಮ್ಮ ಪುಸ್ತಕಗಳನ್ನು ಸುಟ್ಟಿರಬಹುದು. ವೈಭವವನ್ನು ದೋಚಿ, ನಮ್ಮ ಧಾರ್ಮಿಕ ಕೇಂದ್ರಗಳನ್ನು ಧ್ವಂಸಗೊಳಿಸಿರಬಹುದು. ಆದರೆ ಅವರಿಂದ ನಮ್ಮ ನಂಬಿಕೆ–ಜ್ಞಾನ ಕಸಿಯಲು ಸಾಧ್ಯವಾಗಿಲ್ಲ. ಹಾಗಾಗಿ ಇಂದಿಗೂ ಜಗತ್ತಿಗೆ ಜ್ಞಾನ ಕೊಡುವಂತಹ ಉನ್ನತ ಸ್ಥಿತಿಯಲ್ಲಿ ಭಾರತವಿದೆ. ಇಡೀ ಜಗತ್ತೇ ಇಂದು ಭಾರತದತ್ತ ನೋಡುತ್ತಿದೆ ಎಂದರು.

ನಾನು ಇತ್ತೀಚೆಗೆ ಕೆನಡಾಗೆ ಭೇಟಿ ನೀಡಿದ್ದೆ. ವಿವಿಧ ದೇಶಗಳ ಆಯಾಯ ರಾಷ್ಟ್ರಗಳ ಸಂವಿಧಾನದತ್ತ ಜವಾಬ್ದಾರಿ ಹೊಂದಿರುವವರು ಅಲ್ಲಿ ಸೇರಿದ್ದರು. ಇಲ್ಲಿ ನಾನು ಅನೇಕ ದೇಶಗಳ ಪ್ರತಿನಿಧಿಗಳೊಂದಿಗೆ ಮಾತನಾಡಿದಾಗ, ಅವರೆಲ್ಲರೂ 'ಜಗತ್ತಿಗಿಂದು ಭಾರತದ ನೇತೃತ್ವ ಅಗತ್ಯವಿದ್ದು, ನರೇಂದ್ರ ಮೋದಿಯವರ ನಾಯಕತ್ವ ಬೇಕಾಗಿದೆ' ಎಂದರು. ಯಾವುದೇ ರಾಜಕೀಯ ಉದ್ದೇಶ ಹಾಗೂ ಕಪಟತನವಿಲ್ಲದೆ ಹೇಳಿದ ಮಾತು ಇದಾಗಿತ್ತು ಎಂದು ಹೇಳಿದರು.

ಹಣ ಗಳಿಕೆ ಶಿಕ್ಷಣವಷ್ಟೇ ಇದೆ: ನಮ್ಮಲ್ಲಿದ್ದ ಬ್ರಿಟಿಷರ ಶಿಕ್ಷಣ ವ್ಯವಸ್ಥೆಯಿಂದ ಸ್ವಾತಂತ್ರ್ಯ ನಂತರದಲ್ಲೂ ಅದೇ ಮನಸ್ಥಿತಿಯ ಆಡಳಿತ ಬಹುಕಾಲ ನಡೆದ ಪರಿಣಾಮವಾಗಿ ನಮಗೆ ಹಣ ಗಳಿಕೆ ಶಿಕ್ಷಣವೇ ಸಿಕ್ಕಿದೆ ಹೊರತು, ಜ್ಞಾನ ಗಳಿಕೆ ಶಿಕ್ಷಣ ದೊರೆಯಲು ಸಾಧ್ಯವಾಗಲಿಲ್ಲ. ಇದೀಗ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಅನೇಕ ಒಳ್ಳೆಯ ಸಂಗತಿಗಳು ಶಿಕ್ಷಣ ವ್ಯವಸ್ಥೆಯಲ್ಲಿ ಅಳವಡಿಸಲಾಗಿದೆ ಎಂದು ತಿಳಿಸಿದರು.

ನಾವೀಗ ಈ ರೀತಿಯ ಹಿರಿಯರನ್ನು ಸ್ಮರಿಸಿಕೊಳ್ಳುವ ಮೂಲಕ ನಮ್ಮ ಮೇಲಿನ ಜವಾಬ್ದಾರಿ ಅರಿಯಬೇಕಿದೆ. ಜಗತ್ತು ಶಾಂತಿ–ಸೌಹಾರ್ದತೆಗಾಗಿ ಹುಡುಕುತ್ತಿರುವಾಗ ನಾವು ಕೇವಲ ಹಣ ಗಳಿಕೆ ಶಿಕ್ಷಣ ಪಡೆಯಲು ಮುಂದಾದರೆ ಅದು ಅಪಾಯಕಾರಿ ಆಗಲಿದೆ. ಬ್ರಿಟಿಷರು ನಮ್ಮನ್ನು ನಾಶ ಮಾಡಲು ಈ ವ್ಯವಸ್ಥೆ ತಂದರು. ನಾವು ಪರಿವರ್ತನೆ ತರಬೇಕು. ನೂತನ ರಾಷ್ಟ್ರೀಯ ಶಿಕ್ಷಣ ನೀತಿ ಮೂಲಕ ಹತ್ತಾರು ದೃಷ್ಟಿಕೋನದಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆ ಸರಿಪಡಿಸಲಾಗುತ್ತಿದೆ. ಆ ಮೂಲಕ ನೈತಿಕ ಶಿಕ್ಷಣದ ಮೌಲ್ಯ ಹೆಚ್ಚಿಸಲು ಮುಂದಾಗಲಾಗಿದೆ. ಕಠಿಣ ಪರಿಶ್ರಮದ ಶಿಕ್ಷಣ ದೊರೆತಾಗಲೇ ಜ್ಞಾನಾರ್ಜನೆ ಆಗಲು ಸಾಧ್ಯ. ಅಂತಹ ಶಿಕ್ಷಣ ವರದಾಚಾರ್ಯರಿಗೆ ಸಿಕ್ಕಿತ್ತು. ನಾವು ಅವರನ್ನು ಸ್ಮರಿಸುವ ಮೂಲಕ ಅವರ ದಾರಿಯಲ್ಲಿ ಮುನ್ನಡೆಯಬೇಕಿದೆ ಎಂದರು.

ಸುಸಂಸ್ಕೃತ ಭಾರತಕ್ಕೆ ಪೂರಕ ಸಾಹಿತ್ಯ ಸೃಷ್ಟಿ: ಕೆ.ಎಸ್.ವರದಾಚಾರ್ಯರ ಭಾವಚಿತ್ರ ಅನಾವರಣಗೊಳಿಸಿದ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮಾತನಾಡಿ, ಯಾವುದೋ ಜನ್ಮದ ಪುಣ್ಯದ ಫಲವಾಗಿ ಶ್ರೇಷ್ಠ ವ್ಯಕ್ತಿತ್ವದ ವರದಾಚಾರ್ಯರ ಫೋಟೋ ಅನಾವರಣಗೊಳಿಸುವ ಅವಕಾಶ ದೊರೆಯಿತು. ಶ್ರೇಷ್ಠ ಜೀವನ ನಡೆಸಿ, ಪಾಂಡಿತ್ಯವನ್ನು ಮುಂದಿನ ಸಮಾಜಕ್ಕೂ ತೆಗೆದುಕೊಂಡು ಹೋಗಬೇಕೆಂಬ ನಿಟ್ಟಿನಲ್ಲಿ ಅನೇಕ ಶಿಷ್ಯರನ್ನು ತಯಾರು ಮಾಡಿದವರು ವರದಾಚಾರ್ಯರು. ಅವರು ಸುಸಂಸ್ಕೃತ ಭಾರತ ನಿರ್ಮಾಣಕ್ಕೆ ಅಗತ್ಯವಾದ ಸಾಹಿತ್ಯ ರಚಿಸಿದ್ದಾರೆ ಎಂದು ಸ್ಮರಿಸಿದರು.

ಸಾನ್ನಿಧ್ಯ ವಹಿಸಿದ್ದ ಶಿರಸಿಯ ಸೋಂದಾದ ಶ್ರೀ ಸ್ವರ್ಣವಲ್ಲಿ ಮಹಾ ಸಂಸ್ಥಾನದ ಶ್ರೀ ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ ಮಾತನಾಡಿ, ಮೈಸೂರಿನಲ್ಲಿ ಇರುವಂತಹ ವಿದ್ವತ್ ಪರಂಪರೆಯನ್ನು ಬೇರೆಲ್ಲೂ ಕಾಣಲಾಗದು. ರಾಜಾಶ್ರಯದ ಉತ್ತೇಜನದಿಂದ ಇಲ್ಲಿ ಸುದೀರ್ಘವಾದ ವಿದ್ವತ್ ಪರಂಪರೆ ಇದ್ದು, ಅಂತಹ ಪರಂಪರೆಯ ಮೊದಲಿನ ವೈಭವ ಕಂಡು ಬರುತ್ತಿಲ್ಲ. ಅದು ಮತ್ತೆ ಮರುಕಳಿಸಬೇಕಿದೆ ಎಂದರು.

ಕೆ.ಎಸ್.ವರದಾಚಾರ್ಯರ ಪ್ರಭಾವ ಉತ್ತರ ಭಾರತದಲ್ಲೂ ಇತ್ತು. ಅವರ ಸಮನ್ವಯ ದೃಷ್ಟಿ ಸರಳವಾಗಿತ್ತು. ಸಂಘರ್ಷ ಆಗದ ಸಮನ್ವಯ ಚಿಂತನೆಯನ್ನು ಅವರ ಜೀವನದ ಉದ್ದಕ್ಕೂ ಕಾಣಬಹುದು. ಸರಳ–ಸಜ್ಜನಿಕೆಯ ಆಧ್ಯಾತ್ಮ ಜೀವಿ ವಿದ್ವಾಂಸರಾದ ವರದಾಚಾರ್ಯರ ಕೊಡುಗೆ ದಾಖಲಾಗಬೇಕು. ಹೊಸ ತಲೆಮಾರಿಗೆ ಅವರು ಪ್ರೇರಣೆಯಾಗಲಿದ್ದಾರೆ. ಆ ಮೂಲಕ ಅಂತಹ ವ್ಯಕ್ತಿತ್ವ ಮತ್ತೆ ಹುಟ್ಟಿ ಬರಬಹುದು. ಇದರಿಂದ ಸಮಾಜಕ್ಕೆ ಅನುಕೂಲವಾಗಲಿದ್ದು, ವಿಶೇಷವಾಗಿ ಧಾರ್ಮಿಕ ಕ್ಷೇತ್ರಕ್ಕೆ ಹೆಚ್ಚು ಉಪಕಾರವಾಗಲಿದೆ ಎಂದು ಹೇಳಿದರು.

ಇದಕ್ಕೂ ಮುನ್ನ ನವದೆಹಲಿಯ ರಾಷ್ಟ್ರೀಯ ಸಂಸ್ಕೃತ ಸಂಸ್ಥಾನದ ವಿಶ್ರಾಂತ ಕುಲಪತಿ ವಿದ್ವಾನ್ ಡಾ.ಪರಮೇಶ್ವರ ನಾರಾಯಣಶಾಸ್ತ್ರಿ, ತಿರುಪತಿಯ ರಾಷ್ಟ್ರೀಯ ಸಂಸ್ಕೃತ ವಿವಿ ಸಾಹಿತ್ಯ ವಿಭಾಗದ ಮುಖ್ಯಸ್ಥ ನಿರ್ದೇಶಕ ವಿದ್ವಾನ್ ಡಾ.ಚಕ್ರವರ್ತಿ ರಂಗನಾಥನ್ ಅವರನ್ನು ಸನ್ಮಾನಿಸಲಾಯಿತು. ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಮೇಲುಕೋಟೆಯ ವಂಗೀಪುರಂನ ನಂಬಿಮಠದ ಶ್ರೀ ಇಳೈ ಆಳ್ವಾರ್ ಸ್ವಾಮೀಜಿ, ಸಚಿವ ಎಸ್.ಟಿ.ಸೋಮಶೇಖರ್, ಸಂಸದ ಪ್ರತಾಪ್‌ಸಿಂಹ, ಶಾಸಕ ಎಸ್.ಎ.ರಾಮದಾಸ್, ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಹೆಚ್.ಎಸ್.ಸಚ್ಚಿದಾನಂದಮೂರ್ತಿ, ಜಿಲ್ಲಾ ಬ್ರಾಹ್ಮಣರ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಸಂಸ್ಕೃತ ವಿದ್ವಾಂಸ ಹಾಗೂ ಸಮನ್ವಯ ವರದ ಗ್ರಂಥ ಪ್ರಧಾನ ಸಂಪಾದಕ ಡಾ.ಹೆಚ್.ವಿ. ನಾಗರಾಜರಾವ್, ಮೈಸೂರು ವಿವಿ ಓಆರ್‌ಐನ ನಿವೃತ್ತ ಉಪನಿರ್ದೇಶಕ ವಿದ್ವಾನ್ ಡಾ.ಟಿ.ವಿ. ಸತ್ಯನಾರಾಯಣ ಮತ್ತಿತರರು ಹಾಜರಿದ್ದರು.

ಧರ್ಮ–ಜಾತಿಗಿಂತ ದೇಶ ಮೊದಲಾಗಲಿ; ಕಾಗೇರಿ

ಮೈಸೂರು: ನಮ್ಮ ಧರ್ಮ, ಜಾತಿ, ಉಪಜಾತಿ, ನಂಬಿಕೆ ಮತ್ತು ಭಕ್ತಿಯ ವಿಷಯಗಳು ದೇಶಕ್ಕಿಂತಲೂ ಮೊದಲಾದರೆ ದೇಶ ಅಪಾಯಕ್ಕೆ ಸಿಲುಕಲಿದೆ ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಭಿಪ್ರಾಯಪಟ್ಟರು.

ಕೆ.ಎಸ್.ವರದಾಚಾರ್ಯ ಶತಮಾನೋತ್ಸವದಲ್ಲಿ ಮಾತನಾಡಿದ ಅವರು, ದೇಶ ಮೊದಲು ಎಂಬುದು ನಮ್ಮೆಲ್ಲರಲ್ಲೂ ಬರಬೇಕು. ನಮ್ಮ ಧರ್ಮ ರಕ್ಷಣೆಯನ್ನು ಹಾಗೂ ವರದಾಚಾರ್ಯ ಅವರಂತಹ ವಿದ್ವಾಂಸರ ವಿಚಾರಗಳನ್ನು ಸಮಾಜದಲ್ಲಿ ಸಕ್ರಿಯವಾಗಿರಲು ನಾವು ದೇಶ ಮೊದಲು ಎಂಬ ನಂಬಿಕೆಯಿಂದ ಇರಬೇಕು. ನಾವೆಲ್ಲರೂ ನಮ್ಮ ನಮ್ಮ ನಂಬಿಕೆ, ಆಚಾರ–ವಿಚಾರದೊಂದಿಗೆ ಸಾಗುವಾಗ ಅವುಗಳ ಜೊತೆಗೆ ದೇಶವೇ ಮೊದಲಾಗಿರಬೇಕು ಎಂದರು. ದೇಶ ಮೊದಲು ಎನ್ನಿಸದೇ ನಮ್ಮವೇ ನಮಗೆ ದೊಡ್ಡದಾದರೆ, ದೇಶದ ರಕ್ಷಣೆ ಕಷ್ಟ. ಹಾಗಾಗಿ ನಮ್ಮ ಕೆಲಸ–ಕಾರ್ಯಗಳಲ್ಲಿ ದೇಶದ ಹಿತ ಇರಬೇಕು. ಕೆ.ಎಸ್.ವರದಾಚಾರ್ಯರ ದೃಷ್ಟಿಕೋನದಲ್ಲಿಯೂ ರಾಷ್ಟ್ರದ ಹಿತವಿತ್ತು. ಹಾಗಾಗಿ ಅವರ ರಾಷ್ಟ್ರಹಿತ ಕಲ್ಪನೆಯಂತೆಯೇ ನಮ್ಮೆಲ್ಲರ ನಂಬಿಕೆಗಳ ಜೊತೆಗೆ ದೇಶವೇ ಮೊದಲಾಗಲಿ ಎಂದು ಆಶಯ ವ್ಯಕ್ತಪಡಿಸಿದರು.

ಅಂಗಾಂಗ ದಾನ ಮಾಡಿ ಸಾವಿನಲ್ಲೂ ಸಾರ್ಥಕತೆ ಮೆರೆದ ಕೆ.ಆರ್.ನಗರ ರೈತ

ಮೈಸೂರು, ಅ.22(ಆರ್‌ಕೆ)–ಅಂಗಾಂಗ ದಾನ ಮಾಡಿ ನಾಲ್ವರ ಜೀವ ಉಳಿಸಿರುವ ರೈತನೋರ್ವ ಸಾವಿನಲ್ಲೂ ಸಾರ್ಥಕತೆ ಮೆರೆದಿದ್ದಾರೆ.



ಮಹದೇವ

ಮೈಸೂರು ಜಿಲ್ಲೆ, ಕೆ.ಆರ್.ನಗರ ತಾಲೂಕಿನ ಸಾಲಿಗ್ರಾಮ ಬಳಿಯ ಲಕ್ಷ್ಮೀಪುರ ಗ್ರಾಮದ ಮಹದೇವ (45), ಅಂಗಾಂಗ ದಾನ ಮಾಡಿ ಜೀವನ್ಮರಣ ಸ್ಥಿತಿಯಲ್ಲಿದ್ದ ನಾಲ್ವರ ಜೀವ ಉಳಿಸಿ ಸಾವಿನಲ್ಲೂ ಸಾರ್ಥಕತೆ ಮೆರೆದು ಮಾನವೀಯ ಮೌಲ್ಯ ಎತ್ತಿ ಹಿಡಿದಿದ್ದಾರೆ. ಬಡ ಕುಟುಂಬದಿಂದ ಬಂದವರಾದ ಮಹದೇವ ವೃತ್ತಿಯಲ್ಲಿ ಬೇಸಾಯಗಾರನಾಗಿದ್ದು, ಪತ್ನಿ ಮತ್ತು ಇಬ್ಬರು ಪುತ್ರರೊಂದಿಗೆ ಜೀವನ ನಡೆಸುತ್ತಿದ್ದರು.

ಅಕ್ಟೋಬರ್ 20ರಂದು ಕೃಷಿ ಭೂಮಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಆಯತಪ್ಪಿ ಬಿದ್ದಿದ್ದ ಅವರ ತಲೆಗೆ ತೀವ್ರ ಗಾಯವಾಗಿತ್ತು. ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಮಹದೇವರನ್ನು ತಕ್ಷಣ ಸಾಲಿಗ್ರಾಮ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ನಂತರ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಚಿಕಿತ್ಸೆಗೆ ಸ್ಪಂದಿಸದ ಕಾರಣ ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಅಕ್ಟೋಬರ್ 21ರಂದು ಬೆಂಗಳೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (BMC & RI)ಯ ಟ್ರಾಮಾ ಮತ್ತು ತುರ್ತು ಚಿಕಿತ್ಸಾ ಕೇಂದ್ರಕ್ಕೆ ದಾಖಲಿಸಲಾಗಿತ್ತು. ತಜ್ಞ ವೈದ್ಯರ ತಂಡ ನೀಡಿದ ಚಿಕಿತ್ಸೆ ಫಲಕಾರಿಯಾಗದೇ ಮಹದೇವ ಅವರ ಮೆದುಳು ನಿಷ್ಕ್ರೀಯಗೊಂಡಿತ್ತು. ನಂತರ ವೈದ್ಯರು ಅಂಗಾಂಗ ದಾನದ ಬಗ್ಗೆ ಕುಟುಂಬದವರೊಂದಿಗೆ ಸಮಾಲೋಚನೆ ನಡೆಸಿದಾಗ ಮಹದೇವ ಅವರ ಬಹು ಅಂಗಾಂಗ ದಾನ ಮಾಡಲು ಪತ್ನಿ ಮತ್ತು ಮಕ್ಕಳು ಸಮ್ಮತಿಸಿದ ಹಿನ್ನೆಲೆಯಲ್ಲಿ ಶಿಷ್ಟಾಚಾರದ ಪ್ರಕಾರ ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಲಾಯಿತು. ಅವರ 2 ಕಿಡ್ನಿ, ಹೃದಯ ಕವಾಟಗಳು ಹಾಗೂ ಕಾರ್ನಿಯಾವನ್ನು ಬೆಂಗಳೂರಿನ ನಾಲ್ವರು ರೋಗಿಗಳಿಗೆ ಅಳವಡಿಸಲು ಕ್ರಮ ವಹಿಸಲಾಯಿತು. ನಂತರ ಮಹದೇವ ಅವರ ಮೃತದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು. ಟ್ರಾಮಾ ಕೇರ್ ಸೆಂಟರ್‌ನ ವಿಶೇಷಾಧಿಕಾರಿ ಡಾ. ಎಸ್.ದೀಪಕ್, ವೈದ್ಯರ ತಂಡ, ನರ್ಸಿಂಗ್ ಸಿಬ್ಬಂದಿ, ಪ್ಯಾರಾ ಮೆಡಿಕಲ್ ಟೀಂ ಅವರು ಆರ್ಗನ್ ರಿಟ್ರೈವಲ್ ಶಸ್ತ್ರಚಿಕಿತ್ಸೆಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ.

ಮುಂದಿನ ವಾರ ನೂತನ ಮೈಸೂರು ಡಿಸಿ ಡಾ.ರಾಜೇಂದ್ರ ಅಧಿಕಾರ ಸ್ವೀಕಾರ

ಮೈಸೂರು, ಅ. 22 (ಆರ್‌ಕೆ)– ಮೈಸೂರಿಗೆ ವರ್ಗಾವಣೆಯಾಗಿರುವ ನೂತನ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಅವರು ಮುಂದಿನ ವಾರ ಅಧಿಕಾರ ವಹಿಸಿಕೊಳ್ಳುವರು.



ಡಾ.ಕೆ.ವಿ.ರಾಜೇಂದ್ರ

ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಅವರನ್ನು ಸರ್ಕಾರ ಮೈಸೂರು ಜಿಲ್ಲೆಗೆ ವರ್ಗ ಮಾಡಿ ಶುಕ್ರವಾರ ಆದೇಶ ಹೊರಡಿಸಿದ್ದು, ಡಾ. ಬಗಾದಿ ಗೌತಮ್ ಅವರನ್ನು ಬೆಂಗಳೂರಿನ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ದೇಶಕರನ್ನಾಗಿ ನಿಯೋಜಿಸಿದೆ.

ಇಂದು ದೂರವಾಣಿ ಮೂಲಕ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಡಾ.ಕೆ.ವಿ.ರಾಜೇಂದ್ರ ಅವರು, ಕರಾವಳಿ ಜಿಲ್ಲೆಯಲ್ಲಿ ಕೆಲಸ ಮಾಡಿದ ನನ್ನನ್ನು ಸಾಂಸ್ಕೃತಿಕ ಹಾಗೂ ಪಾರಂಪರಿಕ ನಗರಿ ಮೈಸೂರು ಜಿಲ್ಲಾಧಿಕಾರಿಯನ್ನಾಗಿ ನಿಯೋಜಿಸಿರುವುದಕ್ಕೆ ಸಂತೋಷವಾಗಿದೆ ಎಂದರು.

ಮೈಸೂರು ಜಿಲ್ಲೆಯಲ್ಲಿ ಸೇವೆ ಸಲ್ಲಿಸಲು ನನಗೆ ಹೆಮ್ಮೆ ಎನಿಸಿದೆ. ದೀಪಾವಳಿ ಹಬ್ಬವಿರುವುದರಿಂದ ನಮ್ಮ ಸ್ವಗ್ರಾಮವಾದ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಗೆ ಹೋಗಿ ಒಂದೆರಡು ದಿನ ಇದ್ದು, ಮುಂದಿನ ವಾರ ಮೈಸೂರಿಗೆ ಬಂದು ಚಾಮುಂಡಿಬೆಟ್ಟಕ್ಕೆ ತೆರಳಿ ನಾಡಿನ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿ ದರ್ಶನ ಮಾಡಿ, ನಂತರ ಅಧಿಕಾರ ವಹಿಸಿಕೊಳ್ಳುವೆ ಎಂದು ತಿಳಿಸಿದರು.

ಎಲ್ಲಾ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು, ಸಿಬ್ಬಂದಿ, ಜಿಲ್ಲಾ ಉಸ್ತುವಾರಿ ಸಚಿವರೂ ಸೇರಿದಂತೆ ಸ್ಥಳೀಯ ಜನಪ್ರತಿನಿಧಿಗಳು, ನಾಗರಿಕರು ಹಾಗೂ ಮಾಧ್ಯಮದವರ ಸಹಕಾರದೊಂದಿಗೆ ಮೈಸೂರಿನಲ್ಲಿ ಪರಿಣಾಮಕಾರಿಯಾಗಿ ಸರ್ಕಾರದ ನಿರ್ದೇಶನದಂತೆ ಕೆಲಸ ಮಾಡುತ್ತೇನೆ. ಆ ಮೂಲಕ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿಗೆ ಸೇವೆ ಸಲ್ಲಿಸುತ್ತೇನೆ ಎಂದರು.

ಮೈಸೂರು ಜನತೆಗೆ ನಿರ್ಗಮಿತ ಡಿಸಿ ಡಾ.ಬಗಾದಿ ಗೌತಮ್ ಕೃತಜ್ಞತೆ

ಮೈಸೂರು,ಅ.22(ಆರ್‌ಕೆ)–ಕಳೆದ 16 ತಿಂಗಳ ಕಾಲ ಮೈಸೂರು ಜಿಲ್ಲಾಧಿಕಾರಿಯಾಗಿದ್ದು, ಈಗ ವರ್ಗಾವಣೆಗೊಂಡಿರುವ ಡಾ.ಬಗಾದಿ ಗೌತಮ್, ಮೈಸೂರು ಜನತೆಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಇವರನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನಿರ್ದೇಶಕರಾಗಿ ಬೆಂಗಳೂರಿಗೆ ವರ್ಗಾವಣೆ ಮಾಡಲಾಗಿದೆ. ಒಂದು ವರ್ಷ ನಾಲ್ಕು ತಿಂಗಳ ಕಾಲ ಮೈಸೂರು ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿದ ಬಗ್ಗೆ ನನಗೆ ತುಂಬಾ ಸಂತೋಷವಾಯಿತು ಎಂದು 'ಮೈಸೂರು ಮಿತ್ರ'ನಲ್ಲಿ ಸಂತಸ ವ್ಯಕ್ತಪಡಿಸಿದರು.



ಡಾ.ಬಗಾದಿ ಗೌತಮ್

ನನ್ನ ಪರಿಮಿತಿಯೊಳಗೆ ಶಕ್ತಿ ಮೀರಿ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದೇನೆಂಬ ತೃಪ್ತಿ ಇದೆ. ದೇಶದ ಘನತೆವೆತ್ತ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ, ರಾಷ್ಟ್ರೀಯ ಕಾಂಗ್ರೆಸ್ ಯುವ ನಾಯಕ ರಾಹುಲ್ ಗಾಂಧಿಯವರಂತಹ ಗಣ್ಯಾತಿಗಣ್ಯರು ಮೈಸೂರಿಗೆ ಭೇಟಿ ನೀಡಿದಾಗ ಯಾವುದೇ ಸಣ್ಣ ಲೋಪಗಳಾಗದಂತೆ ನಿರ್ವಹಣೆ ಮಾಡಿದ ಬಗ್ಗೆ ನನಗೆ ತೃಪ್ತಿ ಇದೆ ಎಂದರು.

> “ಅಧಿಕಾರ ವಹಿಸಿಕೊಂಡಾಗ ಕೋವಿಡ್ ಸಂಕಷ್ಟ ಪರಿಸ್ಥಿತಿ ಇತ್ತು. ಇದರ ಜೊತೆಗೆ ಅತಿಯಾದ ಮಳೆಯಿಂದ ಉಂಟಾದ ಹಾನಿ ನಿರ್ವಹಣೆ, ಲಕ್ಷಾಂತರ ಮಂದಿ ಸೇರುವ ದಸರಾ ಮಹೋತ್ಸವದಂತಹ ಹಲವು ಪ್ರಮುಖ ಸವಾಲುಗಳನ್ನು ಎದುರಿಸಿದ್ದೇವೆ. ಈ ಮಧ್ಯೆ ಕೆಲ ಚುನಾವಣೆಗಳು ಬಂದವು. ನಂತರ ಎದುರಾದ ಹಲವು ಗಂಭೀರ ಪರಿಸ್ಥಿತಿಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದೇವೆ.
> –ಡಾ.ಬಗಾದಿ ಗೌತಮ್

ತಾಯಿ ಚಾಮುಂಡೇಶ್ವರಿ ಕೃಪೆ, ಜಿಲ್ಲಾ ಉಸ್ತುವಾರಿ ಸಚಿವರು ಸೇರಿದಂತೆ ಎಲ್ಲಾ ಜನಪ್ರತಿನಿಧಿಗಳು, ಸಾರ್ವಜನಿಕರ ಸಹಕಾರ ಮತ್ತು ಅಧಿಕಾರಿಗಳು, ಸಿಬ್ಬಂದಿ ಶ್ರಮದಿಂದಾಗಿ ಉತ್ತಮವಾಗಿ ಸೇವೆ ಸಲ್ಲಿಸಲು ಸಾಧ್ಯವಾಯಿತು. ತಮ್ಮ ಅವಧಿಯಲ್ಲಿ ಸಹಕಾರ ನೀಡಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಡಾ.ರಾಜೇಂದ್ರ ಅವರೂ ಒಳ್ಳೆಯ ಅಧಿಕಾರಿ. ನನಗೆ ನೀಡಿದ ಸಹಕಾರವನ್ನು ಅವರಿಗೂ ನೀಡಿ, ಉತ್ತಮ ಕೆಲಸವಾಗಲು ಪ್ರೋತ್ಸಾಹಿಸಬೇಕಿದೆ ಎಂದರು.


ಕುಂಬಾರಕೊಪ್ಪಲು ಬಸವ ನಿಧನ

ಮೈಸೂರು,ಅ.21–ಕುಂಬಾರಕೊಪ್ಪಲು ಗ್ರಾಮದ ಬಸವ ಶನಿವಾರ ಬೆಳಗ್ಗೆ ಅಸುನೀಗಿದೆ. ಕಳೆದ 25 ವರ್ಷಗಳಿಂದ ಗ್ರಾಮದ ಜನತೆಯೊಂದಿಗೆ ಬೆರೆತು ಹೋಗಿದ್ದ ಬಸವ ಇಂದು ಸೂರ್ಯ ಬೇಕರಿ ಬಳಿ ವಯೋಸಹಜ ಸಾವಿಗೀಡಾಗಿದ್ದು, ಗ್ರಾಮಸ್ಥರು ಕಂಬನಿ ಮಿಡಿದಿದ್ದಾರೆ. ಬಸವನನ್ನು ಗ್ರಾಮಸ್ಥರು ದೈವ ಸ್ವರೂಪಿಯಾಗಿ ಕಾಣುತ್ತಿದ್ದರು. ಈ ಹಿನ್ನೆಲೆಯಲ್ಲಿ ಬಸವನಿಗೆ ವಿಶೇಷ ಪೂಜೆ ಸಲ್ಲಿಸಿ ಟ್ರಾಕ್ಟರ್‌ನಲ್ಲಿ ಹೆಬ್ಬಾಳಿನ ಕುವೆಂಪು ವೃತ್ತದಿಂದ ಸೂರ್ಯಬೇಕರಿ ವೃತ್ತದವರೆಗೂ ಹಾಗೂ ಕುಂಬಾರಕೊಪ್ಪಲಲ್ಲಿ ಮೆರವಣಿಗೆ ಮಾಡಿ ನಂತರ ಗ್ರಾಮದ ಮಹದೇಶ್ವರ ದೇವಾಲಯದ ಬಳಿ ಅಂತ್ಯಕ್ರಿಯೆ ನೆರವೇರಿಸಲಾಯಿತು.



ನಿಧನ


ಪತ್ರಿಕಾ ವಿತರಕ ನಾಗರಾಜು



ಮೈಸೂರು, ಅ. 22–ಮೈಸೂರಿನ ಹೆಬ್ಬಾಳ್‌ನ ಒಂದನೇ ಹಂತದ ಸುಭಾಷ್ ನಗರದ ನಿವಾಸಿ, ಪತ್ರಿಕಾ ವಿತರಕ ಎಸ್. ನಾಗರಾಜು (46) ಶುಕ್ರವಾರ ರಾತ್ರಿ ಕೆ.ಆರ್. ಆಸ್ಪತ್ರೆಯಲ್ಲಿ ಅನಾರೋಗ್ಯದಿಂದ ನಿಧನರಾದರು. ಮೃತರು ಹೆಬ್ಬಾಳ್ ಮುಖ್ಯರಸ್ತೆಯಲ್ಲಿ ಪತ್ರಿಕಾ ಸ್ಟಾಲ್ ಅನ್ನು ಹೊಂದಿದ್ದರು. ಮೃತರಿಗೆ ಪತ್ನಿ ವೇದಾ, ಪುತ್ರ, ಪುತ್ರಿ, ತಂದೆ ಸಿದ್ದರಾಜು, ತಾಯಿ, ಸಹೋದರ ಇದ್ದಾರೆ.

ನಗರಪಾಲಿಕೆ ಸದಸ್ಯರಾದ ಕೆ.ವಿ.ಶ್ರೀಧರ್, ಪೈ.ಶ್ರೀನಿವಾಸ್, ಜೆಡಿಎಸ್ ಮುಖಂಡ ಜೆ. ಮೋಹನ್ ಅಂತಿಮ ದರ್ಶನ ಪಡೆದು, ಸಂತಾಪ ಸೂಚಿಸಿದರು. ಮೃತರ ಅಂತ್ಯಸಂಸ್ಕಾರ ಶನಿವಾರ ಮಧ್ಯಾಹ್ನ ಹೆಬ್ಬಾಳಿನ ಸಿಐಟಿಬಿ ಛತ್ರದ ಬಳಿ ಇರುವ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಿರಿಜಮ್ಮ



ಮೈಸೂರಿನ ಹೆಬ್ಬಾಳ್‌ನ ಹಂಪಿ ವೃತ್ತದ ನಿವಾಸಿ ಲೇ. ಬಸಪ್ಪ ಅವರ ಪತ್ನಿ ಗಿರಿಜಮ್ಮ (65) ಗುರುವಾರ ರಾತ್ರಿ ನಿಧನರಾದರು.

ಮೃತರಿಗೆ ಓರ್ವ ಪುತ್ರ, ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಇದ್ದಾರೆ. ಅಂತ್ಯಸಂಸ್ಕಾರ ಶುಕ್ರವಾರ ಮಧ್ಯಾಹ್ನ ಬನ್ನಿಮಂಟಪದ ಜೋಡಿ ತೆಂಗಿನಮರದ ರಸ್ತೆಯಲ್ಲಿರುವ ಸ್ಮಶಾನದಲ್ಲಿ ನೆರವೇರಿತು.

ಪ್ರಮತೇಷ್



ಮೈಸೂರು ರಾಮಕೃಷ್ಣನಗರ ಐ ಬ್ಲಾಕ್ ನಿವಾಸಿ ಹಾಗೂ ನಿವೃತ್ತ ಅಬಕಾರಿ ಸಬ್ ಇನ್ಸ್‌ಪೆಕ್ಟರ್ ಪ್ರಮತೇಷ್(77) ಅವರು ಶನಿವಾರ ಸಂಜೆ ನಿಧನರಾದರು. ಇವರು ಪತ್ನಿ ಉಮಾ(ಗೌರಾಂಬ), ಪುತ್ರಿಯರಾದ ರಶ್ಮಿ, ಪ್ರತಿಮಾ ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ(ಭಾನುವಾರ) ಮಧ್ಯಾಹ್ನ 1 ಗಂಟೆಗೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ.

ಡಿ.ಆನಂದ್‌ಕುಮಾರ್

ಮೈಸೂರಿನ ಗೋಕುಲಂ ನಿವಾಸಿ ಡಿ.ಆನಂದ್ ಕುಮಾರ್(62) ಅವರು ಅನಾರೋಗ್ಯದಿಂದ ಶನಿವಾರ ನಿಧನರಾದರು. ಮೃತರು ಪತ್ನಿ, ಪುತ್ರ ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ನಾಳೆ(ಅ.23) ಬೆಳಗ್ಗೆ 11.30ಕ್ಕೆ ಗೋಕುಲಂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಮೃತರ ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.10.2022 ಭಾನುವಾರ, ಮಳೆ ನಕ್ಷತ್ರ: ಚಿತ್ತ 11.10.2022 ರಿಂದ 23.10.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ : ಉಫ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ವೈ.ಸಿ. ಜಗದೀಶ್, 6.20 ಗೀತಾರಾಧನ, 6.35 "ಬದುಕು ಮಣ್ಣಿನೊಂದಿಗೆ" ಲೇಖನ ಮತ್ತು ಪ್ರಸ್ತುತಿ– ಎ.ಪಿ. ಚಂದ್ರಶೇಖರ್, 6.40 ಅರಿವಿನ ಶಿಖರ– ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ ಸರಣಿ, ಗಾಯನ– ಸಿ. ವಿಶ್ವನಾಥ್, ಟಿ.ಎನ್. ಅಶ್ವಿನಿ, ಡಾ.ಎಂ.ಎ. ಜ್ಯೋತಿ, ವ್ಯಾಖ್ಯಾನ– ಡಾ. ಸಿ. ನಾಗಣ್ಣ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ", ಪ್ರಾಯೋಜಕರು ವಿಕಾಸ್ ಅಕಾಡೆಮಿ, ಕಲಬುರ್ಗಿ, 9.05 ರಾಷ್ಟ್ರೀಯ ಆಯುರ್ವೇದ ದಿನದ ಅಂಗವಾಗಿ ಆಯುಷ್ ಇಲಾಖೆಯ ಆಯುಕ್ತರಾದ ರಾಮಚಂದ್ರ ಅವರೊಂದಿಗೆ ವಿಶೇಷ ಸಂವಾದ, 9.40 ನಮ್ಮ ಆರೋಗ್ಯ–"ಪಟಾಕಿಗಳಿಂದ ಕಣ್ಣಿಗೆ ಆಗುವ ತೊಂದರೆ ಮತ್ತು ಚಿಕಿತ್ಸೆ ಕುರಿತು ಡಾ. ಶೇಖರ್ ರಾಜು ಎಚ್.ಎಂ.ಅವರೊಂದಿಗೆ ಮಾತುಕತೆ, 10.00 ಕೇಳಿ ಗಿಳಿಗಳೇ– ಕಥೆ ಹೇಳ್ತೀಯೋ ಹಾಡು ಹೇಳ್ತೀಯೋ, 10.30 ಮಕ್ಕಳಮಂಟಪ–ನಂದಗೋಕುಲ, ಪ್ರಸ್ತುತಿ–ಕೆ.ಬಿ. ಮೀನಾ

ಮಧ್ಯಾಹ್ನ: 12.05 ವನಿತಾ ವಿಹಾರ, 12.45 ಜನಪದ ಸಂಗೀತ – ದೊಡ್ಡಗವಿ ಬಸಪ್ಪ ಮತ್ತು ತಂಡ, 1.00 ಐ.ಸಿ.ಐ. ಟಿ–20 ವಿಶ್ವಕಪ್ ಅಂಗವಾಗಿ ಭಾರತ ಮತ್ತು ಪಾಕಿಸ್ತಾನ ತಂಡಗಳ ನಡುವೆ ಮೆಲ್ಬೋರ್ನ್‌ನಲ್ಲಿ ನಡೆಯಲಿರುವ T–20 ಕ್ರಿಕೆಟ್ ಪಂದ್ಯದ ವೀಕ್ಷಕ ವಿವರಣೆ, 9.30 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ– ದೀಕ್ಷಿತರ ರಚನೆಗಳನ್ನು ಕುರಿತ ವಿಶೇಷ ರೂಪಕ

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಗೊಂಬೆಗಳ ಪ್ರದರ್ಶನ:** ಕೆ.ಎಸ್.ರಾಘವೇಂದ್ರ ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ. ಸ್ಥಳ: ಇಂಚರ ಕಲಾ ಕ್ಷೇತ್ರ, ವಿಜಯನಗರ. ಬೆಳಗ್ಗೆ 10 ಗಂಟೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಧುಮೇಹ ತೊಂದರೆಗೆ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ. ಬೆಳಗ್ಗೆಯಿಂದ.

■ **ಯುವ ಭಾರತ್ ಸಂಘಟನೆ :** ಕಿತ್ತೂರು ರಾಣಿ ಚನ್ನಮ್ಮನವರ 199ನೇ ಜನ್ಮದಿನ ಹಾಗೂ ವಿಜಯೋತ್ಸವ ಆಚರಣೆ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಶಾಸಕ ಎಲ್.ನಾಗೇಂದ್ರ, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಶಿವಕುಮಾರ್, ಸಮಾಜ ಸೇವಕ ಕೆ.ರಘುರಾಂ ವಾಜಪೇಯಿ, ಮೈಸೂರು ನಗರ ಮಹಿಳಾ ಬಿಜೆಪಿ ಅಧ್ಯಕ್ಷೆ ಹೇಮಾ ನಂದೀಶ್, ಪಾಲಿಕೆ ಸದಸ್ಯೆ ಪ್ರಮೀಳಾ ಭರತ್, ನಗರ ಬಿಜೆಪಿ ಹಿಂದುಳಿದ ವರ್ಗದ ಅಧ್ಯಕ್ಷ ಜೋಗಿ ಮಂಜು, ವಿಕ್ರಂ ಅಯ್ಯಂಗಾರ್, ಅಜಯ್ ಶಾಸ್ತ್ರಿ, ಸ್ಥಳ: ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ಬೆಳಗ್ಗೆ 11ಕ್ಕೆ.

■ **ಪಂಡಿತರತ್ನಂ ಕೆ.ಎಸ್. ವರದಾಚಾರ್ಯ ಶತಮಾನೋತ್ಸವ ಸಮಿತಿ :** ಪಂಡಿತರತ್ನಂ ಕೆ.ಎಸ್. ವರದಾಚಾರ್ಯ ಶತಮಾನೋತ್ಸವ ಸಮಾರಂಭ, ಬೆಳಗ್ಗೆ 9ಕ್ಕೆ ವಿದ್ವದ್ಗೋಷ್ಠಿ–2, ಶ್ರೀ ವರದಾಚಾರ್ಯರ ದೃಷ್ಟಿಯಲ್ಲಿ ಜೀವನ ಸಮನ್ವಯ, ಅಧ್ಯಕ್ಷತೆ : ಪ್ರಾಚ್ಯ ವಿದ್ಯಾ ಸಂಶೋಧನಾಲಯ ವಿಶ್ರಾಂತ ಉಪನಿರ್ದೇಶಕ ವಿದ್ವಾನ್ ಡಾ. ಟಿ.ವಿ.ಸತ್ಯನಾರಾಯಣ, ಶ್ರೀವರದ ಜೀವನ ಸಮನ್ವಯ : ವಿಶ್ರಾಂತ ಪ್ರಾಂಶುಪಾಲ ವಿದ್ವಾನ್ ಪ್ರೊ. ಎಂ.ಎ. ಶ್ರೀನಿವಾಸನ್, ಬೆಳಗ್ಗೆ 10.30ಕ್ಕೆ ವಿದ್ವದ್ಗೋಷ್ಠಿ–3, ಶ್ರೀ ವರದಾಚಾರ್ಯರ ದೃಷ್ಟಿಯಲ್ಲಿ ದರ್ಶನ ಸಮನ್ವಯ, ಅಧ್ಯಕ್ಷತೆ : ರಾಷ್ಟ್ರೀಯ ಸಂಸ್ಕೃತ ಸಂಸ್ಥಾನ ಕುಲಪತಿ ವಿದ್ವಾನ್ ಡಾ. ಶ್ರೀನಿವಾಸ ವರಖೇಡಿ, ನ್ಯಾಯದರ್ಶನ : ವಿದ್ಯಾವಾಚಸ್ಪತಿ ಉಮಾಕಾಂತ ಭಟ್ಟ, ಮೀಮಾಂಸಾ ದರ್ಶನ : ವಿದ್ವಾನ್ ಡಾ. ಸೂರ್ಯನಾರಾಯಣ ನಾಗೇಂದ್ರ ಭಟ್ಟ, ಸಾಂಖ್ಯ ದರ್ಶನ : ವಿದ್ವಾನ್ ಡಾ. ಗಣೇಶ ಭಟ್ಟ ಕೊಪ್ಪ, ಯೋಗ ದರ್ಶನ : ವಿದ್ವಾನ್ ಡಾ. ಕೆ.ಎಲ್. ಶಂಕರನಾರಾಯಣ ಜೋಯ್ಸ್, ಚಾರ್ವಾಕ–ಬೌದ್ಧ–ಪಾಶುಪತ ದರ್ಶನಗಳು : ಡಾ. ಕೆ.ಇ. ದೇವನಾಥನ್, ಮಧ್ಯಾಹ್ನ 3.30ಕ್ಕೆ ಸಮಾರೋಪ ಸಮಾರಂಭ, ಸಾನ್ನಿಧ್ಯ : ಶ್ರೀ ಗಂಗಾಧರೇಂದ್ರ ಸರಸ್ವತೀ ಮಹಾಸ್ವಾಮಿಗಳು, ಶ್ರೀ ಮಾಧವಪ್ರಿಯ ದಾಸ್‌ಜೀ ಸ್ವಾಮಿಗಳು, ಶ್ರೀ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್, ಅಧ್ಯಕ್ಷತೆ : ಉನ್ನತ ಶಿಕ್ಷಣ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ, ಭಾವಚಿತ್ರ ಅನಾವರಣ : ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಸಮಾರೋಪ ಭಾಷಣ : ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ, ಮುಖ್ಯ ಅತಿಥಿಗಳು : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಶಾರದಾ ವಿಲಾಸ ವಿದ್ಯಾಸಂಸ್ಥೆಗಳ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ.

■ **ರಾಸಾ ಕನ್ನಡ ಮತ್ತು ಕಲಾ ಸಂಸ್ಕೃತಿ ಚಾರಿಟಬಲ್ ಟ್ರಸ್ಟ್ :** ಮಹಿಳೆಯರು, ಮಕ್ಕಳು, ಸಾಧಕರಿಗೆ ರಾಜ್ಯ ಮಟ್ಟದ ಪ್ರಶಸ್ತಿ ಪ್ರದಾನ, ಉಪಸ್ಥಿತರು : ಮಾಜಿ ಶಾಸಕ ಎಂ.ಕೆ. ಸೋಮಶೇಖರ್,ಉಪ ಪೊಲೀಸ್ ಆಯುಕ್ತೆ ಶ್ರೀಮತಿ ಗೀತಾ, ಶಾಸಕ ಜಿ.ಟಿ. ದೇವೇಗೌಡ, ಮೇಯರ್ ಶಿವಕುಮಾರ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಟ್ರಸ್ಟ್ ಟ್ರಸ್ಟಿ ಶ್ರೀಮತಿ ಹೇಮಾ, ಅಧ್ಯಕ್ಷತೆ : ಟ್ರಸ್ಟ್ ಅಧ್ಯಕ್ಷ ರಾಸಾ ಆರ್. ಈಶ್ವರ, ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ವಿಜಯನಗರ 1ನೇ ಹಂತ, ಬೆಳಗ್ಗೆ 9.30ಕ್ಕೆ

■ **ಖಡ್ಗ ಲೇಖನ ವಾರಪತ್ರಿಕೆ :** 30ನೇ ವಾರ್ಷಿಕೋತ್ಸವ, ಉದ್ಘಾಟನೆ : ಸಾಹಿತಿ ಡಾ. ಪ್ರದೀಪ್ ಕುಮಾರ್ ಹೆಬ್ರಿ, ಅಧ್ಯಕ್ಷತೆ: ಕಸಾಪಜಿಲ್ಲಾಧ್ಯಕ್ಷ ಮಡ್ಡೀಕೆರೆ ಗೋಪಾಲ್, ವಿಶೇಷ ಸಂಚಿಕೆ ಬಿಡುಗಡೆ: ಶಾಸಕ ತನ್ವೀರ್ ಸೇಠ್, ಉಪಸ್ಥಿತರು: ಮಾಜಿ ಶಾಸಕ ಡಿ.ಮಾದೇಗೌಡ, ಮುಡಾ ಮಾಜಿ ಅಧ್ಯಕ್ಷ ಪಿ. ಗೋವಿಂದರಾಜು, ಶಾಮು, ಲಕ್ಷ್ಮಣ್, ಸ್ಥಳ: ಗೋವರ್ಧನ್ ಹೋಟೆಲ್, ಶ್ರೀ ಹರ್ಷ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಪಾವನ ಮೆಲೋಡೀಸ್ :** ಗಾಯಕ ಪರಮೇಶ್ ಅವರ ಸಾರಥ್ಯದಲ್ಲಿ ಸುಮಧುರ ಗೀತೆಗಳ ರಸಮಂಜರಿ ಕಾರ್ಯಕ್ರಮ, ಉದ್ಘಾಟನೆ: ಜಿಪಂ ಮಾಜಿ ಅಧ್ಯಕ್ಷ ಕಾ.ಪು.ಸಿದ್ದವೀರಪ್ಪ, ಉಮೇಶ್‌ನಾಯಕ್, ಮೋಹನ್ ಕುಮಾರ್, ವಕೀಲ ಉಮೇಶ್, ಸ್ಥಳ: ರಮಾ ಗೋವಿಂದ ರಂಗಮಂದಿರ, ರಾಮಕೃಷ್ಣನಗರ, ಸಂಜೆ 4ಕ್ಕೆ

■ **ಚಾರು ಸಾಂಸ್ಕೃತಿಕ ಪ್ರತಿಷ್ಠಾನ :** ಸ್ವಾಸ್ಥ್ಯ ಕಾರ್ಯಕ್ರಮ, ಡಾ. ಎಸ್.ಎ. ಆಶಾ ಅವರಿಂದ ಆಯುರ್ವೇದದ ಮಹತ್ವ ಕುರಿತು ಉಪನ್ಯಾಸ, ಯೋಗ ಪ್ರಾತ್ಯಕ್ಷಿಕೆ : ಅಂತಾರಾಷ್ಟ್ರೀಯ ಯೋಗ ಶಿಕ್ಷಕಿ ಕಾಂಚನ ಗಂಗಾ, ಕಲಾಂದಿಕ ಅಕಾಡೆಮಿ ಆಫ್ ಆರ್ಟ್ಸ್‌ನ ಅನನ್ಯ ಶ್ರೀರಾಮ್ ಅವರಿಂದ ಭರತನಾಟ್ಯ ಪ್ರದರ್ಶನ, ಸ್ಥಳ: ಚಾರು ಸಾಂಸ್ಕೃತಿಕ ಪ್ರತಿಷ್ಠಾನ, ಸಂಜೆ 4ಕ್ಕೆ.

■ **ದ್ರೋಣಚಾರ್ಯ ಮಾರ್ಷಲ್ ಆರ್ಟ್ಸ್ ಅಕಾಡೆಮಿ :** ಕರಾಟೆ ಬ್ಲಾಕ್ ಬೆಲ್ಟ್ ಪ್ರಧಾನ ಮತ್ತು ಕರಾಟೆ ಪ್ರದರ್ಶನ, ಸ್ಥಳ: ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಜಲಪುರಿ, ಸಂಜೆ 4ಕ್ಕೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ಕಲಾಸುರುಚಿ :** ಡಾ. ಎಚ್.ಕೆ. ರಾಮನಾಥ ಸ್ಮರಣೆ, ಕಥೆ ಕೇಳೋಣ ಬನ್ನಿ–750, ಅಭ್ಯಾಗತರು : ದೂರ ಸಂಪರ್ಕ ಇಲಾಖೆ ನಿವೃತ್ತ ಹೆಚ್ಚುವರಿ ಕಾರ್ಯದರ್ಶಿ ಸಿ.ವಿ. ಗೋಪಿನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಶ್ರೀಮತಿ ವಿಜಯಾ ಸಿಂಧುವಳ್ಳಿ, ಅಧ್ಯಕ್ಷತೆ : ನಟನ ರಂಗಶಾಲೆ ಅಧ್ಯಕ್ಷ ಕೆ.ಎಸ್. ಆನಂದ್‌ಬಾಬು, ಉಪಸ್ಥಿತರು : ಚಲನಚಿತ್ರ ನಟ ಮಂಡ್ಯ ರಮೇಶ್, ರಾಜೇಶ್ವರಿ ವಸ್ತ್ರಾಲಂಕಾರದ ಬಿ.ಎಂ. ರಾಮಚಂದ್ರ, ಸ್ಥಳ: ನಟನ ರಂಗಮಂದಿರ, ರಾಮಕೃಷ್ಣನಗರ, ಸಂಜೆ 4.30ಕ್ಕೆ.


■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀ ಮಾತೆಯವರ ದೈವತ್ವ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ರಂಗಾಯಣ:** ರಂಗಯಣದ ರೆಪರ್ಟರಿ ಕಲಾವಿದರಿಂದ ಕೃಷ್ಣೇಗೌಡನ ಆನೆ ನಾಟಕ ಪ್ರದರ್ಶನ, ನಿರ್ದೇಶನ: ಆರ್.ನಾಗೇಶ್, ವಿನ್ಯಾಸ: ದ್ವಾರಕಾನಾಥ್, ಸ್ಥಳ: ಭೂಮಿಗೀತ ರಂಗ ಮಂದಿರ, ಸಂಜೆ 6.30ಕ್ಕೆ

ಮೈಸೂರು ಮಿತ್ರ

ಕಾಂತಾರ ಚಿತ್ರದಲ್ಲಿ ಪ್ರದರ್ಶಿಸಿರುವ ಭೂತಕೋಲಾ ಹಿಂದೂ ಸಂಸ್ಕೃತಿಯದ್ದಲ್ಲ

- ಸಾಹಿತಿ ಕೆ.ಎಸ್.ಭಗವಾನ್ ವಾದ
- ನಟ ಚೇತನ್ ಹೇಳಿಕೆಗೆ ಸಹಮತ


ಪ್ರೊ.ಭಗವಾನ್

ಮೈಸೂರು, ಅ.22 (ಎಂಟಿವೈ)– ಕಾಂತಾರ ಚಲನಚಿತ್ರದಲ್ಲಿ ತೋರಿಸಲಾಗಿರುವ ಭೂತಕೋಲಾ ಆಚರಣೆ ಹಿಂದೂ ಸಂಸ್ಕೃತಿಯದ್ದಲ್ಲ ಎಂದು ನಟ ಚೇತನ್ ನೀಡಿರುವ ಹೇಳಿಕೆಯನ್ನು ಸಾಹಿತಿ ಪ್ರೊ.ಕೆ.ಎಸ್.ಭಗವಾನ್ ಸಮರ್ಥಿಸಿಕೊಂಡಿದ್ದು, ವೈದಿಕ ಸಂಸ್ಕೃತಿಗೂ ಮುನ್ನ ಎಲ್ಲರೂ ಗ್ರಾಮದೇವತೆಯನ್ನು ಆರಾಧಿಸುತ್ತಿದ್ದರು. ಆ ಆಚರಣೆಯ ಭಾಗವಾಗಿ ಭೂತಕೋಲಾ ಆಚರಿಸಲಾಗುತ್ತಿತ್ತು ಎಂದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ರಾಮದೇವತೆಯನ್ನು ಆರಾಧಿಸುವ ಪದ್ಧತಿ ಚಾಲ್ತಿಯಲ್ಲಿದ್ದ ವೇಳೆ ಅಲ್ಲಿ ಯಾವುದೇ ಭೇದಭಾವ ಇರಲಿಲ್ಲ. ಹೊರಗಡೆಯಿಂದ ಬಂದ ಆರ್ಯರು ಇಲ್ಲಿ ಹಿಂದು ಧರ್ಮ ಹೇರಿದ್ದಾರೆ. ಕ್ರಿಸ್ತಶಕ 1030ರಲ್ಲಿ ಹಿಂದೂ ಎಂಬ ಪದ ಮುನ್ನೆಲೆಗೆ ಬಂದಿತು. ನಟ ಚೇತನ್ ಸತ್ಯವನ್ನೇ ಹೇಳಿದ್ದಾರೆ. ಭರತ ಖಂಡದ ಮೇಲೆ 26 ಬಾರಿ ಪರಕೀಯರ ದಾಳಿ ನಡೆದಿದೆ. ಸ್ವತಃ ಸ್ವಾಮಿ ವಿವೇಕಾನಂದರು ಹಿಂದು ಧರ್ಮವನ್ನು ಟೀಕಿಸಿದ್ದಾರೆ. ಜಾತಿ ವ್ಯವಸ್ಥೆ, ವರ್ಣ ವ್ಯವಸ್ಥೆ ತೊಡೆದುಹಾಕಬೇಕೆಂಬ ಆರ್‌ಎಸ್‌ಎಸ್ ಅಧ್ಯಕ್ಷ ಮೋಹನ್ ಭಾಗವತ್ ಹೇಳಿಕೆ ಸ್ವಾಗತಾರ್ಹ. ಆದರೆ ತಮ್ಮದೇ ಸರ್ಕಾರವಿರುವ ಕಾರಣ ತಮ್ಮ ಹೇಳಿಕೆ ಬಗ್ಗೆ ಬದ್ಧತೆ ಇದ್ದರೆ, ಈ ಕುರಿತು ಸಂಸತ್‌ನಲ್ಲಿ ಮಸೂದೆ ಮಂಡಿಸುವಂತೆ ಒತ್ತಾಯಿಸಿದರು

ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಕಾಂತಾರ ಚಲನಚಿತ್ರದ ಬಗ್ಗೆ ನಟ ಚೇತನ್ ಹೇಳಿಕೆ ಸರಿಯಾಗಿದೆ. ಅದು ಸತ್ಯ ಸಹ. ಅವರನ್ನು ಈಗ ಬೆದರಿಸಲಾಗುತ್ತಿದೆ. ಈ ಕುರಿತು ಪೊಲೀಸ್ ಇಲಾಖೆ ಅವರಿಗೆ ರಕ್ಷಣೆ ನೀಡಿಲ್ಲ. ನಟ ಚೇತನ್ ಪರ ರಾಜ್ಯಾದ್ಯಂತ ದಲಿತಪರ, ಪ್ರಗತಿಪರ ಸಂಘಟನೆಗಳು ಹಾಗೂ ಚಿಂತಕರಿದ್ದು, ಅವರಿಗೆ ಕಿರುಕುಳ ನೀಡುವುದನ್ನು ಮುಂದುವರಿಸಿದಲ್ಲಿ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು. ಸುದ್ದಿಗೋಷ್ಠಿಯಲ್ಲಿ ಲೇಖಕ ಸಿದ್ದಸ್ವಾಮಿ, ಎಪಿಎಂಸಿ ಮಾಜಿ ಉಪಾಧ್ಯಕ್ಷ ಜವರಪ್ಪ, ನಂಜುಂಡಸ್ವಾಮಿ, ವಿಷಕಂಠ ಇದ್ದರು.

ಸಿಎಂ ಮಂತ್ರಿ ಮಂಡಲ ವಿಸ್ತರಿಸಲು ಮುಂದಾಗಿದ್ದರೂ ಯಾರೂ ಮಂತ್ರಿ ಆಗಲು ಮುಂದೆ ಬರುತ್ತಿಲ್ಲ!

- ಕಾರಣ! ಚುನಾವಣಾ ಜ್ವರ
- ನಮಗೆ ಮಂತ್ರಿ ಸ್ಥಾನ ಬೇಡ; ಕ್ಷೇತ್ರಕ್ಕೆ ಒಂದಷ್ಟು ಹಣ ಕೊಡಿ...!
- ಸಚಿವರಾಗಿ ರಾಜ್ಯ ಸುತ್ತುತ್ತಾ ಹೋದ್ರೆ ಕ್ಷೇತ್ರ ಕೈತಪ್ಪುವ ಆತಂಕ





ಬೆಂಗಳೂರು, ಅ. 22 (ಕೆಎಂಶಿ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಮಂತ್ರಿಮಂಡಲದ ವಿಸ್ತರಣೆ ಮಾಡಲು ಒಂದೆಡೆ ಚಿಂತನೆ ನಡೆಸಿದ್ದರೂ, ಮತ್ತೊಂದೆಡೆ ಬಿಜೆಪಿ ಶಾಸಕರು ಸಚಿವರಾಗಲು ಆಸಕ್ತಿಯೇ ತೋರುತ್ತಿಲ್ಲ.

ಮಂತ್ರಿಮಂಡಲ ವಿಸ್ತರಿಸುವ ಸಂಬಂಧ ದೆಹಲಿಗೆ ತೆರಳಿ ವರಿಷ್ಠರನ್ನು ಭೇಟಿ ಮಾಡುವುದಾಗಿ ಮುಖ್ಯಮಂತ್ರಿ ಹೇಳಿಕೆ ನೀಡಿದ ಬೆನ್ನಲೇ ಸಚಿವರಾಗಲು ಯಾರೂ ಉತ್ಸುಕತೆ ತೋರುತ್ತಿಲ್ಲ.

ಈ ಹಿಂದೆ ಆಕಾಂಕ್ಷಿಗಳಾಗಿದ್ದ ಕೆಲವರು ಖುದ್ದು ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಚುನಾವಣೆ ಸಮೀಪಿಸುತ್ತಿರುವ ಸಂದರ್ಭದಲ್ಲಿ ಮಂತ್ರಿಗಿರಿ ತೆಗೆದುಕೊಂಡು ಏನು ಮಾಡೋಣ. ಕ್ಷೇತ್ರದ ಅಭಿವೃದ್ಧಿಗೆ ಒಂದಷ್ಟು ಹಣವನ್ನಾದರೂ ಬಿಡುಗಡೆ ಮಾಡಿ ಎಂದು ಮನವಿ ಮಾಡಿದ್ದಾರೆ.

ಸಂಪುಟದಲ್ಲಿ ಆರು ಸ್ಥಾನಗಳು ಖಾಲಿ ಉಳಿದಿವೆ. ಇವುಗಳನ್ನು ಭರ್ತಿ ಮಾಡಲು ಮುಖ್ಯಮಂತ್ರಿ ಅವರು ಈಗ ಆಸಕ್ತಿ ತೆಗೆದುಕೊಂಡಿದ್ದಾರೆ. ಅವರ ಚಿಂತನೆಗೆ ವರಿಷ್ಠರು ಸ್ಪಂದಿಸುತ್ತಾರೋ ಇಲ್ಲವೋ ತಿಳಿಯದು. ಆದರೆ, ಪಕ್ಷದ ಶಾಸಕರಿಗೆ ಮಾತ್ರ ಚುನಾವಣೆಯ ಜ್ವರ ತೀವ್ರವಾಗಿ ಕಾಡುತ್ತಿದೆ. ಸಚಿವ ಸ್ಥಾನ ದಕ್ಕಿದರೆ ಕ್ಷೇತ್ರ ಮರೆಯಬೇಕಾಗುತ್ತದೆ. ಜನರು, ಕ್ಷೇತ್ರದ ಕಾರ್ಯಕರ್ತರಿಂದ ನಿರೀಕ್ಷೆಗಳು ಸಹಜವಾಗಿ ಹೆಚ್ಚಾಗುತ್ತವೆ. ಆ ನಿರೀಕ್ಷೆಗಳನ್ನು ಅಲ್ಪಾವಧಿಯಲ್ಲಿ ಬಗೆಹರಿಸಲು ಸಾಧ್ಯವಿಲ್ಲ. ಮಂತ್ರಿಯಾಗಿ ಏನು ಸಾಧನೆ ಮಾಡಲಾಗದು.

ಒಂದು ಕಡೆಯಿಂದ ಇಡೀ ರಾಜ್ಯ ಸುತ್ತಿ ಬರುವಷ್ಟರಲ್ಲಿ ಚುನಾವಣೆ ಘೋಷಣೆ ಆಗಲಿದೆ. ಮಂತ್ರಿ ಕೆಲಸ ಮಾಡಿದರೆ ಕ್ಷೇತ್ರ ಮರೆಯಬೇಕು. ಇದರ ಸಹವಾಸವೇ ಬೇಡ ಎಂಬ ನಿರ್ಧಾರಕ್ಕೆ ಶಾಸಕರು ಬಂದಿದ್ದಾರೆ. ಈ ಹಿಂದೆ ಮಂತ್ರಿಯಾಗಲು ಹರಸಾಹಸಪಟ್ಟರೂ ಧಕ್ಕಲಿಲ್ಲ. ಈಗ ಕೊಟ್ಟರೂ ಬೇಡ ಎನ್ನುತ್ತಿದ್ದಾರೆ.

ಮತ್ತೆ ಚುನಾವಣೆ ಎದುರಿಸಿ ಶಾಸಕರಾದರೆ ಅಧಿಕಾರ ತಾನಾಗೆ ಬರುತ್ತದೆ. ಶಾಸಕ ಸ್ಥಾನ ಇಲ್ಲದ ಮೇಲೆ ಮಂತ್ರಿ ಸ್ಥಾನ ತೆಗೆದುಕೊಂಡು ಏನು ಮಾಡೋಣ ಎಂದು ಸಿಎಂ ಅವರಿಗೆ ನೇರವಾಗಿ ಹೇಳಿದ್ದಾರೆ.

ಮಂತ್ರಿಮಂಡಲದ ವಿಸ್ತರಣೆ ಹೇಳಿಕೆ ನೀಡಿದ ನಂತರ ಯಾವ ಆಕಾಂಕ್ಷಿಗಳೂ ಮುಖ್ಯಮಂತ್ರಿ ಹಾಗೂ ಇತರೆ ಯಾವ ನಾಯಕರ ಮನೆ ಬಾಗಿಲಿಗೂ ಹೋಗುತ್ತಿಲ್ಲ. ಈ ಹಿಂದೆ ಸುಮಾರು 35ಕ್ಕೂ ಹೆಚ್ಚು ಪಕ್ಷದ ಶಾಸಕರು ಸಚಿವರಾಗಲು ಹರಸಾಹಸಪಟ್ಟಿದ್ದರು. ಆ ಸಂದರ್ಭದಲ್ಲಿ ಮಂತ್ರಿಮಂಡಲ ವಿಸ್ತರಿಸಿ ಗೊಂದಲಕ್ಕೆ ಸಿಲುಕಿಕೊಳ್ಳಲು ಬೊಮ್ಮಾಯಿ ಆಸಕ್ತಿ ತೋರಲಿಲ್ಲ. ವರಿಷ್ಠರು ತಲೆಕೆಡಿಸಿಕೊಳ್ಳಲಿಲ್ಲ. ಚುನಾವಣೆಗೆ ಐದಾರು ತಿಂಗಳು ಮಾತ್ರ ಬಾಕಿ ಇರುವ ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಅವರು ನೀಡಿರುವ ಹೇಳಿಕೆ ಶಾಸಕರಿಗೆ ಹಾಸ್ಯಾಸ್ಪದವಾಗಿ ಕಾಣುತ್ತಿದೆ.

ಈಗಲೂ ಮಂತ್ರಿ ಸ್ಥಾನ ಕೊಟ್ಟರೆ ಅಧಿಕಾರ ಪಡೆಯಲು ಮಾಜಿ ಸಚಿವರಾದ ಕೆ.ಎಸ್.ಈಶ್ವರಪ್ಪ ಮತ್ತು ರಮೇಶ್ ಜಾರಕಿಹೊಳಿ ಆಸಕ್ತಿ ತೋರಿದ್ದಾರೆ. ಆದರೆ, ಅವರನ್ನು ಮಂತ್ರಿಮಾಡಲು ಪಕ್ಷದ ಹಿರಿಯ ಮುಖಂಡರು ಅವಕಾಶ ಕೊಡುತ್ತಿಲ್ಲ. ಅದನ್ನು ತಿಳಿದು ಅವರೂ ಸಹ ಮಂತ್ರಿ ಆಗುವ ಆಸೆ ಕಳೆದುಕೊಂಡಿದ್ದಾರೆ. ಮಂತ್ರಿಮಂಡಲದಲ್ಲಿ ಇರುವವರೇ ಇಲಾಖೆಯ ಕಡೆಗೆ ಗಮನ ಹರಿಸುವುದಕ್ಕಿಂತ ಹೆಚ್ಚು ಕ್ಷೇತ್ರದ ಕಡೆ ಒಲವು ತೋರಿದ್ದಾರೆ. ಮುಖ್ಯಮಂತ್ರಿ ಮಾತ್ರ ಯಾವ ರಾಜಕೀಯ ದೂರದೃಷ್ಟಿ ಇಟ್ಟುಕೊಂಡು ಇಂತಹ ಹೇಳಿಕೆ ನೀಡುತ್ತಿರುವರೋ ಎಂಬ ವಿಚಾರ ಪಕ್ಷದಲ್ಲೇ ಚರ್ಚೆಗೆ ಗ್ರಾಸವಾಗಿದೆ.

ಎರಡು ಸಮಿತಿ ಹೊರತಾಗಿ ಉಳಿದ 19ರಿಂದ ದಸರಾ ಲೆಕ್ಕ

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್



ಮೈಸೂರು,ಅ.22(ಪಿಎಂ)–ದಸರಾ ಮಹೋತ್ಸವದ ಸಂಬಂಧ ಎರಡು ಹೊರತಾಗಿ 19 ಉಪಸಮಿತಿಗಳು ಖರ್ಚು–ವೆಚ್ಚದ ಮಾಹಿತಿ ನೀಡಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತಿಳಿಸಿದರು. ಮೈಸೂರಿನ ಶಾರದಾವಿಲಾಸ ಶತಮಾನೋತ್ಸವ ಭವನದ ಆವರಣದಲ್ಲಿ ಶನಿವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಉಳಿದ ಎರಡು ಸಮಿತಿಗಳಿಗೂ ಮುಂದಿನ ವಾರದೊಳಗೆ ಖರ್ಚು–ವೆಚ್ಚದ ಮಾಹಿತಿ ಸಲ್ಲಿಸಲು ಸೂಚನೆ ನೀಡಲಾಗಿದೆ ಎಂದು ಹೇಳಿದರು.

ಶಾಸಕ ಜಿ.ಟಿ.ದೇವೇಗೌಡ ಅವರು ಜೆಡಿಎಸ್‌ನಲ್ಲೇ ಉಳಿದ ವಿಚಾರ ಕುರಿತು ಪ್ರತಿಕ್ರಿಯಿಸಿ, ಸಮುದ್ರದಲ್ಲಿ ಮೀನಿನ ಹೆಜ್ಜೆ ಹಾಗೂ ಜಿ.ಟಿ.ದೇವೇಗೌಡರ ನಡೆಯನ್ನು ಯಾರೂ ಕಂಡುಹಿಡಿಯಲು ಸಾಧ್ಯವಿಲ್ಲ ಎಂದು ನಾನು ಮುಂಚೆಯೇ ಹೇಳಿದ್ದೆ. ಅದು ನಿಜವಾಗಿದೆ. ನಮ್ಮ ಪಕ್ಷದಿಂದ ಅವರಿಗೆ ಆಹ್ವಾನ ನೀಡಿರಲಿಲ್ಲ. ಕಾಂಗ್ರೆಸ್ ಬಗ್ಗೆ ನನಗೆ ಗೊತ್ತಿಲ್ಲ. ಜಿಲ್ಲಾ ಉಸ್ತುವಾರಿ ಸಚಿವನಾಗಿ ಜಿ.ಟಿ.ದೇವೇಗೌಡರೂ ಸೇರಿದಂತೆ ಎಲ್ಲಾ ಶಾಸಕರೊಂದಿಗೆ ವಿಶ್ವಾಸದಿಂದ ಇದ್ದೇನೆ ಎಂದರು.

ಚಾಮುಂಡೇಶ್ವರಿ ಕ್ಷೇತ್ರದ ಮಾತ್ರವಲ್ಲದೆ, ರಾಜ್ಯದ 224 ಕ್ಷೇತ್ರಗಳಲ್ಲೂ ಬಿಜೆಪಿ ಸಮರ್ಥವಾಗಿದೆ. ಮುಂದಿನ ಅವಧಿಗೂ ಬಿಜೆಪಿಯದ್ದೇ ಸರ್ಕಾರ ರಾಜ್ಯದಲ್ಲಿ ಬರಲಿದೆ. ಅಪಾಯದಲ್ಲಿರುವ ಮೈಸೂರಿನ ಪಾರಂಪರಿಕ ಕಟ್ಟಡಗಳನ್ನು ಪರಿಶೀಲಿಸಿ ಅವುಗಳ ರಕ್ಷಣೆಗೆ ಸೂಕ್ತ ಕ್ರಮ ವಹಿಸಲಾಗುವುದು ಎಂದು ಪ್ರಶ್ನೆಗಳಿಗೆ ಉತ್ತರಿಸಿದರು.

ನ.2ರಿಂದ ಯೋಗ, ಪರ್ಯಾಯ ಚಿಕಿತ್ಸೆಗಳ ಅಭ್ಯಾಸ ಕಾರ್ಯಕ್ರಮ

ಮೈಸೂರು,ನ.22(ಎಂಟಿವೈ)–ಕನ್ನಡ ರಾಜ್ಯೋತ್ಸವದ ಅಂಗವಾಗಿ ನ.2ರಿಂದ 12ರವರೆಗೆ ರಾಮಕೃಷ್ಣ ನಗರದ ಪರಮಹಂಸ ಯೋಗ ಮಹಾ ವಿದ್ಯಾಲಯದಲ್ಲಿ 10 ದಿನಗಳ ಯೋಗ ಮತ್ತು ಪರ್ಯಾಯ ಚಿಕಿತ್ಸೆಗಳ ಅಭ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಪರಮಹಂಸ ಯೋಗ ಮಹಾ ವಿದ್ಯಾಲಯದ ಅಧ್ಯಕ್ಷ ಶಿವಪ್ರಕಾಶ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾರ್ಯಕ್ರಮದಲ್ಲಿ ಥೆರಪೆಟಿಕ್ ಯೋಗ, ಅಷ್ಟಾಂಗ ಯೋಗ, ಹಠ ಯೋಗ, ಜಾಗೃತಿ ಯೋಗ, ತೂಕ ಕಡಿಮೆ ಮಾಡಿಕೊಳ್ಳಲು ಯೋಗ ತಿಳಿಸಿಕೊಡಲಾಗುತ್ತದೆ. ನ. 5ರಿಂದ ಮೂರು ತಿಂಗಳ ಯೋಗ ಶಿಕ್ಷಕರ ಕೋರ್ಸ್ ಆರಂಭವಾಗಲಿದ್ದು, ಆಸಕ್ತರು ಹೆಚ್ಚಿನ ಮಾಹಿತಿಗೆ ದೂ. 90355 06790 ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಪರಮಹಂಸ ಯೋಗ ಮಹಾ ವಿದ್ಯಾಲಯದ ಮುರಳೀಧರ್, ಸುಂದರ್ ಇದ್ದರು.

ವ್ಯಕ್ತಿ ನಾಪತ್ತೆ



ಮೈಸೂರು,ಅ.22–ವ್ಯಕ್ತಿಯೋರ್ವ ನಾಪತ್ತೆಯಾಗಿರುವ ಬಗ್ಗೆ ಮೈಸೂರಿನ ಹೆಬ್ಬಾಳ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಹೆಬ್ಬಾಳ್ 5ನೇ ಕ್ರಾಸ್ ನಿವಾಸಿ ಮಂಜುನಾಥ್ (50) ಅವರು ಅ.15ರಂದು ಮನೆಯಿಂದ ಹೊರ ಹೋದವರು ಈವರೆಗೆ ವಾಪಸ್ಸಾಗಿಲ್ಲ ಎಂದು ಅವರ ಪತ್ನಿ ಶ್ರೀಮತಿ ಬನಶಂಕರಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಇವರ ಬಗ್ಗೆ ಮಾಹಿತಿ ಇರುವವರು ಹೆಬ್ಬಾಳ್ ಠಾಣೆ ದೂ.ಸಂ. 0821–2418318 ಅಥವಾ ನಗರ ಪೊಲೀಸ್ ಕಂಟ್ರೋಲ್ ರೂಂ ಸಂಖ್ಯೆ 2418339 ಅನ್ನು ಸಂಪರ್ಕಿಸುವಂತೆ ಪೊಲೀಸ್ ಪ್ರಕಟಣೆ ಕೋರಿದೆ.

ರಾಜ್ಯೋತ್ಸವ ಪ್ರಶಸ್ತಿಗೆ 28 ಸಾವಿರ ಅರ್ಜಿ: 29ಕ್ಕೆ ಪಟ್ಟಿ ಬಿಡುಗಡೆ

ಉಡುಪಿ: ರಾಜ್ಯೋತ್ಸವ ಪ್ರಶಸ್ತಿಗೆ 28,000 ಅರ್ಜಿಗಳು ಬಂದಿದ್ದು, ತೆರೆ ಮರೆಯ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡಲಾಗುವುದು ಎಂದು ಇಂಧನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ವಿ.ಸುನಿಲ್ ಕುಮಾರ್ ತಿಳಿಸಿದರು. ಶನಿವಾರ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಗೆ ಸಮಿತಿ ರಚಿಸಲಾಗಿದ್ದು, ಒತ್ತಡಕ್ಕೆ ಮಣಿಯದೆ ಅರ್ಹರನ್ನು ಆಯ್ಕೆ ಮಾಡಲಾಗುವುದು. ಅ.29ಕ್ಕೆ ಪ್ರಶಸ್ತಿ ಪುರಸ್ಕೃತರ ಪಟ್ಟಿ ಪ್ರಕಟವಾಗಲಿದೆ ಎಂದು ತಿಳಿಸಿದರು.

ಸರ್ಕಾರಿ ಶಾಲೆಗಳಲ್ಲಿ 100 ರೂ. ದೇಣಿಗೆ ಸಂಗ್ರಹ ವಿಚಾರ ಎಸ್‌ಡಿಎಂಸಿ ಮನವಿ ಮೇರೆಗೆ ಸುತ್ತೋಲೆ

- ಆರ್‌ಟಿಇ ಕಾಯ್ದೆಯಡಿ ಸುತ್ತೋಲೆ; ಶಿಕ್ಷಣ ಸಚಿವ ಬಿ.ಸಿ.ನಾಗೇಶ್
- ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ

ಮೈಸೂರು,ಅ.22(ಪಿಎಂ)–ಸರ್ಕಾರಿ ಶಾಲೆಗಳಲ್ಲಿ ಮೂಲ ಸೌಲಭ್ಯ ಕಲ್ಪಿಸಲು ಶಾಲೆಗಳ ಎಸ್‌ಡಿಎಂಸಿ ಸದಸ್ಯರ ಮನವಿ ಮೇರೆಗೆ, ಪೋಷಕರು ಸ್ವಇಚ್ಛೆಯಿಂದ ನೀಡಿದರೆ ಮಾಸಿಕ 100 ರೂ. ಸಂಗ್ರಹಿಸಲು ಅವಕಾಶ ಕಲ್ಪಿಸಿ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ. ಆರ್‌ಟಿಇ ಕಾಯ್ದೆಯಡಿ ಆಯುಕ್ತರು ಈ ಸುತ್ತೋಲೆ ಹೊರಡಿಸಿದ್ದು, ದುರುಪಯೋಗವಾದಲ್ಲಿ ಸರ್ಕಾರ ಇದನ್ನು ನಿರ್ಬಂಧಿಸಲಿದೆ ಎಂದು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್ ತಿಳಿಸಿದರು.

ಮೈಸೂರಿನ ಶಾರದಾವಿಲಾಸ ಶತಮಾನೋತ್ಸವ ಭವನದ ಆವರಣದಲ್ಲಿ ಶನಿವಾರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ಇದು ಸರ್ಕಾರದ ಆದೇಶವಲ್ಲ. ಆಯುಕ್ತರ ಸುತ್ತೋಲೆ ಅಷ್ಟೇ. ಆರ್‌ಟಿಇ ಕಾಯ್ದೆಯಲ್ಲಿ ಎಸ್‌ಡಿಎಂಸಿಯಿಂದ ಹಣ ಸಂಗ್ರಹಕ್ಕೆ ಅವಕಾಶ ನೀಡಲಾಗಿದೆ ಎಂದರು.

ಎಲ್ಲದಕ್ಕೂ ಪ್ರತಿಕ್ರಿಯಿಸಬೇಕೆಂದು ಒಂದಷ್ಟು ಜನ ಅಂದುಕೊಂಡಿದ್ದು, ಇದು ನಮ್ಮ ದೇಶದ ದುರದೃಷ್ಟ. ಪ್ರತಿಕ್ರಿಯಿಸುವ ಸ್ವಾತಂತ್ರ್ಯ ಅವರಿಗೆ ಇದೆ. ಆದರೆ ಓದಿ ವಿಚಾರ ತಿಳಿದುಕೊಂಡು ಪ್ರತಿಕ್ರಿಯೆ ನೀಡಬೇಕು. ಇದು ನಾನಾಗಲೀ ಅಥವಾ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಾಗಲೀ ತೆಗೆದುಕೊಂಡ ನಿರ್ಧಾರವಲ್ಲ. ಶಿಕ್ಷಣ ಇಲಾಖೆಯ ಆಯುಕ್ತರ ನಿರ್ಣಯ ಇದು ಎಂದರು.

ಓದದೇ ಒಂದಿಬ್ಬರು ಟ್ವೀಟ್ ಮಾಡಿದ ಕೂಡಲೇ ನಾನು ಆಯುಕ್ತರಿಗೆ ಫೋನ್ ಮಾಡಿ ಕೇಳಿದೆ. ಎಸ್‌ಡಿಎಂಸಿಗಳಿಗೆ ಅನೇಕ ಪೋಷಕರು ದಾನ ಮಾಡುತ್ತಾರೆ. ಅದನ್ನು ತೆಗೆದುಕೊಳ್ಳಲು ಸದರಿ ಸುತ್ತೋಲೆ ಮೂಲಕ ಅಧಿಕೃತ ವ್ಯವಸ್ಥೆ ಮಾಡಿಕೊಟ್ಟಿರುವ ಬಗ್ಗೆ ಅವರು ಮಾಹಿತಿ ನೀಡಿದರು. ಹಿಂದಿನ ಸರ್ಕಾರಗಳು ಕೆಪಿಎಸ್ (ಕರ್ನಾಟಕ ಪಬ್ಲಿಕ್ ಸ್ಕೂಲ್) ಶುರು ಮಾಡಿದ ಮೇಲೆ ಇತರ ಅನೇಕ ಸರ್ಕಾರಿ ಶಾಲೆಗಳಲ್ಲಿ ಎಲ್‌ಜಿಕೆ ಮತ್ತು ಯುಕೆಜಿ ಆರಂಭಕ್ಕೆ ಸರ್ಕಾರ ಅವಕಾಶ ಮಾಡಿಕೊಟ್ಟಿತು. ಅದಕ್ಕೆ ಅಲ್ಲಿ ಶಿಕ್ಷಕರಿಗೆ ಸರ್ಕಾರದಿಂದ ಸಂಭಾವನೆ ಕೊಡುವ ವ್ಯವಸ್ಥೆ ಮಾಡಲಿಲ್ಲ. ಆದರೆ ಅಲ್ಲಿ ಪೋಷಕರಿಂದ ಸಂಗ್ರಹಿಸಿ ಸಂಭಾವನೆ ಕೊಡಲು ಸರ್ಕಾರ ನಿಶ್ಚಯ ಮಾಡಿತು. ಇದು ನಮ್ಮ ಸರ್ಕಾರ ಬಂದ ಮೇಲೆ ಆದ ನಿಶ್ಚಯವಲ್ಲ ಎಂದು ತಿಳಿಸಿದರು.

ಆರ್‌ಟಿಇ ಕಾಯ್ದೆ ತಂದವರು 2009ರಲ್ಲಿ ಅಂದಿನ ಪ್ರಧಾನಿ ಮನಮೋಹನ್ ಸಿಂಗ್. ಇವರು ಸಿದ್ದರಾಮಯ್ಯನವರ ಸರ್ಕಾರದವರೇ. ಆರ್‌ಟಿಇ ಒಳ್ಳೆಯದೇ. ಈಗಾಗಲೇ ಅನೇಕ ಎಸ್‌ಡಿಎಂಸಿಗಳು ಹಣ ಸಂಗ್ರಹ ಮಾಡಿವೆ. ಕೆಪಿಎಸ್‌ಯಲ್ಲಿರುವ ಎಲ್‌ಕೆಜಿ ಮತ್ತು ಯುಕೆಜಿ ಶಿಕ್ಷಕರಿಗೆ ಸರ್ಕಾರ ಸಂಭಾವನೆ ಕೊಡುತ್ತಿದೆ. ಉಳಿದೆಡೆ ಸರ್ಕಾರ ಸಂಭಾವನೆ ಕೊಡುತ್ತಿಲ್ಲ. ಇವು ಪೋಷಕರ ಹಣದಿಂದ ನಡೆಯುತ್ತಿವೆ. ಇದಕ್ಕೆ ಅವಕಾಶ ಮಾಡಿಕೊಟ್ಟಾಗ ಸಿದ್ದರಾಮಯ್ಯ ಸರ್ಕಾರದಲ್ಲಿ ಹಣ ಇರಲಿಲ್ಲವೇ? ಎಂದು ಸಚಿವ ಬಿ.ಸಿ.ನಾಗೇಶ್ ಪ್ರಶ್ನಿಸಿದರು.

ಪಠ್ಯ ಪುಸ್ತಕ ಪರಿಷ್ಕರಣೆ; ಯಾವುದನ್ನೂ ಹಿಂಪಡೆದಿಲ್ಲ



ಮೈಸೂರು,ಅ.20(ಪಿಎಂ)– ಪಠ್ಯ ಪುಸ್ತಕ ಪರಿಷ್ಕರಣೆಯಲ್ಲಿಯೂ ವಿರೋಧ ವ್ಯಕ್ತವಾದ ಬಳಿಕ ಸರ್ಕಾರ ವಾಪಸ್ಸು ಪಡೆಯಬೇಕಾಯಿತು ಎಂಬ ಮಾಧ್ಯಮದವರ ಹೇಳಿಕೆಗೆ ಪ್ರತಿಕ್ರಿಯಿಸಿದ ಸಚಿವ ಬಿ.ಸಿ.ನಾಗೇಶ್, ನಾವು ಯಾವುದು ಹಿಂಪಡೆದಿಲ್ಲ. ಹಾಗಾದರೆ ನಿಮಗೆ ವಿಚಾರ ಗೊತ್ತಿಲ್ಲ ಎಂದಾಯಿತು ಎಂದು ಖಾರವಾಗಿ ಮರು ಪ್ರಶ್ನಿಸಿದರು.

ಟಿಪ್ಪು ವೈಭವೀಕರಿಸಿ ಮೈಸೂರು ಮಹಾರಾಜರನ್ನು ಕೈಬಿಟ್ಟಿದ್ದರು. ನಾವು ಟಿಪ್ಪು ತೆಗೆದು ಮೈಸೂರು ಮಹಾರಾಜರನ್ನು ತಂದಿದ್ದೇವೆ. ಚಾಮುಂಡಿಬೆಟ್ಟದ ಕೆಳಗೆ ಮೈಸೂರು ಸಂಸ್ಥಾನ ಇತ್ತು ಎಂಬುದನ್ನು ತೆಗೆದಿದ್ದರು. ಅದನ್ನು ವಾಪಸ್ಸು ತಂದಿದ್ದೇವೆ. ಅಂಬೇಡ್ಕರ್ ವಿಚಾರಗಳನ್ನು ತೆಗೆದಿದ್ದರು. ಅದನ್ನೂ ವಾಪಸ್ಸು ತಂದಿದ್ದೇವೆ ಎಂದು ಸಚಿವರು ಹೇಳಿದರು.

ರಾಜ್ಯ ಬಿಜೆಪಿ ಸರ್ಕಾರದಲ್ಲಿ ಹಣ ಇಲ್ಲ ಎಂದು ಸಿದ್ದರಾಮಯ್ಯ ಟೀಕಿಸುತ್ತಾರೆ. ಭಾರೀ ವಿದ್ಯಾವಂತ, ಬುದ್ಧಿವಂತ ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ, ಹಣಕಾಸು ಖಾತೆಯನ್ನೂ ಅವರೇ ಹೊಂದಿದ್ದರು. ಆದರೂ ಕೇವಲ 4,618 ಶಾಲಾ ಕೊಠಡಿ ಮಾತ್ರ ಕಟ್ಟಿಸಿದರು. ಐದು ವರ್ಷಗಳಲ್ಲಿ ಕೇವಲ 3 ಸಾವಿರ ಶಿಕ್ಷಕರು ಮಾತ್ರ ತೆಗೆದುಕೊಂಡಿದ್ದು ಏಕೆ? ಅಂದು ಟಿಇಟಿ ಪರೀಕ್ಷೆ ಬರೆಯಲು 82 ಸಾವಿರ ಅಭ್ಯರ್ಥಿಗಳು ಸಿದ್ಧವಿದ್ದರು. ಆದರೂ ಅವರಿಗೆ ಅವಕಾಶ ಕಲ್ಪಿಸಲಿಲ್ಲವೇಕೆ? ಎಂದು ಪ್ರಶ್ನೆ ಮಾಡಿದರು.

ಹೆಚ್.ಡಿ.ಕುಮಾರಸ್ವಾಮಿ ಅವಧಿಯಿಂದ ಈವರೆಗೆ 17 ಸಾವಿರ ಕೊಠಡಿ ನಿರ್ಮಿಸಲಾಗಿದೆ. ಆದರೆ 5 ವರ್ಷಗಳಲ್ಲಿ ಸಿದ್ದರಾಮಯ್ಯ ಸರ್ಕಾರದಲ್ಲಿ ನಿರ್ಮಾಣಗೊಂಡಿದ್ದು ಕೇವಲ 4,618 ಕೊಠಡಿ ಮಾತ್ರ. ಬಡ ಮಕ್ಕಳ ಬಗ್ಗೆ ಈಗ ಇದ್ದಕ್ಕಿದ್ದಂತೆ ಕಾಳಜಿ ಬಂದಿದೆ. ಅಂದು ಅಧಿಕಾರಾವಧಿಯಲ್ಲಿ ಬಡ ಮಕ್ಕಳ ಶಾಲೆಗಳ ಕೊಠಡಿ ನಿರ್ಮಾಣಕ್ಕೆ ಏಕೆ ಸಿದ್ದರಾಮಯ್ಯನವರು ಕಾಳಜಿ ತೋರಲಿಲ್ಲ ಎಂದು ಛೇಡಿಸಿದರು.

ಸಿದ್ದರಾಮಯ್ಯನವರದೇ ಮೈತ್ರಿ ಸರ್ಕಾರದ ಅವಧಿಯಲ್ಲಿ ಎಲ್‌ಕೆಜಿ ಮತ್ತು ಯುಕೆಜಿ ಆರಂಭಿಸುವಾಗ ಪೋಷಕರಿಂದ ಹಣ ಸಂಗ್ರಹಿಸಲು ಏಕೆ ಹೇಳಿದರು. ಸಿದ್ದರಾಮಯ್ಯನವರಷ್ಟು ಬುದ್ಧಿವಂತರು ಪ್ರಪಂಚದಲ್ಲೇ ಇಲ್ಲ. ವಕೀಲರಾದ ಅವರು ಸುತ್ತೋಲೆ ಓದುವುದನ್ನು ಕಲಿಯಬೇಕು. ಸ್ವಯಂ ಪ್ರೇರಣೆಯಿಂದ ಕೊಡುವುದನ್ನು ಪಡೆಯಬಹುದು ಎಂದು ಸುತ್ತೋಲೆಯಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಸಂಗ್ರಹಿಸುವ ಹಣವನ್ನು ಎಸ್‌ಡಿಎಂಸಿಗಳು ಸರ್ಕಾರಕ್ಕೆ ಸಲ್ಲಿಸುವುದಿಲ್ಲ. ನಮ್ಮ ಸರ್ಕಾರ 250 ಕೋಟಿ ರೂ. ವೆಚ್ಚದಲ್ಲಿ ಒಳ್ಳೆಯ ಶೌಚಾಲಯಗಳನ್ನು ಸರ್ಕಾರಿ ಶಾಲೆಗಳಲ್ಲಿ ನಿರ್ಮಿಸಲು ಮುಂದಾಗಿದೆ ಎಂದು ಮಾಹಿತಿ ನೀಡಿದರು. ಅಧಿಕಾರಿಗಳು ಸರ್ಕಾರದ ಗಮನಕ್ಕೇ ತರದೇ ಸುತ್ತೋಲೆ ಹೊರಡಿಸಿರುವುದು ಸರಿಯೇ? ಎಂಬುದಕ್ಕೆ ಪ್ರತಿಕ್ರಿಯಿಸಿ, ಸಂವಿಧಾನದತ್ತವಾಗಿ ಕೆಲವು ಸುತ್ತೋಲೆ ಹೊರಡಿಸಲು ಅವಕಾಶವಿದೆ ಎಂದರು.

ನಾನು ಯಾರನ್ನೂ ಬಿಡಲ್ಲ, ಅಬ್ಬರಿಸುತ್ತೇನೆ ಅರುಣ್‌ಸಿಂಗ್‌ಗೂ ಯತ್ನಾಳ್ ಟಾಂಗ್



ವಿಜಯಪುರ: ಬಿಜೆಪಿ ನಾಯಕರ ವಿರುದ್ಧ ಮಾತನಾಡದಂತೆ ವಿಜಯಪುರ ಶಾಸಕ ಬಸನಗೌಡ ಯತ್ನಾಳ್ ಅವರಿಗೆ ನೋಟಿಸ್ ನೀಡುತ್ತೇವೆ ಎಂದು ರಾಜ್ಯ ಬಿಜೆಪಿ ಉಸ್ತುವಾರಿ ಅರುಣ್‌ಸಿಂಗ್ ಹೇಳಿಕೆಗೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪ್ರತಿಕ್ರಿಯಿಸಿ, ನಾನು ಯಾರನ್ನೂ ಬಿಡಲ್ಲ ಅಬ್ಬರಿಸುತ್ತೇನೆ ಎನ್ನುವ ಮೂಲಕ ಟಾಂಗ್ ಕೊಟ್ಟಿದ್ದಾರೆ.

ಶನಿವಾರ ಬಿಜೆಪಿ ಅಭ್ಯರ್ಥಿಗಳ ಪರ ಮತಯಾಚನೆ ಬಳಿಕ ಮಾತನಾಡಿದ ಅವರು, ಇಂತಹ ಹೇಳಿಕೆಗೆ ಪ್ರತಿಕ್ರಿಯಿಸಲು ನನಗೆ ಸಮಯ ಇಲ್ಲ. ನಾನು ಯಾರನ್ನೂ ಬಿಡಲ್ಲ, ಅಬ್ಬರಿಸುತ್ತೇನೆ. ಮಹಾನಗರ ಪಾಲಿಕೆ ಚುನಾವಣೆ ಹಿನ್ನೆಲೆ ಅಬ್ಬರಿಸಲು ಸಮಯ ಇಲ್ಲ ಎಂದರು. ನಾನು ಯಾರಿಗಾದರೂ ಸಡಲು ಬಿಡ್ತಿನಾ.. ನಾನು ಅಬ್ಬರಿಸುತ್ತೇನೆ. ನಾನು ಯಾರ ಮನೆಗೂ ಹೋಗಿ ನಿಂತಿಲ್ಲ ಎಂದರು.

ಬಳಿಕ ನಟ ಚೇತನ್ ವಿರುದ್ಧ ಶಾಸಕ ಯತ್ನಾಳ್ ವಾಗ್ದಾಳಿ ನಡೆಸಿ, ಚೇತನ್ ನಾಲಾಯಕ್ ಹಾಗೂ ಒಂದು ಧರ್ಮದ ಏಜೆಂಟ್ ಆಗಿದ್ದಾರೆ. ಆ ಧರ್ಮದವರು ರೊಕ್ಕಾ ಕೊಟ್ಟು ಇಂತಹ ಅಂಯೋಗ್ಯ ಕೆಲಸ ಮಾಡಿಸುತ್ತಾರೆ. ಹಿಂದೂ ವಿರೋಧಿ ಕೆಲಸ ಮಾಡುತ್ತಾರೆ. ದೈವಾರಾಧನೆ ನಮ್ಮ ಸಂಸ್ಕೃತಿಯ ಭಾಗವಾಗಿದೆ. ನಮ್ಮ ಆರಾಧನೆ ಬಗ್ಗೆ ಮಾತನಾಡುವವರಿಗೆ ದೇವರು ಶಿಕ್ಷೆ ನೀಡುತ್ತಾನೆ ಎಂದು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿದರು.

ಅ.28, ಕೋಟಿ ಕಂಠಗಾಯನ

ಮೈಸೂರು,ಅ.22(ಆರ್‌ಕೆ)–ಮೈಸೂರಿನ ಅರಮನೆ ಆವರಣದಲ್ಲಿ ಕೋಟಿ ಕಂಠ ಗಾಯನ ವಿಶೇಷ ಕಾರ್ಯಕ್ರಮವನ್ನು ಅ.28ರಂದು ಏರ್ಪಡಿಸಲಾಗಿದೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್ ಅವರು, 67ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ನಾಡು–ನುಡಿ, ಭಾಷೆ, ಸಂಸ್ಕೃತಿ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಸರ್ಕಾರವು ರಾಜ್ಯಾದ್ಯಂತ 'ನನ್ನ ನಾಡು–ನನ್ನ ಹಾಡು' ಶೀರ್ಷಿಕೆಯಡಿ 'ಕೋಟಿ ಕಂಠ ಗಾಯನ' ವಿಶೇಷ ಕಾರ್ಯಕ್ರಮ ಆಯೋಜಿಸುವಂತೆ ಸೂಚಿಸಿದೆ ಎಂದರು. ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಛಿಸುವವರು kkg.karnatakagov.in ಲಿಂಕ್‌ನಲ್ಲಿ ಹೆಸರು ನೋಂದಾಯಿಸಿಕೊಂಡು ಅ.28ರಂದು ಬೆಳಗ್ಗೆ 11ಕ್ಕೆ ಅರಮನೆ ಆವರಣದಲ್ಲಿ ಕನ್ನಡ ಗೀತೆಗಳನ್ನು ಹಾಡಬೇಕೆಂದು ತಿಳಿಸಿದ್ದಾರೆ. ಮಾಹಿತಿಗೆ 0821–2513225 ಸಂಪರ್ಕಿಸಿ.

ಟ್ರಕ್‌ಗೆ ಬಸ್ ಡಿಕ್ಕಿ : 15 ಸಾವು, 40 ಮಂದಿಗೆ ಗಾಯ



ಭೋಪಾಲ್: ಟ್ರಕ್‌ಗೆ ಬಸ್ ಗುದ್ದಿದ ಪರಿಣಾಮ ಬಸ್‌ನಲ್ಲಿದ್ದ 15 ಮಂದಿ ಸಾವನ್ನಪ್ಪಿ 40 ಮಂದಿ ಗಾಯಗೊಂಡಿರುವ ಭೀಕರ ರಸ್ತೆ ಅಪಘಾತ ಮಧ್ಯಪ್ರದೇಶದ ರೇವಾ ಬಳಿ ನಡೆದಿದೆ. ಹೈದರಾಬಾದ್‌ನಿಂದ ಗೋರಖ್‌ಪುರಕ್ಕೆ ಸಂಚರಿಸುತ್ತಿದ್ದ ಬಸ್ ರೇವಾ ಬಳಿ ಟ್ರಕ್‌ಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಬಸ್‌ನಲ್ಲಿದ್ದ 14 ಮಂದಿ ಸಾವನ್ನಪ್ಪಿದ್ದು, 40 ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ.

ಗಾಯಗೊಂಡಿರುವ 40 ಮಂದಿಯಲ್ಲಿ 20 ಮಂದಿಯನ್ನು ಪ್ರಯಾಗರಾಜ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಎಲ್ಲಾ ಪ್ರಯಾಣಿಕರು ಉತ್ತರ ಪ್ರದೇಶ ಮೂಲದವರೆಂದು ರೇವಾದ ಎಸ್‌ಪಿ ನವನೀತ್ ಭಾಸಿನ್ ಮಾಹಿತಿ ಹಂಚಿಕೊಂಡಿದ್ದಾರೆ.

ಷೇರು ಮಾರುಕಟ್ಟೆಯಲ್ಲಿ ಲಾಭಾಂಶದ ಆಸೆ ತೋರಿಸಿ ಹಲವರಿಗೆ ವಂಚನೆ

- ಖತರ್ನಾಕ್ ದಂಪತಿಯ ಮಹಾಮೋಸ; ಪತಿ ಬಂಧನ
- ಮಾಹಿತಿ ನೀಡುವಂತೆ ವಂಚನೆಗೊಳಗಾದವರಿಗೆ ಸೂಚನೆ
- ನಾನಾ ನಕಲಿ ಕಂಪನಿಗಳ ಮೂಲಕ ಹಣ ಹೂಡಿ ಮೋಸ: 2.15 ಕೋಟಿ ರೂ. ಗೂ ಅಧಿಕ ದೋಖಾ

ಮೈಸೂರು,ಅ.22(ಎಸ್‌ಬಿಡಿ)–ಖತರ್ನಾಕ್ ದಂಪತಿ ಷೇರು ಮಾರುಕಟ್ಟೆಯಲ್ಲಿ ಹಣ ಗಳಿಸುವ ಆಮಿಷವೊಡ್ಡಿ ಸಾರ್ವಜನಿಕರಿಂದ ಕೋಟ್ಯಾಂತರ ರೂ. ಹೂಡಿಕೆ ಮಾಡಿಸಿಕೊಂಡು ವಂಚಿಸಿರುವ ಬಗ್ಗೆ ಪ್ರಕರಣ ದಾಖಲಾಗಿದ್ದು, ವಂಚನೆಗೊಳಗಾದವರು ಮಾಹಿತಿ ನೀಡುವಂತೆ ಮೈಸೂರಿನ ಸೆನ್ ಪೊಲೀಸರು ಮನವಿ ಮಾಡಿದ್ದಾರೆ.

ಹಿಮಾಲಯ ಕಾಮೋಡಿಟೀಸ್, ಗುಡ್‌ವಿಲ್ ವೆಲ್ತ್ ಮ್ಯಾನೇಜ್‌ಮೆಂಟ್, ಗುಡ್‌ವಿಲ್ ಕಾಂ ಟ್ರೇಡ್ಸ್ ಎಂಬ ನಕಲಿ ಕಂಪನಿಗಳ ಮೂಲಕ ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ ಮೋಸ ಹೋಗಿದ್ದರೆ, ಸಂಬಂಧಿಸಿದ ದಾಖಲೆಗಳೊಂದಿಗೆ ಸೆನ್ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಅವರನ್ನು ಸಂಪರ್ಕಿಸಿ ಮಾಹಿತಿ ನೀಡುವಂತೆ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕೋಟ್ಯಾಂತರ ವಂಚನೆ: ತುಮಕೂರು ಜಿಲ್ಲೆ, ಕುಣಿಗಲ್ ತಾಲೂಕು ಮೂಲದ ಜಿ.ಎನ್.ಕೃಷ್ಣಮೂರ್ತಿ ಹಾಗೂ ಡಯಾನ ದಂಪತಿ ಈ ವಂಚನೆ ಜಾಲದ ಪ್ರಮುಖ ಆರೋಪಿಗಳು. ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿ, ಹೆಚ್ಚಿನ ಲಾಂಭಾಂಶ ನೀಡುವುದಾಗಿ ನಂಬಿಸಿ, ಸಾರ್ವಜನಿಕರಿಂದ 2.15 ಕೋಟಿ ರೂ.ಗೂ ಹೆಚ್ಚು ಹಣ ವಂಚಿಸಿದ್ದಾರೆ. ವಂಚನೆಗೊಳಗಾದವರೆಲ್ಲಾ ಮಾಹಿತಿ ನೀಡಿದ ಬಳಿಕ ಖತರ್ನಾಕ್ ದಂಪತಿ ಲಪಟಾಯಿಸಿರುವ ಒಟ್ಟು ಮೊತ್ತ ತಿಳಿಯಲಿದೆ. ಹಲವು ವರ್ಷಗಳಿಂದ ಮೈಸೂರಿನಲ್ಲೇ ವಾಸವಿರುವ ದಂಪತಿ, ಬೇರೆ ಬೇರೆ ನಿವಾಸದ ದಾಖಲೆ ಹೊಂದಿದ್ದಾರೆ. ದಟ್ಟಗಳ್ಳಿಯ ಸೋಮನಾಥನಗರದಲ್ಲಿ ಪತಿ ವಾಸವಿದ್ದರೆ, ವಿಜಯನಗರ 4ನೇ ಹಂತ, 2ನೇ ಫೇಸ್‌ನಲ್ಲಿರುವ ನಿವಾಸದಲ್ಲಿ ಪತ್ನಿ ಇದ್ದರು ಎನ್ನಲಾಗಿದೆ. ಜನರನ್ನು ವಂಚಿಸಿ, ಆಗಾಗ್ಗೆ ಮನೆ ಬದಲಿಸುತ್ತಿದ್ದರು ಎಂದು ತಿಳಿದು ಬಂದಿದೆ.

ವಿವಿಧ ಹೆಸರಿನ ಟ್ರೇಡ್ಸ್ ಕಂಪನಿಗಳ ಮೂಲಕ ಹಣ ಹೂಡಿಕೆ ಮಾಡಿ ಮೋಸಹೋದವರು ನೀಡಿದ ದೂರಿನ ಮೇರೆಗೆ ದಂಪತಿ ವಿರುದ್ಧ ಮೈಸೂರಿನ ಸೆನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕೆಲ ದಿನಗಳ ಹಿಂದೆ ಜಿ.ಎನ್.ಕೃಷ್ಣಮೂರ್ತಿಯನ್ನು ಪೊಲೀಸರು ಬಂಧಿಸಿದ್ದು, ಸದ್ಯ ಆತ ನ್ಯಾಯಾಂಗ ಬಂಧನದಲ್ಲಿದ್ದಾನೆ. ಈತನ ಪತ್ನಿ ಡಯಾನ ಹಾಗೂ ಇವರ ವಂಚನೆಯಾಟದಲ್ಲಿ ಭಾಗಿ ಯಾಗಿರುವ ಲಕ್ಷ್ಮೀಶ ಹಾಗೂ ರಘುಕುಮಾರ್ ಪತ್ತೆಗೆ ಶೋಧ ಮುಂದುವರೆಸಿದ್ದಾರೆ. ಮೈಸೂರಿನ ವಿವಿಧೆಡೆ ನಕಲಿ ಕಂಪನಿಗಳ ಶಾಖೆ ತೆರೆದು, ನಯವಾದ ಮಾತುಗಳಿಂದ ಸ್ಥಳೀಯರ ಗಮನ ಸೆಳೆದು, ಷೇರು ಮಾರುಕಟ್ಟೆ ಹೂಡಿಕೆ ಮಾಡಿ ಹೆಚ್ಚಿನ ಲಾಭಾಂಶ ನೀಡುವುದಾಗಿ ನಂಬಿಸಿದ್ದರು. ಇದನ್ನು ನಂಬಿದ ಸಾವಿರಾರು ಮಂದಿ, ನೇರವಾಗಿ ಹಾಗೂ ಆನ್‌ಲೈನ್ ಮೂಲಕವೂ ಹಣ ಕಟ್ಟಿದ್ದಾರೆ. ನಂತರ ಷೇರು ಮಾರುಕಟ್ಟೆ ಲಾಭಾಂಶಧ ಬಗ್ಗೆ ವಿಚಾರಿಸಿದಾಗ ಏನೋ ಹೇಳಿ ಅನುಮಾನ ಬಾರದಂತೆ ನಡೆದುಕೊಂಡಿದ್ದಾರೆ. ಕೆಲ ತಿಂಗಳ ಬಳಿಕ ತಾವು ಹಣ ಪಾವತಿಸಿದ ಶಾಖೆಗಳೂ ಮುಚ್ಚಿದ್ದು, ಹಣ ಕಟ್ಟಿಸಿಕೊಂಡವರೂ ಸಂಪರ್ಕಕ್ಕೆ ಸಿಕ್ಕಿಲ್ಲ. ಕಡೆಗೆ ಪೊಲೀಸ್ ಠಾಣೆಗೆ ತೆರಳಿ ದೂರು ದಾಖಲಿಸಿದ್ದಾರೆ. ಪ್ರಕರಣ ತನಿಖೆ ಮುಂದುವರೆಸಿರುವ ಸೆನ್ ಪೊಲೀಸರು, ಜಿ.ಎನ್.ಕೃಷ್ಣಮೂರ್ತಿ ಡಯಾನ, ಲಕ್ಷ್ಮೀಶ ಹಾಗೂ ರಘುಕುಮಾರ್ ಹಿಮಾಲಯ ಕಮೋಡಿಟೀಸ್, ಗುಡ್‌ವಿಲ್ ವೆಲ್ತ್ ಮೇನೆಜ್‌ಮೆಂಟ್, ಗುಡ್‌ವಿಲ್ ಕಾಂ ಟ್ರೇಡ್ಸ್ ಕಂಪನಿ ಮೂಲಕ ಹಣ ಹೂಡಿಕೆ ಮಾಡಿಸಿಕೊಂಡಿದ್ದರೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಮಾಹಿತಿ ನೀಡುವಂತೆ ಇನ್‌ಸ್ಪೆಕ್ಟರ್ ಜಯಕುಮಾರ್ ಕೋರಿದ್ದಾರೆ.

ಮೈಸೂರಲ್ಲಿ ಕಂಡ ಕಂಡ ಕಡೆ ಜೂಜಾಟ

- ಕೆಲವೆಡೆ ಸಿಸಿಬಿ ಪೊಲೀಸರಿಂದ ದಾಳಿ; 44 ಮಂದಿ ವಶಕ್ಕೆ
- ಲಕ್ಷಾಂತರ ರೂ. ನಗದು ಜಪ್ತಿ; ಹೋಟೆಲ್‌ಗಳು, ಬಯಲು, ಗ್ಯಾರೇಜ್‌ಗಳಲ್ಲಿ ಇಸ್ಪೀಟ್ ದಂಧೆ



ಮೈಸೂರು, ಅ.22 (ಎಸ್‌ಬಿಡಿ)– ಮೈಸೂರಿನ ಸಿಸಿಬಿ ಪೊಲೀಸರು ಎರಡು ಜೂಜು ಅಡ್ಡೆಗಳ ಮೇಲೆ ದಾಳಿ ನಡೆಸಿ ಪಣಕ್ಕಿಟ್ಟಿದ್ದ 19 ಲಕ್ಷ ರೂ.ಗೂ ಹೆಚ್ಚು ಹಣ, ನೋಟು ಎಣಿಕೆ ಯಂತ್ರ ಹಾಗೂ 44 ಮಂದಿಯನ್ನು ವಶಕ್ಕೆ ಪಡೆದಿದ್ದಾರೆ.

ಮೈಸೂರು ನಗರ ವ್ಯಾಪ್ತಿಯಲ್ಲಿ ಜೂಜಾಟ ಎಲ್ಲೆ ಮೀರಿದೆ. ಸಿಕ್ಕ ಸಿಕ್ಕ ಜಾಗದಲ್ಲಿ ಲಕ್ಷಾಂತರ ರೂ. ಹಣ ಪಣಕ್ಕಿಟ್ಟು ಜೂಜಾಡುವುದು ಅವ್ಯಾಹವಾಗಿದೆ. ಇದರಿಂದ ಯುವ ಸಮುದಾಯ ಹಾದಿ ತಪ್ಪುವುದರ ಜೊತೆಗೆ ಅಪರಾಧ ಕೃತ್ಯಗಳಿಗೂ ಪ್ರಚೋದನೆಗೊಳ್ಳುತ್ತಿದ್ದಾರೆ. ಸುಲಭವಾಗಿ ಕುಳಿತಲ್ಲೇ ಹಣ ಮಾಡಬಹುದು ಎಂಬ ಭ್ರಮೆಯಿಂದ ಕೂಲಿ ಕಾರ್ಮಿಕರೂ ಜೂಜಾಟಕ್ಕೆ ತುತ್ತಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಿಸಿಬಿ ಪೊಲೀಸರು ಜೂಜು ಅಡ್ಡೆಗಳ ಮೇಲೆ ದಾಳಿ ನಡೆಸಿ, ಚುರುಕು ಮುಟ್ಟಿಸುವ ಪ್ರಯತ್ನ ನಡೆಸಿದ್ದಾರೆ.

ಹೋಟೆಲ್‌ನಲ್ಲಿ ಜೂಜು: ನಗರದ ಜೆಎಲ್‌ಬಿ ರಸ್ತೆ ಮಹಾರಾಜ ಕಾಲೇಜು ಸಮೀಪದ ಹೋಟೆಲ್‌ವೊಂದರ ಕೊಠಡಿಯಲ್ಲಿ ಜೂಜಾಟ ನಡೆಯುತ್ತಿರುವ ಬಗ್ಗೆ ಮಾಹಿತಿ ತಿಳಿದ ಪೊಲೀಸರು ಅ.18ರಂದು ದಾಳಿ ನಡೆಸಿ, ಪಣಕ್ಕಿಟ್ಟಿದ್ದ 2.03 ಲಕ್ಷ ರೂ. ಹಣ ಹಾಗೂ 52 ಇಸ್ಪೀಟ್ ಎಲೆಗಳನ್ನು ವಶಪಡಿಸಿಕೊಂಡಿದ್ದಾರೆ. ಅಲ್ಲಿ ಜೂಜಾಡುತ್ತಿದ್ದ 12 ಮಂದಿಯನ್ನು ವಶಕ್ಕೆ ಪಡೆದು ಮುಂದಿನ ಕ್ರಮ ವಹಿಸಿದ್ದಾರೆ. ಈ ಸಂಬಂಧ ಲಕ್ಷ್ಮೀಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ಯಾರೇಜ್ ಬಳಿ ಇಸ್ಪೀಟ್: ಮೈಸೂರು–ಹುಣಸೂರು ಮುಖ್ಯರಸ್ತೆ, ಆದಿತ್ಯ ಬಡಾವಣೆಯ ಆಟೋಗ್ಯಾರೇಜ್ ಹಿಂಭಾಗದ ಕೊಠಡಿಯಲ್ಲಿ ನಡೆಯುತ್ತಿದ್ದ ಜೂಜು ಅಡ್ಡೆಯ ಮೇಲೆ ದಾಳಿ ನಡೆಸಿದ ಸಿಸಿಬಿ ಪೊಲೀಸರೇ ಅಲ್ಲಿನ ಚಿತ್ರಣ ಕಂಡು ಬೆಚ್ಚಿ ಬಿದ್ದಿದ್ದಾರೆ. ಅ.19ರಂದು ಕಾರ್ಯಾಚರಣೆ ನಡೆಸಿದ ಪೊಲೀಸರು, ಜೂಜಾಟದಲ್ಲಿ ತೊಡಗಿದ್ದ 32 ಮಂದಿಯನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿದ್ದಾರೆ. ಸ್ಥಳದಲ್ಲಿ 17.24 ಲಕ್ಷ ರೂ. ಹಣ ಹಾಗೂ ನೋಟುಗಳನ್ನು ಎಣಿಕೆ ಮಾಡುವ ಯಂತ್ರ ಹಾಗೂ 52 ಇಸ್ಪೀಟ್ ಎಲೆ ಸಿಕ್ಕಿವೆ. ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರೆಸಲಾಗಿದೆ.

ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಂ.ಎಸ್.ಗೀತ ನಿರ್ದೇಶನ, ಸಿಸಿಬಿ ಎಸಿಪಿ ಸಿ.ಕೆ.ಅಶ್ವತ್ಥ ನಾರಾಯಣ ಮಾರ್ಗದರ್ಶನದಲ್ಲಿ ಹೆಚ್‌ಬಿ ವಿಭಾಗದ ಇನ್ಸ್‌ಪೆಕ್ಟರ್ ಜಿ.ಶೇಖರ್, ಸಿಬ್ಬಂದಿ ಸಲೀಂಖಾನ್, ಪಿ.ಎನ್.ಲಕ್ಷ್ಮಿಕಾಂತ, ಟಿ.ಪ್ರಕಾಶ, ಚಂದ್ರಶೇಖರ, ಮಧುಸೂಧನ, ಮಹೇಶ್, ಪವನ್, ಗೋವಿಂದ, ರವಿಕುಮಾರ್, ಆನಂದ, ಯಾಕೂಬ್ ಷರೀಫ್, ನಬೀಪಟೇಲ್, ಗೌತಮ್ ಅವರುಗಳು ದಾಳಿ ನಡೆಸಿ ಜೂಜಾಡುತ್ತಿದ್ದವರಿಗೆ ಬಿಸಿ ಮುಟ್ಟಿಸಿದ್ದಾರೆ.

ರಿಕ್ರಿಯೇಷನ್ ಕ್ಲಬ್‌ನಲ್ಲೂ ಹೆಚ್ಚು: ಮೈಸೂರಿನ ಹಲವು ರಿಕ್ರಿಯೇಷನ್ ಕ್ಲಬ್‌ಗಳಲ್ಲಿ ಜೂಜಾಟ ಸಾಮಾನ್ಯ ಎಂಬಂತಾಗಿದೆ. ಷರತ್ತು, ಮಾರ್ಗಸೂಚಿಗಳನ್ನು ಗಾಳಿಗೆ ತೂರಿ ಲಕ್ಷಾಂತರ ರೂ. ಹಣ ಪಣಕ್ಕಿಟ್ಟು ಅಂದರ್–ಬಾಹರ್ ಆಡುತ್ತಾರೆ. ಪೊಲೀಸರು ಇಂತಹ ಸ್ಥಳಗಳಲ್ಲೂ ಕಾರ್ಯಾಚರಣೆ ನಡೆಸಬೇಕು. ಅನೇಕ ಯುವ ಉದ್ಯಮಿಗಳು, ಉದ್ಯಮಿಗಳ ಮಕ್ಕಳು ಇಸ್ಪೀಟ್ ಚಟಕ್ಕೆ ಬಲಿಯಾಗಿ ತಮ್ಮ ಉತ್ತಮ ಭವಿಷ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಾಮಾಜಿಕ ಕಳಕಳಿಯುಳ್ಳವರು ಆಗ್ರಹಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಆತ : ನೋಡು ಈ ತಾಜ್‌ಮಹಲ್ ನಿರ್ಮಾಣ ಮಾಡಿ 386 ವರ್ಷಗಳಾದರೂ ಒಂದು ಚಿಕ್ಕ ರಿಪೇರಿ ಇಲ್ಲ. ಸುಣ್ಣ–ಬಣ್ಣನ್ನೂ ಇಲ್ಲ ಸಾರ್!

ಈತ : ಈಗ ತಿಳಿಯಿತು ಬಿಡಿ. ಇದನ್ನು ಕಟ್ಟಿಸಿದವನೂ ನಾನಿರುವ ಬಾಡಿಗೆ ಮನೆ ಮಾಲೀಕನಂಥವನೇ ಇರಬೇಕು!

ಮೈಸೂರು ಮಿತ್ರ

ಭಾನುವಾರ, 23 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಕಾಲವನ್ನು ಸರಿಯಾಗಿ ನಿರ್ವಹಣೆ ಮಾಡಿದರೆ ಬದುಕನ್ನು ಚೆನ್ನಾಗಿ ನಿರ್ವಹಿಸಿದಂತೆ. –ಕಾರ್ಲ್‌ಜಂಗ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕನಸಿನ ಬತ್ತಕ್ಕೆ ಗೋಣಿ ಚೀಲ ತಂದ್ರಂತೆ

ನಿಮ್ಮ ಪತ್ರಗಳು

ದಿಟ್ಟ ನಾಯಕನ ರಾಜಕೀಯ ವಿದಾಯ ಬೇಸರ ತರಿಸಿದೆ



ಮಾನ್ಯರೆ,

ನಾನು ಸುಮಾರು 30 ವರ್ಷಗಳ ಹಿಂದೆ ಜೀವನೋಪಾಯಕ್ಕಾಗಿ ಮೈಸೂರಿಗೆ ಬಂದವನು. ಮೈಸೂರಿನ ಸ್ಥಳೀಯ ಪತ್ರಿಕೆಗಳ ಬಿಡದೇ ಓದುವುದು ನನ್ನ ಇಷ್ಟದ ಪ್ರವೃತ್ತಿ. ಅಂದಿನಿಂದಲೂ ಬಹಳ ಕುತೂಹಲದಿಂದ ಸ್ಥಳೀಯ ಮತ್ತು ರಾಜ್ಯ ರಾಜಕಾರಣದ ವಿದ್ಯಮಾನಗಳನ್ನು ಗಮನಿಸುತ್ತಿದ್ದೆ. ಶ್ರೀ ನಿಜಲಿಂಗಪ್ಪ, ಶ್ರೀ ಡಿ.ದೇವರಾಜ ಅರಸು, ಶ್ರೀ ರಾಮಕೃಷ್ಣ ಹೆಗಡೆಯವರ ಬಗ್ಗೆ ಓದಿ, ಕೇಳಿ ತಿಳಿದು ಅಭಿಮಾನಿಸುತ್ತಿದ್ದ ನನಗೆ ಅಂದಿನ ದಿನಗಳಲ್ಲಿ ಕಂಡಿದ್ದು ಉದಯೋನ್ಮುಖ ನಾಯಕ ಮಾನ್ಯ ಶ್ರೀನಿವಾಸ್‌ಪ್ರಸಾದ್.

ಬಡವರು ಮತ್ತು ಶೋಷಿತರ ಪರವಾಗಿ ಜಾತ್ಯಾತೀತವಾಗಿ ಅವರು ತೆಗೆದುಕೊಳ್ಳುತ್ತಿದ್ದ ನಿರ್ಧಾರಗಳು ಸಾರ್ವಜನಿಕವಾಗಿ ಜನಮನ್ನಣೆ ಗಳಿಸುತ್ತಿತ್ತು ಅಂದಿನಿಂದ ಇಂದಿನವರೆಗೂ ತಮ್ಮ ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಅವರು ಸಿಡಿದೇಳುವುದನ್ನು ನಾನು ನೋಡಿದ್ದೇನೆ. ಇಂತಹ ಪ್ರಾಮಾಣಿಕ ರಾಜಕೀಯ ನಾಯಕ ಇತ್ತೀಚೆಗೆ ಮೈಸೂರಿನ ಕಲಾಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಶ್ರಾಂತ ಲೋಕಾಯುಕ್ತ ನ್ಯಾ. ಸಂತೋಷ್‌ಹೆಗ್ಡೆಯವರ ಉಪಸ್ಥಿತಿಯಲ್ಲಿ ರಾಜಕೀಯ ನಿವೃತ್ತಿಯನ್ನು ಘೋಷಿಸಿದ್ದು, ನಮ್ಮ ಅಚ್ಚು–ಮೆಚ್ಚಿನ ಮೇಷ್ಟ್ರು ನಮ್ಮ ಶಾಲೆಯನ್ನು ಬಿಟ್ಟು ಹೋದಂತೆ ಭಾಸವಾಯಿತು. ಅವರ ಮಾತುಗಳನ್ನು ಕೇಳಿದ ನನ್ನ ಮನಸ್ಸಿಗೆ ಮತ್ತೊಬ್ಬ ಪ್ರಸಾದ್‌ರು ಈ ಸಮಾಜಕ್ಕೆ ಸಿಗಲು ಸಾಧ್ಯವೇ? ಆ ಕ್ಷಣ ನನಗರಿವಿಲ್ಲದೆ ನನ್ನ ಕಣ್ಣಲ್ಲಿ ನೀರು ಜಿನುಗಿತು.

– ಶಾಂತರಾಮ್ ಶೆಟ್ಟಿ, ವಿಜಯನಗರ, ಮೈಸೂರು.

ಮರು ನಾಮಕರಣ ಮಾಡಿ

ಮಾನ್ಯರೆ,

ಹಳೇ ಮೈಸೂರು ಪ್ರಾಂತ್ಯವಾದ ಅಶೋಕ ರಸ್ತೆ ಕನ್ಯಕಾಪರಮೇಶ್ವರಿ ದೇವಸ್ಥಾನದ ಸುತ್ತಮುತ್ತಲು, ಕುಂಬಾರಗೇರಿ, ಹಳ್ಳದಕೇರಿ, ಕಾಳಮ್ಮನಗುಡಿ ಇತ್ಯಾದಿ ಬಡಾವಣೆಗಳಿವೆ. ಇಲ್ಲಿ ಅನಾದಿ ಕಾಲದಿಂದಲೂ ಹಳೆಯ ರಾಮಮಂದಿರಗಳು, ದೇವಸ್ಥಾನಗಳು ಸಾಕಷ್ಟಿವೆ. ಇದಲ್ಲದೆ ಗಣಪತಿ ವಿಗ್ರಹಗಳನ್ನು ತಯಾರಿಸುವವರು, ಅಕ್ಕಸಾಲಿಗರು ಬಹಳ ಹಿಂದಿನಿಂದಲೂ ತಮ್ಮ ಕಾಯಕಗಳನ್ನು ಮಾಡಿಕೊಂಡು ಬಂದಿದ್ದಾರೆ. ಆದರೆ ಈ ಪ್ರಾಂತ್ಯಕ್ಕೆ "ಲಷ್ಕರ್ ಮೊಹಲ್ಲಾ" ಎಂದು ಹೆಸರಿಟ್ಟಿರುವುದು ಅಷ್ಟು ಸಮಂಜಸವಲ್ಲ. "ಲಷ್ಕರ್" ಎಂದರೆ ಯುದ್ಧ ಭೂಮಿ ಅಥವಾ ಸೇನಾ ಸಮೂಹ ಎಂದು ಅರ್ಥ ಬರುತ್ತದೆ. ಇಲ್ಲಿ ಕೆಲವು ಹಿರಿಯರನ್ನು ಕೇಳಿದಾಗ ಅನ್ಯಧರ್ಮೀಯರು ಮೈಸೂರನ್ನು ಆಕ್ರಮಿಸಿಕೊಂಡಾಗ ಇಟ್ಟ ಹೆಸರು ಎನ್ನುತ್ತಾರೆ. ತರ್ಕ ಏನೇ ಇದ್ದರೂ, ಈ ಸ್ಥಳಕ್ಕೆ ಒಂದು ಒಳ್ಳೆಯ ಅರ್ಥಗರ್ಭಿತ ಹೆಸರನ್ನು ಇಡಬೇಕೆಂದು ಮನವಿ.

– ರಾಘವೇಂದ್ರ ಎಂ.ಎಸ್., ಮೈಸೂರು


ಹಲೋ ಎಂಬ ಪದದ ಮೂಲ ಸಂಸ್ಕೃತ

ಮಾನ್ಯರೆ,

ಅ. 10ರ 'ಮೈಸೂರು ಮಿತ್ರ' ದಿನಪತ್ರಿಕೆಯಲ್ಲಿ ಓದುಗರೊಬ್ಬರು "ಹಲೋ ಏಕೆ ವಂದೇ ಮಾತರಂ ಓಕೆ" ಎಂಬ ಶೀರ್ಷಿಕೆ ಅಡಿ ಬರೆದ ಪತ್ರ ಪ್ರಕಟವಾಗಿದೆ. ಅವರ ಪತ್ರ ಸ್ವಾಗತಾರ್ಹವಾಗಿದೆ. "ಹಲೋ" ಶಬ್ದದ ಇತಿಹಾಸವನ್ನೊಮ್ಮೆ ಇಣುಕಿ ನೋಡಿದರೆ, ಸಾವಿರಾರು ವರ್ಷಗಳ ಹಿಂದಿನ ಇತಿಹಾಸ ನೆನಪಿಗೆ ಬರುತ್ತದೆ. ಶ್ರೀಯುತರು "ಹಲೋ" ಶಬ್ದವನ್ನು ಆಂಗ್ಲ ಪದವೆಂದು ಹೇಳಿದ್ದಾರೆ. ಆದರೆ "ಹಲೋ (ಹಲಾ) ಶಬ್ದವು ಸಂಸ್ಕೃತ ಶಬ್ದವಾಗಿದೆ. ಪುರಾತನವಾದ ಹಲವಾರು ಸಂಸ್ಕೃತ ನಾಟಕಗಳಲ್ಲಿ "ಹಲಾ" ಎಂಬ ಶಬ್ದ ಪ್ರಯೋಗವಾಗಿರುವುದನ್ನು ಕಾಣಬಹುದು. ಮಹಾಕವಿ ಕಾಳಿದಾಸನ ಶಕುಂತಲಾ ನಾಟಕದಲ್ಲಿ ಶಕುಂತಲೆಯು ದುಶ್ಯಂತನನ್ನು ಕರೆಯುವಾಗ "ಹಲಾ" ಎಂಬ ಪದ ಪ್ರಯೋಗವಾಗಿದೆ. ಕಾಲಾಂತರದಲ್ಲಿ ಸಂಸ್ಕೃತ ರೂಪದ ಈ ಶಬ್ದವು ಆಂಗ್ಲ ಭಾಷೆಯ "ಹಲೋ" ಎಂದು ರೂಪಾಂತರಗೊಂಡಿದೆ. ಆದ್ದರಿಂದ ಹಲೋ ಶಬ್ದದ ಮೂಲ "ಸಂಸ್ಕೃತ" ಎಂದು ಈ ಮೂಲಕ ಸ್ಪಷ್ಟಪಡಿಸುತ್ತಿದ್ದೇನೆ.

–ಎನ್.ಅಶ್ವತ್ಥ ನಾರಾಯಣ, ಇತಿಹಾಸ ತಜ್ಞರು, ಕನಕದಾಸ ನಗರ, ಮೈಸೂರು

ಹರದೂರು ಕೆರೆ ಏರಿ ಮೇಲೆ ಗಿಡಗಂಟಿ ತೆರವುಗೊಳಿಸಿ



ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹರದೂರು ಕೆರೆ ಏರಿಯ ಮೇಲೆ ಗಿಡಗಂಟಿ ಬೆಳೆದು ನಿಂತು ವಾಹನ ಸವಾರರಿಗೆ ತೀವ್ರ ತೊಂದರೆಯಾಗಿದೆ. ಈ ರಸ್ತೆಯಲ್ಲಿ ಹೊಳೇನರಸೀಪುರ, ಕೇರಳಾಪುರ, ಬೆಟ್ಟದಪುರ, ಹರದೂರು, ಅನಿವಾಳು ಸೇರಿದಂತೆ ಸುತ್ತಮುತ್ತಲಿನ ಹಳ್ಳಿಯ ಸಾವಿರಾರು ಜನರು ಓಡಾಡುತ್ತಾರೆ. ಏರಿಯ ಅಕ್ಕಪಕ್ಕದಲ್ಲಿ ಆಳೆತ್ತರದ ಗಿಡಗಂಟಿಗಳು ಬೆಳೆದಿರುವುದರಿಂದ ತಿರುವಿನಲ್ಲಿ ವಾಹನ ಬರುವುದು ಕಾಣುವುದಿಲ್ಲ. ಇದರಿಂದ ಅಪಘಾತಗಳು ಸಂಭವಿಸುವ ಸಾಧ್ಯತೆಗಳುಂಟು. ಅಲ್ಲದೆ ಈ ರಸ್ತೆಯಲ್ಲಿ ವಾಹನಗಳು ವೇಗವಾಗಿ ಚಲಿಸುವುದರಿಂದ ವಾಹನಗಳನ್ನು ಚಾಲಿಸಲು ತುಂಬಾ ಭಯವಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳು ತಕ್ಷಣವೇ ಗಿಡಗಂಟಿಗಳನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕೆಂದು ಮನವಿ.

– ಕೃಷ್ಣೇಗೌಡ, ಜಿ. ಮಹಾದೇವಪ್ಪ, ಮೈಲಾರಿಗೌಡ, ಗ್ರಾಮಸ್ಥರು.

ಅನ್ನದಾತನಿಗೆ ಬೆಳೆ ವಿಮೆಯಿಂದ ಪರಿಹಾರ ಕೊಡಿಸಿ

ಮಾನ್ಯರೆ,

ಸಂಕಷ್ಟ ಕಾಲದಲ್ಲಿ ರೈತರ ನೆರವಿಗೆ ಬರಬೇಕಿದ್ದ ಬೆಳೆ ವಿಮೆ ಯೋಜನೆಯು ರಾಜ್ಯದ ಬಹುತೇಕ ರೈತರ ವಿಶ್ವಾಸವನ್ನು ಕಳೆದುಕೊಂಡು ವರ್ಷಗಳೇ ಕಳೆದಿವೆ. ಅಧಿಕಾರದ ಚುಕ್ಕಾಣಿ ಹಿಡಿದ ಚುನಾಯಿತ ಜನಪ್ರತಿನಿಧಿಗಳು ಕೂಡ ವಿಮೆಯ ಬಗ್ಗೆ ಚಕಾರ ಎತ್ತಲಿಲ್ಲ. ಅತಿವೃಷ್ಟಿ ಮತ್ತು ಅನಾವೃಷ್ಟಿಯಂತಹ ಪ್ರಕೃತಿ ವಿಕೋಪಗಳ ಸಂದರ್ಭಗಳಲ್ಲಿ ಕೃಷಿಕರ ಕೈಹಿಡಿಯಬೇಕಾದ ಪ್ರಧಾನಮಂತ್ರಿ ಫಸಲ್ ಭಿಮಾ ಯೋಜನೆ ಸಂಪೂರ್ಣ ವಿಫಲಗೊಂಡಿದ್ದು, ರೈತರ ಸ್ಥಿತಿ ಚಿಂತಾಜನಕವಾಗಿದೆ. ಕಳೆದ ನಾಲ್ಕು ವರ್ಷಗಳಿಂದ ರಾಜ್ಯದಲ್ಲಿ ಅತಿವೃಷ್ಟಿ, ನೆರೆ ಹಾವಳಿಯಿಂದ ವ್ಯಾಪಕ ಬೆಳೆ ನಷ್ಟವಾಗಿದ್ದು, ಇಂತಹ ಸಂಕಷ್ಟ ಕಾಲದಲ್ಲಿ ಬೆಳೆ ವಿಮೆ ರೈತರಿಗೆ ಆಸರೆಯಾಗಬೇಕಿತ್ತು. ಆದರೆ ದೇಶದ ಬೆನ್ನೆಲುಬಾದ ರೈತನಿಗೆ ಅವನ ಬೆನ್ನೆಲುಬೇ ಮುರಿದಂತಾಗಿದೆ. ರೈತರು ಕಟ್ಟಿದ ಪ್ರೀಮಿಯಂ ಕೂಡ ಕೈಗೆ ಸಿಗುತ್ತಿಲ್ಲ ಎಂಬ ಸಂಗತಿ ವಿಷಾದನೀಯ.

ಕೃಷಿ ಮತ್ತು ಕಂದಾಯ ಇಲಾಖೆ ಸಿಬ್ಬಂದಿ ವಿಮಾ ಕಂಪೆನಿಗಳ ಪರವಾಗಿ ಕೆಲಸ ಮಾಡುತ್ತಿವೆ ಎಂಬುದು ಸಾಕಷ್ಟು ರೈತರ ಅಳಲು. ವಿಮಾ ಷರತ್ತುಗಳಲ್ಲಿ ಲೋಪ ಸೇರಿದಂತೆ ವಿವಿಧ ಕಾರಣಗಳಿಂದಾಗಿ ರೈತರು ಬಸವಳಿದು ಹೋಗಿದ್ದಾರೆ. ರೈತರು ತಮ್ಮ ಈ ಎಲ್ಲಾ ಕಷ್ಟವನ್ನು ಹೇಳಿಕೊಳ್ಳಲು ವಿಮಾ ಕಂಪೆನಿಗಳ ಟೋಲ್ ಫ್ರೀ ಸಂಖ್ಯೆಗಳೇ ಕೆಲಸ ಮಾಡುತ್ತಿಲ್ಲ. ಆದಕಾರಣ ಈ ಎಲ್ಲಾ ಸಂಕಷ್ಟಗಳನ್ನು ಗಮನದಲ್ಲಿ ಇಟ್ಟುಕೊಂಡು ಸಂಬಂಧಪಟ್ಟವರು ಸೂಕ್ತ ತನಿಖೆ ನಡೆಸಿ, ರೈತರಿಗೆ ನೆರವಾಗಬೇಕಿದೆ.

–ವಿಜಯಕುಮಾರ್ ಎಚ್.ಕೆ., ರಾಯಚೂರು

ಇಂದು ವಿಶ್ವ ಆಯುರ್ವೇದ ದಿನಾಚರಣೆ

ಆಯುರ್ವೇದ ಜೀವನ ಶೈಲಿ ರೋಗ ನಿವಾರಣೆಗೆ ಪೂರಕ





ಆಯುರ್ವೇದ ದಿನಾಚರಣೆ ಈ ಬಾರಿ ಅಕ್ಟೋಬರ್ 23 ಅಂದರೆ ದೀಪಾವಳಿಯ ಹಿಂದಿನ ದಿನ ಧನ್ವಂತರಿ ತ್ರಯೋದಶಿಯಂದು. ಕಾರ್ತಿಕ ಮಾಸದ ಕೃಷ್ಣ ಪಕ್ಷದ ತ್ರಯೋದಶಿ ದಿನದಂದು ಶ್ರೀಮನ್ನಾರಾಯಣ ದೇವವೈದ್ಯ ಧನ್ವಂತರಿಯನ್ನು ಸ್ತುತಿಸುವ ದಿನದಂದೇ ವಿಶ್ವದಾದ್ಯಂತ ನಮ್ಮ ದೇಶದ ಹೆಮ್ಮೆಯ ವೈದ್ಯಕೀಯ ಪದ್ಧತಿ 'ಆಯುರ್ವೇದ ವಿಜ್ಞಾನ ದಿನ'ವನ್ನಾಗಿ 2016ರಿಂದ ಆಚರಿಸಲಾಗುತ್ತಿದೆ.

ಜೀವನ ವಿಜ್ಞಾನವಾದ ಆಯುರ್ವೇದ ಜೀವನ ಶೈಲಿ, ಆಹಾರ ವಿಹಾರಗಳಿಂದ ಆಧುನಿಕ ಜೀವನದ ಹಲವಾರು ರೋಗಗಳ ನಿವಾರಣೆ, ನಿಯಂತ್ರಣ ಹಾಗೂ ಬಾರದಂತೆ ತಡೆಯುವುದು ಸಾಧ್ಯ ಎಂಬ ಪ್ರಯತ್ನಕ್ಕೆ ಈ ದಿನ ನಾಂದಿ. ಆಯುರ್ವೇದದ ವಿಶೇಷ ವಿಭಾಗಗಳಾದ ಅಷ್ಟಾಂಗ ಆಯುರ್ವೇದ, ಪಂಚಕರ್ಮ ಚಿಕಿತ್ಸೆಗಳ ಮಹತ್ವ, ರಸಾಯನ ಚಿಕಿತ್ಸೆ, ಋತುಚರ್ಯ, ದಿನಚರ್ಯೆಯ ಮಹತ್ವ ಪರಿಣಾಮ ಮುಂತಾದವುಗಳನ್ನು ಜಗತ್ತಿಗೇ ಸಾರಿ ಹೇಳಲು ಮುಂದಿನ ದಿನಗಳಲ್ಲಿ ಆಯುರ್ವೇದ ಶಾಸ್ತ್ರವನ್ನು ಜಗತ್ತಿನ ಮುಖ್ಯವಾಹಿನಿಗೆ ತರಲು ನಾವೆಲ್ಲರೂ ಪ್ರಯತ್ನಿಸಬೇಕಾಗಿದೆ. ಆರೋಗ್ಯವೇ ಐಶ್ವರ್ಯ ಎಂಬ ನಾಣ್ಣುಡಿಯಂತೆ ಈ ಧನ್ವಂತರಿ ತ್ರಯೋದಶಿಯಂದೇ ಮಹಾಲಕ್ಷ್ಮಿ ಜನಿಸಿದ ದಿನವೂ ಹೌದು, ಹಾಗಾಗಿ ಆರೋಗ್ಯ ಮತ್ತು ಸಂಪತ್ತಿಗಾಗಿ ಲಕ್ಷ್ಮಿ ಪೂಜೆಯೂ ಹಬ್ಬದ ಸಡಗರವೂ ಮಹತ್ವ ಪಡೆದಿದೆ. ಕ್ಷೀರ ಸಾಗರ ಮಥನ ಕಾಲದಲ್ಲಿ ಬಿದಿಗೆಯ ದಿನದಿಂದ ಅಮೃತ ಕಲಶ ಸಮೇತ ಪ್ರಕಟವಾದ ವೈದ್ಯ ಸ್ವರೂಪಿ ಶ್ರೀ ಧನ್ವಂತರಿ ಅವತರಿಸಿದನೆಂದು ಪುರಾಣದಲ್ಲಿ ಹೇಳಿದ್ದರೆ, ಕಾಶೀನಾಥ ಮಗ ದಿವೋದಾಸನಾಗಿ ಸುಧಾಂಶು ವಂಶದಲ್ಲಿ ಕಾರ್ತಿಕ ಬಹುಳ ದ್ವಾದಶಿಯಂದು ಅವತರಿಸಿದ್ದಾನೆ. ಆಯುರ್ವೇದ ಸಂಹಿತೆ ಶಾಸ್ತ್ರಗಳನ್ನು ಉಪದೇಶಿಸುತ್ತಾನೆ. ಹೀಗೆ ದೇವ ಸ್ವರೂಪಿಯಾಗಿದ್ದರೂ, ಮಾನವನಾಗಿ ಜನಿಸಿ ಭಾರದ್ವಾಜ ಋಷಿಗಳ ಬಳಿ ಆಯುರ್ವೇದ ಕಲಿತು, ಮುಂದೆ ಆಯುರ್ವೇದ ಶಾತ್ರದ ಅಧಿಪತಿಯಾಗಿ ಆಯುರ್ವೇದ ಅಷ್ಟಾಂಗಗಳಾದ ಕಾಯ, ಬಲ, ಗೃಹ, ಊರ್ಧ್ವಾಂಗ, ಶಲ್ಯ, ದಂಷ್ಟ್ರಾ, ಜರಾ ವೃಷ್ಯ ಎಂಬ ಅಧ್ಯಯನ ಯೋಗ್ಯ ವಿಷಯಗಳ ಪ್ರಾಚುರ್ಯದ ಮೂಲಕ ಜಗತ್ತಿಗೇ ಆಯುರ್ವೇದವನ್ನು ಸಾರುತ್ತಾನೆ. ಶಲ್ಯ ಶಾಲಾಕ್ಯ ಶಸ್ತ್ರಚಿಕಿತ್ಸೆಯನ್ನು ಸುಶ್ರುತ ಸಂಹಿತೆಯನ್ನು ಶಿಷ್ಯರಿಗೆ ನೀಡುತ್ತಾನೆ.

ಈ ರೀತಿ ಅಮೃತ ತತ್ವವನ್ನು ಪ್ರತಿನಿಧಿಸುವ ಧನ್ವಂತರೀ ದೇವನ ಜಯಂತಿಯ ದಿನದಂದೇ ರಾಷ್ಟ್ರೀಯ ಆಯುರ್ವೇದ ದಿನವೆಂದು ಆಚರಿಸಲಾಗುತ್ತಿದೆ. ಮನೆಮನೆಯಲ್ಲಿ ಆಯುರ್ವೇದ 'ಹರ್‌ದಿನ್ ಹರ್ ಘರ್ ಆಯುರ್ವೇದ' ಎಂಬುದು ಈ ವರ್ಷದ ಧ್ಯೇಯವಾಕ್ಯವಾಗಿದ್ದು, ಆಜಾದಿಯ ಅಮೃತ ಮಹೋತ್ಸವದ ಈ ವರ್ಷದಲ್ಲಿ ಮಾನವೀಯ ಮೌಲ್ಯ ಸಾರುವ, ಪ್ರಕೃತಿಯೊಂದಿಗೆ ಸಹ ಜೀವನ ಅಭಿವ್ಯಕ್ತಿ ಆರೋಗ್ಯಕರ ಜೀವನ ಶೈಲಿಯನ್ನು ಜಗತ್ತಿಗೇ ಸಾರುವ ಭಾರತದ ಧ್ಯೇಯೋದ್ದೇಶ ಹೊಂದಿರುವ ಈ ವಿಜ್ಞಾನವನ್ನು ಜಗತ್ತಿಗೇ ಪ್ರಚುರಪಡಿಸುವ ಸದುದ್ದೇಶದೊಂದಿಗೆ ಆಯುಷ್ ಸಚಿವಾಲಯದ ಅಡಿಯಲ್ಲಿ ಆಲ್ ಇಂಡಿಯಾ ಇನ್ಸ್‌ಟಿಟ್ಯೂಟ್ ಆಫ್ ಆಯುರ್ವೇದ (AIIA) ದ ಸಹಯೋಗದೊಂದಿಗೆ ಜನಸಾಮಾನ್ಯರಿಗೆ ತಲುಪುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ವಿಶ್ವ ಆಯುರ್ವೇದ ದಿನದ ಲಾಂಛನ ಹಾಗೂ ಸಂಕೇತ ಈ ಕೆಳಗಿನ ಅಂಶಗಳನ್ನು ಸಂಕೇತಿಸುತ್ತದೆ; 1) ಲಾಂಛನ ಮಧ್ಯಭಾಗದಲ್ಲಿರುವ ಧನ್ವಂತರಿಯ ಚಿತ್ರವು ಔಷಧಿಯ ಅಧಿಪತಿಯಾದ ಧನ್ವಂತರಿಯನ್ನು ಸಂಕೇತಿಸುತ್ತದೆ. 2) 5 ದಳಗಳು ಪಂಚ ಮಹಾಭೂತವನ್ನು ಸಂಕೇತಿಸಿದರೆ ಕೆಳಗಿನ 3 ವೃತ್ತಗಳು ಆಯುರ್ವೇದದ ಮೂಲ ತತ್ವಗಳಾದ ವಾತ, ಪಿತ್ತ, ಕಫವನ್ನು ಪ್ರತಿನಿಧಿಸುತ್ತದೆ. ಈ ಅಂಶಗಳನ್ನೆಲ್ಲ ಸುತ್ತುವರಿದ ಅಂಡಾಕಾರದ ಎಲೆಯೂ ಈ ಮೂಲಭೂತ ತತ್ವಗಳ ಆಧಾರದ ಮೇಲೆ ಪ್ರಕೃತಿಯ ಮೂಲಕ ಗುಣಪಡಿಸುವ ತತ್ವವನ್ನು ಚಿತ್ರಿಸುತ್ತದೆ.

ಇಂತಹ ಮಹತ್ವಪೂರ್ಣ ಸಾಂಕೇತಿಕ ಲಾಂಛನವನ್ನು ಹೊಂದಿರುವ ಆಯುರ್ವೇದ ದಿನವು ಕೇವಲ ಸಾಂಕೇತಿಕ ಆಚರಣೆಯಾಗದೇ ನಮ್ಮ ಜೀವನಶಾಸ್ತ್ರವಾಗಿರುವ ಆಯುರ್ವೇದದ ಮೂಲಕ ಆಧುನಿಕ ಜೀವನ ಶೈಲಿ, ಆಹಾರ ವಿಹಾರಗಳಿಂದ ಉಂಟಾದ ಆಧುನಿಕ ರೋಗಗಳ ನಿಯಂತ್ರಣ, ನಿವಾರಣೆ ಸಾಧ್ಯ ಎಂಬ ಅರಿವು ಮೂಡಿಸುವ ಪ್ರಯತ್ನ ಜಗತ್ತಿಗೇ ಮಾದರಿಯಾಗಲಿದೆ. ಆಯುರ್ವೇದವು ಸಮಾಜದ ಮುಖ್ಯವಾಹಿನಿಗೆ ಬರುವಂತಾಗಲಿ, ಸಿದ್ಧ ಗುರು ಅಗಸ್ತ್ಯ, ಆಯುರ್ವೇದ ಗುರು ಧನ್ವಂತರಿಯ ಆಶೀರ್ವಾದವು ಸಕಲರಿಗೂ ಸಿಗಲಿ !

ನಮಾಮಿ ಧನ್ವಂತರಿಂ ಆದಿ ದೇವಂ
ಸುರಾಸುರೈಃ ವಂದಿತ ಪಾದ ಪದ್ಮಃ ।
ಲೋಕೋ ಜರಾರುಕ್ ಭಯ ಮೃತ್ಯು ನಾಶ
ದಾತಾರಂ ಈಶಂ ವಿವಿಧೌಷಧೀನಾಂ ॥



–ಡಾ.ಎಂ.ಎಸ್.ಸುಧಾ
ಮೊ.9448071933
drsudhamn@yahoo.com

ಮಕ್ಕಳಿಂದ ದೇಣಿಗೆ ಸಂಗ್ರಹ

ಆಯುಕ್ತರು ಹೊರಡಿಸಿರುವ ಸುತ್ತೋಲೆ; ಇದಕ್ಕೂ ನಮಗೂ ಸಂಬಂಧ ಇಲ್ಲ...!?

- **ಪ್ರಾಥಮಿಕ ಶಿಕ್ಷಣ ಸಚಿವ ನಾಗೇಶ್ 'ಮುಗ್ಧ' ಹೇಳಿಕೆ**
- **ಸುತ್ತೋಲೆ ಹಿಂಪಡೆಯಲು ಹೇಳುತ್ತೇನೆ**



ಬೆಂಗಳೂರು, ಅ.22–ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಮಕ್ಕಳ ಪಾಲಕರಿಂದ ದೇಣಿಗೆ ಸಂಗ್ರಹ ಮಾಡುವ ವಿಚಾರದಲ್ಲಿ ತಮ್ಮ ಹಾಗೂ ಮುಖ್ಯಮಂತ್ರಿಗಳ ಪಾತ್ರವಿಲ್ಲ ಎಂದು ಸ್ಪಷ್ಟಪಡಿಸಿರುವ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಬಿ.ಸಿ.ನಾಗೇಶ್, ಶಿಕ್ಷಣ ಇಲಾಖಾ ಆಯುಕ್ತರು ಹೊರಡಿಸಿರುವುದು ಸುತ್ತೋಲೆಯಷ್ಟೇ ಹೊರತು, ಆದೇಶವಲ್ಲ. ಕೆಲವರು ಅದನ್ನು ಸರಿಯಾಗಿ ಓದದೇ ಪ್ರತಿಕ್ರಿಯೆ ನೀಡುತ್ತಿದ್ದಾರೆ ಎಂದಿದ್ದಾರೆ.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ಎಸ್‌ಡಿಎಂಸಿ ಸಲಹೆ ಮೇರೆಗೆ ಇಲಾಖೆಯ ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ. ಅವರು ಇಂತಹ ಸುತ್ತೋಲೆ ಹೊರಡಿಸಲು ಸಂವಿಧಾನದಲ್ಲಿ ಅವಕಾಶವಿದೆ. ಈ ವಿಚಾರವನ್ನು ಅವರು ಸರ್ಕಾರದ ಗಮನಕ್ಕೆ ತರಲೇಬೇಕೆಂಬುದೇನೂ ಇಲ್ಲ ಎಂದರಲ್ಲದೆ, ಸುತ್ತೋಲೆ ಹಿಂಪಡೆಯಲು ಶಿಕ್ಷಣ ಇಲಾಖೆ ಆಯುಕ್ತರಿಗೆ ಸೂಚಿಸಲಿರುವುದಾಗಿ ತಿಳಿಸಿದರು.

ಶಾಲೆಗಳ ಅಭಿವೃದ್ಧಿಗೆ ಸ್ಥಳೀಯವಾಗಿ ದೇಣಿಗೆ ಸಂಗ್ರಹಿಸಲು ಆರ್‌ಟಿಇ ಕಾಯ್ದೆಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಇದು ಶೈಕ್ಷಣಿಕವಾಗಿ ಉತ್ತಮ ಕಾಯ್ದೆಯಾಗಿದ್ದು, ಅದನ್ನು ಸಿದ್ದರಾಮಯ್ಯನವರ ಸರ್ಕಾರ ಜಾರಿಗೆ ತಂದಿತ್ತು ಎಂದು ಹೇಳಿದರು.

ಸುತ್ತೋಲೆಯಲ್ಲಿ ಮಕ್ಕಳ ಪಾಲಕರು ಕಡ್ಡಾಯವಾಗಿ ದೇಣಿಗೆ ನೀಡಬೇಕೆಂದು ಇಲ್ಲ. ಅವರಾಗಿಯೇ 100 ರೂ.ವರೆಗೆ ದೇಣಿಗೆ ಕೊಟ್ಟು, ಅದಕ್ಕೆ ರಶೀದಿ ಪಡೆಯಬೇಕು. ಹೀಗೆ ಸಂಗ್ರಹವಾದ ಹಣದಲ್ಲಿ ಶಾಲೆಯ ಅಭಿವೃದ್ಧಿ ಹಾಗೂ ಶಾಲೆಯಲ್ಲಿ ಎಲ್‌ಕೆಜಿ, ಯುಕೆಜಿ ತರಗತಿಗಳನ್ನು ಪ್ರಾರಂಭ ಮಾಡಬಹುದು. ಅದರ ಬಗ್ಗೆ ಎಸ್‌ಡಿಎಂಸಿಗಳು ತೀರ್ಮಾನ ಕೈಗೊಳ್ಳುತ್ತವೆ ಎಂದು ಶಿಕ್ಷಣ ಸಚಿವ ನಾಗೇಶ್ ಹೇಳಿದರು.

ಪಾರಂಪರಿಕ ರಕ್ಷಣಾ ಸಮಿತಿಯಿಂದ ಕುಸಿತಗೊಂಡಿರುವ

ಮಹಾರಾಣಿ ವಿಜ್ಞಾನ ಕಾಲೇಜು ಕಟ್ಟಡ ಪರಿಶೀಲನೆ



ಮೈಸೂರು,ಅ.22(ಎಂಟಿವೈ)– ಕುಸಿತಗೊಂಡಿರುವ ಮೈಸೂರಿನ ಮಹಾರಾಣಿ ವಿಜ್ಞಾನ ಕಾಲೇಜಿನ ರಸಾಯನಶಾಸ್ತ್ರ ವಿಭಾಗದ ಪ್ರಯೋಗಾಲಯದ ಕಟ್ಟಡವನ್ನು ಪಾರಂಪರಿಕ ಸಂರಕ್ಷಣಾ ಸಮಿತಿ ಸದಸ್ಯರು ಶನಿವಾರ ಪರಿಶೀಲಿಸಿದರು.

ಸಮಿತಿಯ ಸದಸ್ಯರಿಗೆ ಕಾಲೇಜಿನ ಪ್ರಾಂಶುಪಾಲ ಡಾ.ಡಿ.ರವಿ ಹಾಗೂ ವಿವಿಧ ವಿಭಾಗಗಳ ಮುಖ್ಯಸ್ಥರು, ಉಪನ್ಯಾಸಕರು ಕಾಲೇಜಿನ ಕಟ್ಟಡದ ಭದ್ರತೆಯ ಬಗ್ಗೆ ವಿವರಣೆ ನೀಡಿದರು. ಕುಸಿತಗೊಂಡಿರುವ ಕಟ್ಟಡವನ್ನು ಪರಿಶೀಲಿಸಿದ ಸಮಿತಿ ಸದಸ್ಯರು ಕಾಲೇಜಿನ ಕಟ್ಟಡದ ಸ್ಥಿತಿಗತಿಯನ್ನು ಅವಲೋಕಿಸಿದರು. ಈ ವೇಳೆ ಕೈಗೊಂಡ ಮುಂಜಾಗ್ರತಾ ಕ್ರಮದಿಂದ ವಿದ್ಯಾರ್ಥಿನಿಯರು ಹಾಗೂ ಲ್ಯಾಬ್‌ನ ಸಿಬ್ಬಂದಿಗಳನ್ನು ಅಪಾಯದಿಂದ ಪಾರು ಮಾಡಿದ ಕಾಲೇಜಿನ ಪ್ರಾಂಶುಪಾಲರು ಹಾಗೂ ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರು ಮತ್ತು ಲ್ಯಾಬ್ ಸಿಬ್ಬಂದಿಗಳ ಸಮಯ ಪ್ರಜ್ಞೆಯನ್ನು ಪ್ರಶಂಸಿಸಿದರು.

ಸಲಹೆ ನೀಡಿದ್ದೇನೆ: ಪರಿಶೀಲನೆ ಬಳಿಕ ಪತ್ರಕರ್ತರೊಂದಿಗೆ ಪಾರಂಪರಿಕ ಸಂರಕ್ಷಣಾ ಸಮಿತಿ ಸದಸ್ಯ ಪ್ರೊ.ಎನ್.ಎಸ್.ರಂಗರಾಜು ಮಾತನಾಡಿ, ವಿಜ್ಞಾನ ಕಾಲೇಜಿನ ಕಟ್ಟಡ ಕುಸಿತವಾಗಿರುವ ವಿಭಾಗದಲ್ಲಿರುವ ಎಲ್ಲಾ ಕೊಠಡಿ ಹಾಗೂ ಲ್ಯಾಬ್‌ಗಳನ್ನು ಮುಚ್ಚುವಂತೆ ಸಲಹೆ ನೀಡಲಾಗಿದೆ. ಈ ಕಟ್ಟಡ ದುರಸ್ತಿಗೆ ಎರಡು ವರ್ಷದ ಹಿಂದೆಯೇ ವರದಿ ಸಲ್ಲಿಸಲಾಗಿತ್ತು. ಮೇಲ್ನೋಟಕ್ಕೆ ಕಟ್ಟಡದ ಮೇಲ್ಭಾಗದಲ್ಲಿ ಟೈಲ್ಸ್ ಅಳವಡಿಸಿರುವುದರಿಂದ ಭಾರ ಹೆಚ್ಚಾಗಿ ಮೇಲ್ಛಾವಣಿ ಕುಸಿಯಲು ಕಾರಣವಾಗಿದೆ.

ಕಾಲೇಜಿನ ಕಟ್ಟಡ ಗೋಡೆ ಪಕ್ಕದಲ್ಲೇ ಸಾಲಾಗಿ ಮರ ಬೆಳೆಸಲಾಗಿದೆ. ಆ ಮರಗಳ ಬೇರುಗಳು ಅಡಿಪಾಯವನ್ನು ಸಡಿಲಗೊಳಿಸಿವೆ. ಆ ಕಾರಣದಿಂದಲೇ ಕಟ್ಟಡ ಶಿಥಿಲಗೊಳ್ಳಲಾರಂಭಿಸಿದೆ. ಅರಣ್ಯ ಇಲಾಖೆ ಅರ್ಜಿ ಸಲ್ಲಿಸಿ, ಕಟ್ಟಡದ ಗೋಡೆಗೆ ಹೊಂದಿಕೊಂಡಂತಿರುವ ಮರಗಳನ್ನು ತೆರವು ಮಾಡಬೇಕು. ಬಳಿಕ ಅದರ ಬೇರುಗಳಿಗೆ ಆ್ಯಸಿಡ್ ಹಾಕಿ ಬೇರನ್ನು ಬೆಳೆಯದಂತೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. ಈ ಕಟ್ಟಡವನ್ನು ಮೂಲ ಸ್ವರೂಪದಲ್ಲಿಯೇ ದುರಸ್ತಿ ಮಾಡಬಹುದು. ಬಿರುಕು ಬಿಟ್ಟ ಗೋಡೆಗಳಿಗೆ ಮೂಲ ಸ್ವರೂಪದಂತೆ ಸುಣ್ಣದ ಗಾರೆಯನ್ನೇ ಬಳಸಿ, ದುರಸ್ತಿ ಮಾಡಬೇಕಾಗಿದೆ ಎಂದರು. ಮೈಸೂರು ಮಹಾನಗರ ಪಾಲಿಕೆ ಕಚೇರಿ ಕಟ್ಟಡವೂ ಸೋರುತ್ತಿದೆ. ಅದನ್ನು ಪರಿಶೀಲಿಸಿ, ವರದಿ ಸಲ್ಲಿಸುವಂತೆ ಈ ವೇಳೆ ಹಾಜರಿದ್ದ ಮೇಯರ್ ಶಿವಕುಮಾರ್ ಪ್ರೊ.ಎನ್.ಎಸ್. ರಂಗರಾಜು ಅವರನ್ನು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ರಂಗರಾಜು ಮಂಗಳವಾರದ ಬಳಿಕ ನಗರ ಪಾಲಿಕೆ ಕಚೇರಿಗೆ ಬಂದು ಪರಿಶೀಲಿಸುವುದಾಗಿ ಸ್ಪಷ್ಟಪಡಿಸಿದರು. ಈ ಸಂದರ್ಭದಲ್ಲಿ ಕಾಲೇಜಿನ ಪಾರಂಪರಿಕ ಇಲಾಖೆ ಉಪನಿರ್ದೇಶಕಿ ಮಂಜುಳಾ, ಕಾಲೇಜಿನ ಪ್ರಾಂಶುಪಾಲ ಡಾ.ಡಿ.ರವಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.


ಇಂದು ಕ್ಯಾಂಡಲ್ ಲೈಟ್ ಪ್ರತಿಭಟನೆ

ಮೈಸೂರಿನ ಪಾರಂಪರಿಕ ಕಟ್ಟಡಗಳ ರಕ್ಷಣೆಗಾಗಿ ಆಗ್ರಹಿಸಿ, ಲೆಟ್ಸ್ ಡೂ ಇಟ್ ಮೈಸೂರು ಸಂಸ್ಥೆ ವಿವಿಧ ಸಂಘ ಸಂಸ್ಥೆಗಳ ನೆರವಿನಿಂದ ಅ.23ರಂದು ಸಂಜೆ 7ಕ್ಕೆ ಮೈಸೂರಿನ ಸರಸ್ವತಿಪುರಂನಲ್ಲಿರುವ ಅಗ್ನಿಶಾಮಕ ಠಾಣೆಯ ಕುಸಿತಗೊಂಡಿರುವ ಕಟ್ಟಡದ ಮುಂದೆ ಮೇಣದ ಬತ್ತಿ ಬೆಳಗಿಸಿ, ಮೈಸೂರಿನ ಪಾರಂಪರಿಕ ಕಟ್ಟಡಗಳ ರಕ್ಷಣೆಗೆ ಒತ್ತಾಯಿಸಲಿದ್ದಾರೆ. ಪಾರಂಪರಿಕ ನಗರ ಎಂಬ ಖ್ಯಾತಿ ಪಡೆದಿರುವ ಮೈಸೂರಿನ ಪರಂಪರೆ ನಶಿಸುವಂತೆ ಕಾಣುತ್ತಿದೆ. ಪಾರಂಪರಿಕ ಕಟ್ಟಡಗಳು ರಕ್ಷಣೆಗಾಗಿ ಅಂಗಲಾಚುವಂತಹ ಸ್ಥಿತಿ ನಿರ್ಮಾಣವಾಗಿದೆ. ಹಾಗಾಗಿ ಮೇಣದ ಬತ್ತಿ ಪ್ರತಿಭಟನೆ ಹಮ್ಮಿಕೊಂಡಿರುವುದಾಗಿ ಲೆಟ್ಸ್ ಡೂ ಇಟ್ ಮೈಸೂರು ಸಂಸ್ಥೆಯ ಮುಖ್ಯಸ್ಥ ಬಿ.ಎಸ್.ಪ್ರಶಾಂತ್‌ಕುಮಾರ್ ತಿಳಿಸಿದ್ದಾರೆ.

> “ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ನೇತೃತ್ವದ ಸರ್ಕಾರದಲ್ಲಿ ಉಸ್ತುವಾರಿ ಸಚಿವನಾಗಿದ್ದ ವೇಳೆ ಮೈಸೂರಿನ ಪಾರಂಪರಿಕ ಕಟ್ಟಡಗಳ ರಕ್ಷಣೆಗೆ ಕ್ರಮ ಕೈಗೊಳ್ಳಲಾಗಿತ್ತು. ಅದಕ್ಕಾಗಿ ಮೈಸೂರು ಪಾರಂಪರಿಕ ಕಮಿಟಿ ರಚಿಸಲಾಗಿತ್ತು. ಅದನ್ನು ಮುಂದುವರೆಸಿಕೊಂಡು ಹೋಗಿದ್ದರೆ, ಪಾರಂಪರಿಕ ಕಟ್ಟಡಗಳ ರಕ್ಷಣೆಗೆ ಯುನಿಸೆಫ್‌ನಿಂದ ಹಣವೂ ಬರುತ್ತಿತ್ತು. ಆದರೆ, ಯಾವ ಸರ್ಕಾರವೂ ಮೈಸೂರು ನಗರ, ಮೈಸೂರು ಪರಂಪರೆ, ಸಂಪ್ರದಾಯವನ್ನು ಗಂಭೀರವಾಗಿ ತೆಗೆದುಕೊಳ್ಳದ ಕಾರಣ ಪಾರಂಪರಿಕ ಕಟ್ಟಡ ಕುಸಿಯುತ್ತಿವೆ.
>
> –ಎ.ಹೆಚ್.ವಿಶ್ವನಾಥ್, ಎಂಎಲ್‌ಸಿ

ವಿದ್ಯಾರ್ಥಿಗಳ ಪೋಷಕರಿಂದ ದೇಣಿಗೆ ಸಂಗ್ರಹ ನಾಚಿಕೆಗೇಡು

- **ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ಸರ್ಕಾರಕ್ಕೆ ಛೀಮಾರಿ**
- **ಸರ್ಕಾರಿ ಕನ್ನಡ ಶಾಲೆಗಳ ಮುಚ್ಚುವ ಕುತಂತ್ರ**
- **ಬಡ ಮಕ್ಕಳ ಶಿಕ್ಷಣವನ್ನು ಸರ್ಕಾರವೇ ಕಿತ್ತುಕೊಳ್ಳುತ್ತಿದೆ**



ಮೈಸೂರು,ಅ.22(ಎಂಟಿವೈ)– ಸರ್ಕಾರಿ ಶಾಲೆಗಳ ನಿರ್ವಹಣೆಯ ನೆಪದಲ್ಲಿ ವಿದ್ಯಾರ್ಥಿಗಳಿಂದ ದೇಣಿಗೆ ಸಂಗ್ರಹಿಸಲು ಮುಂದಾಗಿರುವ ಕ್ರಮದಿಂದ ಹಿಂದೆ ಸರಿಯುವಂತೆ ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳ ಪಾಲಕರಿಂದ ಹಣ ಸಂಗ್ರಹಿಸುವ ಮೂಲಕ ಶಾಲಾ ಶಿಕ್ಷಣವನ್ನು ದಿಕ್ಕು ತಪ್ಪಿಸುವ ಹುನ್ನಾರ ನಡೆಸಲು ಹೊರಟಿರುವುದು ಖಂಡನೀಯ. ರಾಜ್ಯದ ಸರ್ಕಾರಿ ಶಾಲೆಗಳಿಗೆ ಅಗತ್ಯವಿರುವ ಖರ್ಚು–ವೆಚ್ಚಗಳಿಗಾಗಿ ಮಕ್ಕಳ ಪಾಲಕರಿಂದ ದೇಣಿಗೆ ರೂಪದಲ್ಲಿ ಪ್ರತಿ ತಿಂಗಳು 100 ರೂ. ಸಂಗ್ರಹಿಸಲು ಹೊರಡಿಸಿರುವ ಸುತ್ತೋಲೆಯನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕೂಡಲೇ ವಾಪಸ್ ಪಡೆದುಕೊಳ್ಳಬೇಕು ಎಂದು ಆಗ್ರಹಿಸಿದರಲ್ಲದೆ, ಸರ್ಕಾರಿ ಶಾಲೆಗಳಲ್ಲಿ ಆರ್ಥಿಕವಾಗಿ ಹಿಂದುಳಿದ ಮಕ್ಕಳು ಓದುತ್ತಾರೆ. ಇಂತಹ ಕ್ರಮದ ಮೂಲಕ ಸರ್ಕಾರಿ ಶಾಲೆಗಳನ್ನು ಮುಚ್ಚುವ ಸ್ಥಿತಿಗೆ ತಂದಿದ್ದಾರೆ. ಇದಕ್ಕೆ ಮುಖ್ಯಮಂತ್ರಿ, ಶಿಕ್ಷಣ ಸಚಿವರೇ ಹೊಣೆಗಾರರು ಎಂದು ಸ್ವಪಕ್ಷೀಯರ ವಿರುದ್ಧವೇ ಕಿಡಿಕಾರಿದರು.

ಕನ್ನಡ ಶಾಲೆ ಮುಚ್ಚುವ ಸಂಚು?: ರಾಜ್ಯದಲ್ಲಿ ಈಗಾಗಲೇ ಕನ್ನಡ ಶಾಲೆಗಳು ಮುಚ್ಚುವ ಸ್ಥಿತಿ ತಲುಪಿವೆ. ಸರ್ಕಾರಿ ಕನ್ನಡ ಶಾಲೆ ಮುಚ್ಚಿಸಲು ಬೇಕಾಗಿರುವ ಹುನ್ನಾರವನ್ನೆಲ್ಲಾ ನಡೆಸಲಾಗುತ್ತಿದೆ. ಹಿಂದೆ ಸರ್ಕಾರದಿಂದಲೇ ಶಾಲಾ ನಿರ್ವಹಣೆಗೆ ವರ್ಷಕ್ಕೆ ನಿಗದಿತ ಅನುದಾನ ನೀಡುತ್ತಿದ್ದರು. ಈಗ ಅದೆಲ್ಲವನ್ನು ನಿಲ್ಲಿಸಿದ್ದಾರೆ. ಈಗ ನಿರ್ವಹಣಾ ವೆಚ್ಚ ಹೆಸರಿನಲ್ಲಿ 100 ರೂ. ವಸೂಲಿ ಮಾಡಲು ಸುತ್ತೋಲೆ ಹೊರಡಿಸಲಾಗಿದೆ. ಪಾಲಕರಿಂದ ದೇಣಿಗೆ ತೆಗೆದುಕೊಳ್ಳುವುದು ಸರಿಯೇ? ಎಂದು ಕಿಡಿಕಾರಿದರು.

ಜನರು ಸಂಕಷ್ಟದಿಂದ ಹೊರಬಂದಿಲ್ಲ: ಕಳೆದ 2 ವರ್ಷದಿಂದ ಕೋವಿಡ್ ಸಾಂಕ್ರಾಮಿಕ ರೋಗದ ಸಮಸ್ಯೆಯಿಂದಾಗಿ ಜನರು ಸಾಕಷ್ಟು ಕಷ್ಟ ಅನುಭವಿಸಿದ್ದಾರೆ. ಇನ್ನು ಆ ಸಂಕಷ್ಟದಿಂದ ಅವರು ಹೊರ ಬಂದಿಲ್ಲ. ಸಾಕಷ್ಟು ಮಂದಿಗೆ ಇನ್ನೂ ಸರಿಯಾಗಿ ಕೆಲಸ ಸಿಕ್ಕಿಲ್ಲ. ಕೋವಿಡ್‌ನಿಂದ ತತ್ತರಿಸಿದ ಕುಟುಂಬದ ಮಕ್ಕಳು ಸರಿಯಾಗಿ ಶಾಲೆಗೆ ಬರುತ್ತಿಲ್ಲ. ಅವರನ್ನು ಶಾಲೆಗೆ ಮರಳಿ ಕರೆತರಲು ಇಲಾಖೆಯೂ ಯಾವ ಕೆಲಸವನ್ನೂ ಮಾಡುತ್ತಿಲ್ಲ. ಇಂತಹ ಸಂದರ್ಭದಲ್ಲಿ ತಿಂಗಳಿಗೆ 100 ರೂ. ಸಂಗ್ರಹಿಸಲು ಮುಂದಾಗಿರುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಕನ್ನಡ ಭಾಷೆ ಇದರಿಂದ ಕನ್ನಡ ಶಾಲೆಗಳು ಬಂದ್ ಆಗುತ್ತವೆ ಎಂದು ವಿಷಾದಿಸಿದರು.

ಸರ್ಕಾರದ ಕರ್ತವ್ಯ: ಎಲ್ಲಾ ಮಕ್ಕಳಿಗೆ ಶಿಕ್ಷಣ ನೀಡುವುದು ರಾಜ್ಯ ಸರ್ಕಾರದ ಆದ್ಯ ಕರ್ತವ್ಯ. ಆದರೆ, ಶುಲ್ಕ ಸಂಗ್ರಹಿಸಲು ಮುಂದಾಗುವ ಮೂಲಕ ಬಡ ಮಕ್ಕಳ ಶಿಕ್ಷಣವನ್ನು ಸರ್ಕಾರವೇ ಕಿತ್ತುಕೊಳ್ಳುತ್ತಿದೆ. ಇದು ಆರ್ಥಿಕವಾಗಿ ಹಿಂದುಳಿದವರಿಗೂ ಮಾರಕವಾಗಿದೆ. ಆದ್ದರಿಂದ ಯಾವುದೇ ಕಾರಣಕ್ಕೂ ಈ ಆದೇಶ ಜಾರಿಗೊಳಿಸಬಾರದು ಎಂದು ಒತ್ತಾಯಿಸಿದರು.

ದಾನಿಗಳ ನೆರವು ಪಡೆಯಿರಿ: ಸರ್ಕಾರಿ ಶಾಲೆಗಳ ನಿರ್ವಹಣೆಗೆ ಸರ್ಕಾರದಲ್ಲಿ ಹಣವಿಲ್ಲದಿದ್ದರೆ ದಾನಿಗಳ ಮೊರೆ ಹೋಗಬಹುದು. ಈಗಾಗಲೇ ಹಲವು ಸಂಘ ಸಂಸ್ಥೆಗಳು ಅನೇಕ ಶಾಲೆಗಳನ್ನು ದತ್ತು ತೆಗೆದುಕೊಂಡು ನಿರ್ವಹಿಸುತ್ತಿರುವ ಉದಾಹರಣೆ ನಮ್ಮ ಮುಂದೆ ಇದೆ. ನಮ್ಮಲ್ಲಿ ಸಾಕಷ್ಟು ಕಂಪನಿಗಳು, ಸಮಾಜ ಸೇವಾ ಸಂಸ್ಥೆಗಳಿವೆ. ಅವುಗಳ ವ್ಯಾಪ್ತಿಯಲ್ಲಿರುವ ಸರ್ಕಾರಿ ಶಾಲೆಗೆ ನೆರವು ನೀಡುವಂತೆ ಸಂಸ್ಥೆಗಳನ್ನು ಕೇಳಿ. ಅದನ್ನು ಬಿಟ್ಟು ಬಡ ಕುಟುಂಬದ ಪೋಷಕರಿಂದ ನಿರ್ವಹಣೆಗೆ ಹಣ ವಸೂಲಿ ಮಾಡಿದರೆ ಹೇಗೆ? ಇದರ ಪರಿಣಾಮ ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಲು ಹಿಂಜರಿಯುತ್ತಾರೆ. ಶಾಲೆಗೆ ಮಕ್ಕಳು ಬರಬಾರದೆಂದು ಸರ್ಕಾರ ನಿರೀಕ್ಷಿಸುತ್ತಿರುವಂತಿದೆ. ಎತ್ತರದ ಪ್ರತಿಮೆಗಳನ್ನು ನಿಲ್ಲಿಸುವುದರಿಂದ ದೇಶ ಪ್ರಗತಿ ಸಾಧ್ಯವಿಲ್ಲ. ಶಿಕ್ಷಣ ಮತ್ತು ಆರೋಗ್ಯದ ಮೇಲೆ ದೇಶದ ಪ್ರಗತಿ ನಿಂತಿದೆ ಎಂದು ಕಿಡಿಕಾರಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡ ರೇವಣ್ಣ ಉಪಸ್ಥಿತರಿದ್ದರು.

ದಲಿತರ ಮನೆಗೆ ಹೋಗಿ ಅವರಿಗೆ ಅಪಮಾನ ಮಾಡಬೇಡಿ

ದಲಿತರ ಮನೆಯಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಊಟ ಮಾಡಿದ್ದಾರೆ. ಆದರೆ, ನಿಮ್ಮನ್ನು ಯಾರು ಕರೆದಿರೋದು. ಇಂತಹ ಗಿಮಿಕ್ ನಿಲ್ಲಿಸಬೇಕು. ಇದರಿಂದ ದಲಿತರಿಗೆ ಅವಮಾನ ಮಾಡಿದಂತಾಗುತ್ತದೆ. ಹೊರಗಿನಿಂದ ನೀವೇ ತಟ್ಟೆ, ಲೋಟ ಸೇರಿದಂತೆ ಎಲ್ಲವನ್ನು ತೆಗೆದುಕೊಂಡು ದಲಿತರ ಮನೆಗೆ ಹೋಗಿ ತಿನ್ನೋದು ಸರಿಯೇ?, ಹೋಟೆಲ್‌ಗಳಿಂದ ಊಟ–ತಿಂಡಿ ತರಿಸಿ ತಿನ್ನೋರು ನೀವು. ನೀವು ಮಾಡಬೇಕಾದ ಕೆಲಸ ಮಾಡಿ. ಅದು ಬಿಟ್ಟು ನೀವು ನಿಮ್ಮ ರಾಜಕೀಯ ಲಾಭಕ್ಕಾಗಿ ಹೋಗಬೇಡಿ. ದಲಿತರ ಮನೆಗೆ ನೀವು ಬಂದರೆ ನಿಮಗೆ ಲಾಭ. ಆದರೆ, ಅವರಿಗೆ ಏನು ಲಾಭ? ಆದ್ದರಿಂದ ದಲಿತ ಮನೆಗಳಿಗೆ ದಯಮಾಡಿ ಹೋಗಬೇಡಿ. ಅಲ್ಲಿಗೆ ಹೋಗಿ ಅವರಿಗೂ ಅವಮಾನ ಮಾಡಬೇಡಿ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದಲಿತರ ಮನೆಗೆ ಹೋಗುವುದಾದರೆ ನಿರ್ದಿಷ್ಟ ಕಾರ್ಯಕ್ರಮದೊಂದಿಗೆ ಹೋಗಿ. ಅದು ಬಿಟ್ಟು ನೀವು ಬ್ರಾಂಡ್ ಹೋಟೆಲ್ ಊಟ–ತಿಂಡಿ ತಿನ್ನೋಕೆ ದಲಿತರ ಮನೆ ಹೋಗಬೇಕಾ? ಬ್ರಾಹ್ಮಣರ, ಲಿಂಗಾಯತರ ಹೋಟೆಲ್‌ನ ಊಟ ತರಿಸಿ ತಿನ್ನೋಕೆ ದಲಿತರ ಮನೆಗೆ ಏಕೆ ಹೋಗ್ತಿರಾ? ರಾಜಕೀಯ ಲಾಭಕ್ಕಾಗಿ ಅಲ್ಲಿಗೆ ಹೋಗಬೇಡಿ ಎಂದು ಎಂಎಲ್‌ಸಿ ಎ.ಹೆಚ್.ವಿಶ್ವನಾಥ್ ಗುಡುಗಿದರು.

ಮಹಾರಾಜರಿಗಿಂತ ನಾನೇ ದೊಡ್ಡೋನು ಅಂತಾರೆ: ಹಲವು ವರ್ಷಗಳಿಂದ ಮೈಸೂರು–ಬೆಂಗಳೂರು ನಡುವೆ ಸಂಚರಿಸುತ್ತಿದ್ದ ಟಿಪ್ಪು ಎಕ್ಸ್‌ಪ್ರೆಸ್ ರೈಲಿನ ಹೆಸರು ಬದಲಿಸದೇ, ಹೊಸ ರೈಲಿಗೆ ಒಡೆಯರ್ ಹೆಸರು ನಾಮಕರಣ ಮಾಡುವಂತೆ ಸಲಹೆ ನೀಡಿದ್ದಕ್ಕೆ, ಸಂಸದ ಪ್ರತಾಪ್ ಸಿಂಹ ಮೈಸೂರಿನ ಮಹಾರಾಜರಿಗಿಂತ ನಾನೇ ಜಾಸ್ತಿ ಕೆಲಸ ಮಾಡಿದ್ದೇನೆ ಎಂದು ಹೇಳಿದ್ದಾರೆ. ಅವರ ಬಗ್ಗೆ ನಾನೇನು ಮಾತನಾಡಲಿ. ಅವರು ದೊಡ್ಡ ವ್ಯಕ್ತಿ ಎಂದು ಹರಿಹಾಯ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



■ ಹುಸ್ಕೂರು ಅಂಬಿಕಾಶಿವನಂಜಪ್ಪ,
ಮೊ.9901657675

ದೀಪಗಳ ಹಬ್ಬ ದೀಪಾವಳಿ


"ದೀಪಗಳ ಹಬ್ಬ ದೀಪಾವಳಿ. ಮನೆ ಮನಗಳಲ್ಲಿ ಬೀದಿ ಬೀದಿಗಳಲ್ಲಿ ಸಂಭ್ರಮ ಸಡಗರದಿಂದ ಆಚರಿಸುವ ಬಹು ದೊಡ್ಡ ಹಬ್ಬ. ದೀಪಾವಳಿ ಹಬ್ಬವನ್ನು ಮೂರು ದಿನಗಳ ಕಾಲ ಭಾರತದಾದ್ಯಂತ ಆಚರಿಸುತ್ತಾರೆ. ದೀಪ ಎಂದರೆ ಹಣತೆ. ಹಣತೆ, ಅರಿವು ಅಥವಾ ತಿಳಿವಳಿಕೆ ಅಥವಾ ಜ್ಞಾನದ ಪ್ರತೀಕ. ಹಾಗಾಗಿ ದೀಪಾವಳಿ ಜ್ಞಾನದ ಹಬ್ಬವೂ ಹೌದು.

ಎಲ್ಲಾ ಕಾಲಘಟ್ಟದಲ್ಲೂ ನಾನಾ ರೀತಿಯ ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಆರ್ಥಿಕ ವ್ಯವಸ್ಥೆಗಳು ಮಾನವ ಜಗತ್ತನ್ನು ಕೆಲವೊಮ್ಮೆ ತಲ್ಲಣಗೊಳಿಸುತ್ತವೆ. ಮನುಷ್ಯ ಮನುಷ್ಯತ್ವವನ್ನು ಮರೆತು ಸಮಾಜ ಘಾತುಕನಾಗಿ ತಾನೂ ಬದುಕಲಾರದೇ ಇತರರನ್ನೂ ಬದುಕಲು ಬಿಡದೆ ಪಾಪದ ಕೂಪದಲ್ಲಿ ಬಿದ್ದು ನರಳುತ್ತಾನೆ. ಇಂತಹ ಅಸಮಾನತೆಯನ್ನು ತೊಡೆದು ಹಾಕಿ, ನಾನು ನನ್ನದು ಎಂಬ ಅಹಂಕಾರವನ್ನು ಹೋಗಲಾಡಿಸಿ ಶಾಂತಿಯನ್ನು ಸ್ಥಾಪಿಸಲು, ಜನರಲ್ಲಿ ಅರಿವನ್ನು ಮೂಡಿಸಲು ದೇವರು, ಧರ್ಮದ ಹೆಸರಿನಲ್ಲಿ ನಾಡಿನ ಜನರು ಅವರವರ ಭಾವಕ್ಕೆ ಭಕುತಿಗೆ ತಕ್ಕಂತೆ ಜಾತ್ರೆಗಳನ್ನು, ಹಬ್ಬಹರಿದಿನಗಳನ್ನು, ಜಯಂತೋತ್ಸವಗಳನ್ನು ಆಚರಿಸುತ್ತಾ ಬಂದಿದ್ದಾರೆ. ಇಂತಹ ಆಚರಣೆಗಳ ಹಿಂದೆ ಒಂದೊಂದು ಇತಿಹಾಸವೇ ತೆರೆದುಕೊಳ್ಳುತ್ತದೆ. ಅದೇನೇ ಇರಲಿ ಆಚರಣೆಗಳು, ಹಬ್ಬಗಳು, ಪ್ರವಚನಗಳು, ಸಂವಾದಗಳು, ನಂಬಿಕೆಗಳು ಮಾನವ ಜಗತ್ತಿನ ಆರೋಗ್ಯಪೂರ್ಣ ವ್ಯವಸ್ಥೆಗೆ ಪೂರಕವಾಗಿದ್ದರೆ ಸ್ವಸ್ಥಸಮಾಜವನ್ನು ಕಾಣಬಹುದು. ಪ್ರತಿಯೊಬ್ಬ ನಾಗರಿಕನಾದವನು ವೈಯಕ್ತಿಕ ಮತ್ತು ಸಾರ್ವಜನಿಕ ವಲಯದ ಇತಿಮಿತಿಯನ್ನು ಅರಿತವನಾಗಿರಬೇಕು. ಅಂತಹ ವ್ಯಕ್ತಿಯು ಆ ಚೌಕಟ್ಟಿನೊಳಗೆ ಬದುಕುವುದನ್ನು ಕಲಿಯುತ್ತಾನೆ. ತಾನೂ ಬದುಕುತ್ತಾನೆ. ಇತರರನ್ನೂ ಬದುಕಲು ಬಿಡುತ್ತಾನೆ.

ಅಂತೆಯೇ ಈ ವರ್ಷ ನಡೆಯುವ ದೀಪಾವಳಿ ಹಬ್ಬ ಮನಮನೆಗಳಲ್ಲಿ ಸುಖಶಾಂತಿ ತರುವ ಹಬ್ಬವಾಗಲಿದೆ. ಮೊದಲ ದಿನದ ಹಬ್ಬ ನರಕಚತುರ್ದಶಿ. ನರಕ ಎಂಬ ರಾಜ್ಯದ ರಾಜ ಯಮ. ಈತ ಸಾವಿನ ದೇವತೆ ಕೂಡ ಹೌದು. ಸಕಲ ಜೀವರಾಶಿಗಳೂ ಒಂದಲ್ಲ ಒಂದು ದಿನ ಸಾವನ್ನು ಸ್ವೀಕರಿಸಲೇ ಬೇಕು. ಪ್ರತಿಯೊಂದು ಜೀವರಾಶಿಯು ಸಾಯುವ ಬಗೆ ಬೇರೆ ಬೇರೆಯಾಗಿರುತ್ತದೆ. ಸಾವು ಬರಲಿ, ಆದರೆ ಸಾಯುವ ರೀತಿ ಬದಲಾಗಲಿ. ನರಕಯಾತನೆ ಅನುಭವಿಸಿ ಸಾಯುವ ಬದಲು ಉತ್ತಮ ರೀತಿಯಲ್ಲಿ ಸ್ವರ್ಗ ಪ್ರಾಪ್ತಿಯಾಗಲಿ ಎಂದು ಬೇಡಿಕೊಳ್ಳುವ ಹಬ್ಬ ಇದಾಗಿರುತ್ತದೆ. ಮುಕ್ತಿ ಸಿಗಲಿ ಎಂದು ಬೇಡುವ ಯಮನ ಪೂಜೆಯೇ ನರಕಚತುರ್ದಶಿ ಎಂಬ ಪ್ರತೀತಿಯಿದೆ. ಹಾಗಾಗಿ ಇದಕ್ಕೆ ತನ್ನದೇ ಆದ ಪೌರಾಣಿಕ ಹಿನ್ನೆಲೆಯೂ ಇದೆ.



ಮುರ ಎಂಬುವನು ಐದು ತಲೆಯ ಅಸುರ. ಈತ ನರಕಾಸುರನ ಪರಮ ಮಿತ್ರ. ಮುರ ತನ್ನ ಪ್ರೀತಿಯ, ಸ್ನೇಹದ ದ್ಯೋತಕವಾಗಿ ನರಕಾಸುರನಿಗೆ ಪ್ರಾಗ್ಜೋತಿಷಪುರವನ್ನು ಕಟ್ಟಿಸಿಕೊಟ್ಟಿದ್ದ. ಪ್ರಾಗ್ಜೋತಿಷಪುರವನ್ನು ಸುತ್ತುವರೆದಿದ್ದ ಭದ್ರವಾದ ಕೋಟೆಯನ್ನು ಇಂದ್ರನಿಂದಲೂ ಭೇದಿಸಲಾಗಲಿಲ್ಲ. ಕೋಟೆಯನ್ನು ಭೇದಿಸಿ ನರಕಾಸುರನನ್ನು ತಲುಪಬೇಕಾದರೆ ಮೊದಲು ಮುರ ಹಾಗೂ ಆತನ ಏಳು ಜನ ಮಕ್ಕಳನ್ನು ಕೊಲ್ಲಬೇಕಾಗಿತ್ತು ಇಂದ್ರನು ಛತ್ರಿಚಾಮರ, ಅದರಲ್ಲೂ ಮುಖ್ಯವಾಗಿ ತನ್ನ ತಾಯಿ ಅದಿತಿಯ ಕಿವಿಯ ಓಲೆಗಳನ್ನು ಕಳೆದುಕೊಂಡಿದ್ದ. ಸೋತು ನೊಂದಿದ್ದ ಇಂದ್ರ ಕೃಷ್ಣನ ಬಳಿ ಸಲಹೆ ಕೇಳಿದ. ಕೃಷ್ಣ ಸ್ವತಃ ಸತ್ಯಭಾಮೆಯೊಟ್ಟಿಗೆ ನರಕಾಸುರನನ್ನು ಸಂಹರಿಸಲು ಹೊರಟ. ಪ್ರಾರಂಭದಲ್ಲಿ ಕೃಷ್ಣನ ವಿರುದ್ಧ ಮುರ ಮತ್ತು ಆತನ ಏಳು ಮಕ್ಕಳು ದಂಡೆತ್ತಿ ಬಂದರು. ಕೃಷ್ಣನು ಮುರನ ಒಂದೊಂದು ತಲೆಯನ್ನು ಕತ್ತರಿಸಿದನು. ಕೊನೆಗೆ ಮುರನ ಏಳು ಜನ ಮಕ್ಕಳನ್ನು ಸಂಹರಿಸಿದನು. ಇದನ್ನು ಕಣ್ಣಾರೆ ಕಂಡು ಹಿಗ್ಗಿದ ಸತ್ಯಭಾಮೆ ತನ್ನ ಪತಿದೇವರಿಗೆ "ಮುರಾರಿ" ಎಂದು ಕರೆದಳು. ಇದೆಲ್ಲವನ್ನು ಗಮನಿಸಿದ ನರಕಾಸುರ ಅರಮನೆಯಿಂದ ಹೊರ ಬಂದು ಯುದ್ಧಕ್ಕೆ ನಿಂತ. ಕೃಷ್ಣ ಪಾಂಚಜನ್ಯವನ್ನು ಮೊಳಗಿಸಿ, ನರಕಾಸುರನತ್ತ ಬಾಣಗಳ ಸುರಿಮಳೆಗರೆದ ಕೃತಯುಗದಿಂದ ಬಾಳಿ ಬದುಕಿದ್ದ ಪ್ರಬಲ ಮತ್ತು ಧೈರ್ಯಶಾಲಿ ನರಕಾಸುರ ಕೃಷ್ಣನ ಮೇಲೆ ಬಾಣಗಳನ್ನು ಹೂಡಿದ. ನರಕಾಸುರನ ಬಾಣವೊಂದು ಕೃಷ್ಣನ ಕೈಯನ್ನು ಗಾಯಗೊಳಿಸಿತು. ನರಕಾಸುರನು ತನ್ನ ಶಕ್ತ್ಯಾಯುಧದಿಂದ ಗರುಡನನ್ನು ಗಾಯಗೊಳಿಸಿದ. ಆಗ ಸತ್ಯಭಾಮೆ ಕೃಷ್ಣನ ಸ್ಥಾನದಲ್ಲಿ ನಿಂತು ನರಕಾಸುರನ ಮೇಲೆ ಬಾಣ ಪ್ರಯೋಗ ಮಾಡಿದಳು. ನರಕಾಸುರನಿಗೆ ಆಘಾತವಾಯಿತು. ನೋವಿನಿಂದ ಬಳಲಿದ. ಅದೇ ವೇಳೆಗೆ ಕೃಷ್ಣ ಚೇತರಿಸಿಕೊಂಡು ತನ್ನ ಚಕ್ರಾಯುಧದಿಂದ ನರಕಾಸುರನ ರುಂಡವನ್ನು ಕತ್ತರಿಸಿದ. ನರಕಾಸುರನ ಬಂಧಿಗಳಾಗಿದ್ದ ಹದಿನಾರು ಸಾವಿರ ಕಾಮನೆಗಳನ್ನು ಬಿಡುಗಡೆ ಮಾಡಿ ತನ್ನಲ್ಲಿ ಲೀನಗೊಳಿಸಿದ. ನರಕಾಸುರನ ವಿನಂತಿಯ ಮೇರೆಗೆ ಕೃಷ್ಣನ ಮಾತಿನಂತೆ ದೀಪಾವಳಿ ಹಬ್ಬದ ದಿನ ಜನರೆಲ್ಲರೂ ನರಕಾಸುರನ ನೆನಪಿಗಾಗಿ ಇಡೀ ರಾತ್ರಿ ದೀಪ ಹಚ್ಚಿದರು. ಆ ದಿನವನ್ನು "ನರಕಚತುರ್ದಶಿ" ಎಂದು ಕರೆದರಂತೆ. ನರಕ ಚತುರ್ದಶಿಯ ದಿನ ದೀಪಗಳನ್ನು ಬೆಳಗುವುದರ ಮೂಲಕ ಮನಸ್ಸಿನ ಅಂಧಕಾರವನ್ನು ಹೋಗಲಾಡಿಸಿದರೆ, ಮನೆ ಮಂದಿಯಲ್ಲಾ ಮೈ ಕೈಗಳಿಗೆಲ್ಲಾ ಎಣ್ಣೆ ಹಚ್ಚಿ ಅಭ್ಯಂಗ ಅಥವಾ ಮಂಗಳ ಸ್ನಾನ ಮಾಡುವುದರ ಮೂಲಕ ದೇಹದ



ಮಲಿನತೆಯನ್ನು ತೊಳೆದು ಸ್ವಚ್ಛಗೊಳಿಸುತ್ತಾರೆ. ಅಂದು ಬೆಟ್ಟದ ಅಮಾವಾಸ್ಯೆ. ಕೆಲವು ಕಡೆ ಮಹದೇಶ್ವರನ ರಥೋತ್ಸವವೂ ನಡೆಯುತ್ತದೆ. ಮನೆಗಳಲ್ಲಿ ಕಜ್ಜಾಯ ತುಪ್ಪ ಅಂದಿನ ವಿಶೇಷ ಅಡುಗೆಯಾಗಿರುತ್ತದೆ. ಹಬ್ಬದ ಮೊದಲ ದಿನ ಮನೆಮನೆಗಳಲ್ಲಿ ಹೊಸ ನೀರು ತುಂಬಿಸಿ, ಕೆರೆಬಾವಿಗಳಲ್ಲಿ ಪೂಜೆ ಸಲ್ಲಿಸುತ್ತಾರೆ. ಪ್ರತಿ ಮನೆಗಳಲ್ಲೂ ಕಡ್ಡಾಯವಾಗಿ ದೋಸೆ ಮಾಡುತ್ತಾರೆ. ಇದನ್ನು "ದೋಸೆ ಕಲ್ಲು ಎತ್ತುವುದು" ಎನ್ನುತ್ತಾರೆ. ಇಡ್ಲಿ ಈ ಹಬ್ಬದ ದಿನ ಮಾಡಲೇಬೇಕಾದ ಮತ್ತೊಂದು ಅಡುಗೆ.

ಎರಡನೇ ದಿನ ಗಾಢಾಂಧಕಾರ ಕವಿದ ಕತ್ತಲೆಯ ದಿನ. ದೀಪ ಬೆಳಗಿಸುವ ಮೂಲಕ ಪ್ರತಿಯೊಬ್ಬ ಮಾನವನು ಕೂಡ ಒಳಹೊರಗುಗಳನ್ನು ಪರಿಶುದ್ಧಗೊಳಿಸುವ ದಿನ. ಲಕ್ಷ್ಮಿ ಎಂದರೆ ಧನ, ಧಾನ್ಯ, ಆಯುಷ್ಯ, ಆರೋಗ್ಯ, ಸಂಪತ್ತು, ದನಕರುಗಳು ಇತ್ಯಾದಿ ಐಶ್ವರ್ಯಗಳನ್ನು ಪೂಜಿಸುವ ದಿನ. ಅಂದು ಸತ್ತ ಹಿರೀಕರಿಗೆ ತರ್ಪಣ ನೀಡಿ ಅವರ ನೆನಪಿಗಾಗಿ, ನಮ್ಮಲ್ಲಿರುವ ಸಂಪತ್ತನ್ನು ಬಡಬಗ್ಗರಿಗೆ ದಾನ ಮಾಡುವ ಮೂಲಕ ಮನಸ್ಸಿಗೆ ಸಂತಸ ತಂದುಕೊಳ್ಳುವುದು.

ಮೂರನೇ ದಿನ ಬಲಿಪಾಡ್ಯಮಿ. ಭಾರತ ಹಳ್ಳಿಗಳ ದೇಶ. ರೈತರೇ ಭಾರತ ದೇಶದ ಬೆನ್ನೆಲುಬು. ಕೃಷಿಯೇ ಇಲ್ಲಿನ ಜೀವಾಳ. ಹಾಗಾಗಿ ಕೃಷಿ ಪ್ರಧಾನವಾದ ಭಾರತದಲ್ಲಿ ಅದರಲ್ಲೂ ಹಿಂದೂ ಧರ್ಮದಲ್ಲಿ ಗೋವುಗಳನ್ನು ಪೂಜಿಸುತ್ತಾರೆ. ಅಂತೆಯೇ ಬಲಿಪಾಡ್ಯಮಿಯ ದಿನ ಹಸು, ಎತ್ತು, ಕರುಗಳಿಗೆ ಪೂಜೆ ಸಲ್ಲಿಸುತ್ತಾರೆ. ಹಾಗೆಯೇ ಗಂಡಸರಿಗೆ ಗೌರವ ಸಲ್ಲಿಸುವ ಸಲುವಾಗಿ ಕಂಕಣ ಕಟ್ಟಿ ಆರತಿ ಬೆಳಗುತ್ತಾರೆ.

ಬಲಿಪಾಡ್ಯಮಿ ಹಬ್ಬಕ್ಕು ಒಂದು ಪೌರಾಣಿಕ ಹಿನ್ನೆಲೆಯಿದೆ. ಅಸುರರ ದೊರೆ ಬಲಿ. ಪ್ರಹ್ಲಾದನ ಮೊಮ್ಮಗ. ಅತ್ಯಂತ ಬಲಶಾಲಿ. ಬಲಿಯ ಮುತ್ತಜ್ಜ ಹಿರಣ್ಯಕಶಿಪು. ಹಿರಣ್ಯಕಶಿಪುವಿನಂತೆ ಬಲಿ ವಿಷ್ಣುವಿನ ವೈರಿಯಾಗಿರಲಿಲ್ಲ. ದೇವತೆಗಳನ್ನು ದ್ವೇಷಿಸುತ್ತಿರಲಿಲ್ಲ. ಈತ ಹಿರಣ್ಯಕಶಿಪು ಹಾಗೂ ಪ್ರಹ್ಲಾದನ ಹಲವಾರು ಉತ್ತಮ ಗುಣಗಳನ್ನು ಹೊಂದಿದ್ದ. ಅಪಾರ ಸಂಪತ್ತಿನ ಒಡೆಯನಾದ ಇಂದ್ರನನ್ನು ಬಲಿ ಇಷ್ಟಪಡುತ್ತಿರಲಿಲ್ಲ. ಬಲಿ ಒಮ್ಮೆ ಇಂದ್ರನಿಂದ ಹತನಾಗಿ, ರಾಕ್ಷಸರ ಗುರು ಶುಕ್ರಾಚಾರ್ಯರ ಸಂಜೀವಿನಿ ವಿದ್ಯೆಯ ಬಲದಿಂದ ಬದುಕಿದ್ದ. ವಿಶ್ವಜಿತ್ತೆಂಬ ಯಾಗದ ಮೂಲಕ ಇಂದ್ರನನ್ನು ಗೆದ್ದು ಸ್ವರ್ಗದ ಅಧಿಕಾರಿಯಾಗಿದ್ದ. ಹೀಗೆ ಸುರ ಅಸುರರ ನಡುವೆ ಯುದ್ಧ ನಡೆಯುತ್ತಿತ್ತು. ಗೆದ್ದವರು ಅಧಿಕಾರ ಸಂಪತ್ತನ್ನು ಅನುಭವಿಸುತ್ತಿದ್ದರು. ಅಂತೆಯೇ ಒಮ್ಮೆ ದೇವತೆಗಳಿಗೆ ವಿಜಯವಾಗಿ ದೇವೇಂದ್ರ ಅಮರಾವತಿಯ ಅಧಿಪತಿಯಾದ. ಹೀಗಿರಲು ದೂರ್ವಾಸ ಮುನಿಗಳ ಶಾಪಕ್ಕೆ ಗುರಿಯಾಗಿ ಇಂದ್ರ ಮತ್ತೆ ಅಧಿಕಾರವನ್ನು ಕಳೆದುಕೊಂಡನು. ಪರಿಹಾರಕ್ಕಾಗಿ ವಿಷ್ಣುವಿನ ಬಳಿ ಬಂದು ಬೇಡಿದ. ವಿಷ್ಣುವಿನ ಸಲಹೆಯಂತೆ ನಿರ್ಗತಿಕನಾದ ಇಂದ್ರ ಅಸುರರೊಂದಿಗೆ ಮಿತ್ರತ್ವ ಬೆಳೆಸಿ ಉಪಾಯದಿಂದ ಅಧಿಕಾರ ಮತ್ತು ಸಂಪತ್ತನ್ನು ಪಡೆಯುವ ಸಲುವಾಗಿ ಅಸುರರ ದೊರೆ ಬಲಿ ಚಕ್ರವರ್ತಿಯ ಬಳಿ ಬಂದ. ವಿಶಾಲವಾದ ಕ್ಷೀರಸಾಗರವನ್ನು ಮಥಿಸಿ ಅಮೃತದೊಂದಿಗೆ ಜಗತ್ತಿನಲ್ಲಿರುವ ಅಮೂಲ್ಯವಾದ ಸಂಪತ್ತನ್ನು ಹಂಚಿಕೊಳ್ಳಲು ಬಲಿ ಇಂದ್ರನೊಂದಿಗೆ ಒಪ್ಪಂದ ಮಾಡಿಕೊಂಡ. ಸಮುದ್ರ ಮಥನದ ಸಂದರ್ಭದಲ್ಲಿ ವಿಷ್ಣುವಿನ ಕೃಪೆಯಿಂದ ದೇವತೆಗಳಿಗೆ ಅಮೃತ ಲಭ್ಯವಾಯಿತು. ದೇವೇಂದ್ರ ಅಜರಾಮರನಾಗಿ ಅಸುರರ ವಿರುದ್ಧ ಯುದ್ಧ ಮಾಡಿದ. ಯುದ್ಧದಲ್ಲಿ ಜಯಗಳಿಸಿದ ಇಂದ್ರ ಅಮರಾವತಿಯ ಒಡೆಯನಾದ. ಮಹತ್ವಾಕಾಂಕ್ಷಿಯಾದ ಬಲಿಚಕ್ರವರ್ತಿ ಇಂದ್ರಲೋಕವನ್ನು ಮತ್ತೊಮ್ಮೆ ಪಡೆಯಲು ಇಂದ್ರನ ಮೇಲೆ ಯುದ್ಧ ಸಾರಿದ. ಇಂದ್ರ ಯುದ್ಧದಲ್ಲಿ ಸೋತನು. ಬಲಿ ಸ್ವರ್ಗದ ಅಧಿಪತಿಯಾದ. ದಿತಿಯ ಮಕ್ಕಳು ಭೂಮಿ ಸ್ವರ್ಗಲೋಕವನ್ನು ಗೆದ್ದು ವೈಭವದಿಂದ ಬಾಳುತ್ತಿದ್ದರು. ಆದರೆ ದಿತಿಯ ಸೋದರಿ ಅದಿತಿಯ ಮಕ್ಕಳು ಸಂಪತ್ತಿನಿಂದ ವಂಚಿತರಾಗಿದ್ದರು. ನೊಂದ ಅದಿತಿ ಕಶ್ಯಪ ಋಷಿಯ ಬಳಿ ತನ್ನ ವೇದನೆಯನ್ನು ತೋಡಿಕೊಂಡಳು. ಪತ್ನಿಯರಲ್ಲಿ ಭೇದವೆಣಿಸದ ಕಶ್ಯಪನ ಸಲಹೆಯ ಮೇರೆಗೆ ಅದಿತಿ ವಿಷ್ಣುವನ್ನು ಪ್ರಾರ್ಥಿಸಿದಳು. ಅದಿತಿಯ ಬೇಡಿಕೆಯಂತೆ ವಿಷ್ಣು ಕಶ್ಯಪ ಅದಿತಿಯರಿಗೆ ವಾಮನನ ರೂಪದಲ್ಲಿ ಮಗನಾಗಿ ಜನಿಸಿದನು.

ಅತ್ತ ನರ್ಮದಾ ನದಿ ತೀರದಲ್ಲಿದ್ದ ಭೃಗುಕಚ್ಛದಲ್ಲಿ ಬಲಿ ಅಶ್ವಮೇಧಯಾಗ ಮಾಡತೊಡಗಿದ್ದ. ಇದೇ ಸಂದರ್ಭಕ್ಕಾಗಿ ಕಾಯುತ್ತಿದ್ದ ವಾಮನ ಅಲ್ಲಿಗೆ ಧಾವಿಸಿದ. ಯಜ್ಞ ಸ್ಥಳದಲ್ಲಿ ಪ್ರಹ್ಲಾದ ಕೂಡ ಹಾಜರಿದ್ದ. ಶುಕ್ರಾಚಾರ್ಯರಿಗೆ ಬ್ರಾಹ್ಮಣ ವೇಷಧಾರಿಯಾದ ವಾಮನನ್ನು ನೋಡುತ್ತಿದ್ದಂತೆ ಸಂದೇಹ ಉಂಟಾಯಿತು, ವಾಮನನು ದಾನ ಕೇಳುವಾಗ ಎಚ್ಚರಿಕೆಯಿಂದ ಇರಬೇಕೆಂದು ಬಲಿಗೆ ಸೂಚಿಸಿದ. ಆದರೆ ದಾನ ವೀರನಾದ ಬಲಿಯು ತಾನು ಎಲ್ಲರಿಗೂ ಕೇಳಿದ್ದೆಲ್ಲವನ್ನು ಕೊಡುವವನು ಎಂದು ಬೀಗುತ್ತಿದ್ದ. ಅಂತೆಯೇ ಬಲಿಯು ಯಾಗದ ಸಂದರ್ಭದಲ್ಲಿ ಎಲ್ಲರನ್ನು ಸತ್ಕರಿಸುವಂತೆ ವಾಮನನನ್ನು ಕುರಿತು "ತಮಗೆ ಬೇಕಾದ್ದನ್ನು ಕೊಡುವೆನೆಂದು": ವಚನವಿತ್ತ. ವಾಮನ ಅವನ ಮಾತಿಗೆ "ನೀನು ದಯಾಳು ಎಂದು ತಿಳಿದೇ ಆಮಂತ್ರಣವಿಲ್ಲದೆ ಆಗಮಿಸಿದ್ದೇನೆ. ನನಗೆ ಜೀವಿಸಲು ಸ್ವಲ್ಪ ಸ್ಥಳವನ್ನು ಕೊಡು" ಎಂದ. ಶುಕ್ರಾಚಾರ್ಯರ ಮಾತನ್ನು ಆಲಿಸದೆ ಕೊಟ್ಟ ಮಾತನ್ನು ಉಳಿಸಿಕೊಳ್ಳುವ ಸಲುವಾಗಿ ಬಲಿ ಮತ್ತು ಆತನ ಹೆಂಡತಿ ವಿದ್ಯಾವಳಿ ಭೂಮಿಯನ್ನು ದಾನವಾಗಿ ಕೊಡಲು ಒಪ್ಪಿದರು. ವಾಮನನು ಮೂರು ಹೆಜ್ಜೆ ಇಡಲು ಬೇಕಾಗುವಷ್ಟು ಭೂಮಿಯನ್ನು ಬೇಡಿದನು. ಕುಬ್ಜನಾಗಿದ್ದ ವಾಮನ ಬೃಹದಾಕಾರವಾಗಿ ಬೆಳೆದು ಒಂದು ಹೆಜ್ಜೆಯನ್ನು ಆಕಾಶಕ್ಕೂ ಮತ್ತೊಂದು ಹೆಜ್ಜೆಯನ್ನು ಭೂಮಿಯ ಮೇಲಿಟ್ಟನು. ಉಳಿದೊಂದು ಹೆಜ್ಜೆಯಿಡಲು ಜಾಗವಿಲ್ಲದ ಕಾರಣ ಬಲಿ ತನ್ನ ತಲೆಯನ್ನು ಕೊಟ್ಟನು. ಬಲಿಯ ದಾನ ಶೂರತ್ವವನ್ನು ಎಲ್ಲರು ಕೊಂಡಾಡಿದರು. ವಿಷ್ಣು ಸಂತೃಪ್ತನಾಗಿ ಬಲಿಗೆ ಪಾತಾಳದ ಅಧಿಪತ್ಯವನ್ನು ವಹಿಸಿದನು. ಕೊಟ್ಟ ಮಾತಿನಂತೆ ಇಂದ್ರನಿಗೆ ರಾಜ್ಯವನ್ನು ಹಿಂದಿರುಗಿಸಿದನು. ಬಲಿಯು :ಯಾರು ಮೂರು ದಿನಗಳ ಕಾಲ ದೀಪ ಬೆಳಗುವರೋ ಅವರ ಮನೆಯಲ್ಲಿ ನಿನ್ನ ಸಹಧರ್ಮಿಣಿ ಮಹಾಲಕ್ಷ್ಮಿ ನೆಲೆಸಲಿ" ಎಂದು ವಿಷ್ಣುವಿನಲ್ಲಿ ಬೇಡಿಕೊಂಡನು. ಹಾಗಾಗಿ ಕಾರ್ತಿಕ ಶುಕ್ಲ ಪಾಡ್ಯಮಿಯನ್ನು ಬಲಿಯ ನೆನಪಿಗಾಗಿ "ಬಲಿಪಾಡ್ಯಮಿ" ಎಂಬ ಹೆಸರಿನಿಂದ ಆಚರಿಸುತ್ತಾ ಬಂದಿದ್ದಾರೆ ಎಂಬುದು ಪ್ರತೀತಿ.

ಬಲಿಪಾಡ್ಯಮಿಯ ದಿನ ಬಲೀಂದ್ರನನ್ನು ಅಕ್ಕಿ ಅಥವಾ ರೈತರ ಚಿನ್ನ ಸಗಣಿಯಲ್ಲಿ ಮಾಡುತ್ತಾರೆ. ಅಕ್ಕಿ ರಾಗಿ ಮುಂತಾದ ದವಸಧಾನ್ಯಗಳ ತೆನೆಗಳನ್ನು ತಂದು ಆ ಹಿಟ್ಟಿನ ಗೊಂಬೆಗೆ ಸಿಕ್ಕಿಸುತ್ತಾರೆ. ಹೂಗಳಿಂದ ಅಲಂಕರಿಸಿ, ಪೂಜೆ ಸಲ್ಲಿಸುತ್ತಾರೆ. ಇದನ್ನು "ಹಟ್ಟಿ ಹಾಕುವುದು" ಎನ್ನುತ್ತಾರೆ.

ಕೆಲವೆಡೆಗಳಲ್ಲಿ ಗೌರಿಗಣೇಶ ಹಬ್ಬದ ದಿನ ಗಣೇಶನನ್ನು ಮಾತ್ರ ಪೂಜಿಸುತ್ತಾರೆ. ಗೌರಿಯನ್ನು ಹಬ್ಬದ ನಂತರ 3 ರಿಂದ 9 ದಿನಗಳ ತನಕ ಯಾವುದಾದರೊಂದು ದಿನ ಗೌರಿ ಯನ್ನು ಗುಪ್ತವಾಗಿ ಮನೆಗೆ ತರುತ್ತಾರೆ. ಇದನ್ನು ಎಳೆ ಗೌರಿ ಎನ್ನುತ್ತಾರೆ. ಅಂದರೆ ಹತ್ತಿನೂಲಿನ ಗೌರಿ ಅಥವಾ ಹತ್ತಿ ರೂಪದ ಗೌರಿ. ಹೀಗೆ ತಂದ ಗೌರಿಯನ್ನು ಬಲಿಪಾಡ್ಯಮಿಯ ದಿನ ಮನೆಯ ಒಳಗೆ ಮಣ್ಣಿನಲ್ಲಿ ಮುಚ್ಚುತ್ತಾರೆ. ಅಂದರೆ ಶಾಶ್ವತವಾಗಿ ಗೌರಿ ಮನೆಯಲ್ಲಿ ಉಳಿಯುತ್ತಾಳೆ ಎಂಬ ನಂಬಿಕೆ.

ಒಟ್ಟಾರೆ ಹಬ್ಬಗಳ ಆಚರಣೆಗಳಿಗೆ ಯಾವುದೇ ಕಾರಣಗಳಿರಲಿ. ಅದು ಮುಖ್ಯವಾಗುವುದಿಲ್ಲ. ದೀಪಾವಳಿ ಹಬ್ಬ ನಮ್ಮ ನಡೆ ನುಡಿಗಳನ್ನು ಅಂತರಂಗ ಬಹಿರಂಗಗಳನ್ನು ತಿದ್ದಿತೀಡಿ ಶುದ್ಧಗೊಳಿಸುವ ಬೆಳಕಿನ ಹಬ್ಬವಾಗಲಿ. ದೀಪ ಹಚ್ಚುವ ಮೂಲಕ ಅಜ್ಞಾನವನ್ನು ಹೊಡೆದೋಡಿಸೋಣ. ಸುಜ್ಞಾನವನ್ನು ಪಡೆಯೋಣ. ಜ್ಞಾನದ ದೀವಿಗೆಯನ್ನು ಹೊತ್ತು ಮುಂದೆ ನಡೆಯೋಣ ಎಂಬುದು ಆಶಯ.

ದೀಪಾವಳಿಯಿಂದ ದೀಪಾವಳಿಗೆ ವರ್ಷ ಭವಿಷ್ಯ



ಜ್ಯೋತಿಷ ವಿದ್ವಾಂಸ 'ಚೈತನ್ಯಶ್ರೀ'
ವಿ.ಕೇಶವಮೂರ್ತಿ
'ಮೈಸೂರು ಮಿತ್ರ' ವಾರಭವಿಷ್ಯ ಅಂಕಣಕಾರರು, ಕಲ್ಪದ್ರುಮ ಜ್ಯೋತಿಷ ಅಧ್ಯಯನ ಕೇಂದ್ರ (ರಿ).,
533, 6ನೇ ಕ್ರಾಸ್, ಬೋಗಾದಿ 2ನೇ ಹಂತ, ಮೈಸೂರು
ಮೊ.9740973224

ಮೇಷ: ಚು. ಚೆ, ಚೊ, ಲ, ಲಿ, ಲು, ಲೆ, ಲೊ, ಅ



ಈ ದೀಪಾವಳಿಯಿಂದ ಬರುವ ದೀಪಾವಳಿಯವರೆಗೆ ಗುರುಬಲದ ಕೊರತೆ ನಿಮ್ಮನ್ನು ನಾನಾ ವಿಧಗಳಿಂದ ಕಾಡುತ್ತದೆ. ಗಳಿಸಿಕೊಂಡಿರುವ ಸಿರಿ ಸಂಪದಗಳನ್ನು ಸರಿಯಾಗಿ ರಕ್ಷಿಸಿಕೊಳ್ಳಿ, ನಿಮ್ಮ ಬುದ್ಧಿಶಕ್ತಿ ಸಮಯೋಚಿತವಾಗಿ ಕಾರ್ಯನಿರ್ವಹಿಸದು. ವ್ಯಾಪಾರ ಉದ್ಯೋಗಗಳಲ್ಲಿ ಅಲ್ಪಪ್ರಗತಿ, ಆದಾಯಕ್ಕಿಂತ ಖರ್ಚು ಹೆಚ್ಚು. ಧನ, ಧಾನ್ಯ, ನಾಶ, ವ್ಯಾಜ್ಯಗಳಿಂದ ಬವಣೆ ಪಡುವಿರಿ. ಧರ್ಮ ಮಾರ್ಗವನ್ನು ಬಿಡದಿರಿ.

ಶನಿ ಪ್ರಭಾವ ಮಿಶ್ರಫಲವನ್ನು ನೀಡಲಿದೆ. ಮಾರ್ಚ್ 2023 ರ ವರೆಗೆ ಮನಸ್ತಾಪಗಳು, ಪದಭ್ರಷ್ಟತೆ, ಕೃಷಿನಾಶ, ಪಿತೃಸಮಾನ ವ್ಯಕ್ತಿಯ ವಿಯೋಗ, ಏಪ್ರಿಲ್ 2023 ರ ನಂತರ ದೀಪಾವಳಿಯವರೆಗೆ ಅಭೀಷ್ಟ ಸಿದ್ಧಿ, ಸ್ತ್ರೀ ಪುತ್ರಾದಿಗಳಿಗೂ ಅಧಿಕ ಲಾಭ. ಅನೇಕ ವಿಧದ ಸುಖ ಪ್ರಾಪ್ತಿ. ಶ್ರೇಷ್ಠ ಕೀರ್ತಿಗೆ ಭಾಜನರಾಗುವಿರಿ. ನ್ಯಾಯಾಲಯ ವ್ಯವಹಾರಗಳಲ್ಲಿ ಜಯ. ಕಂಟ್ರಾಕ್ಟರುಗಳಿಗೆ ಉತ್ತಮ ಯೋಜನೆಗಳು ದೊರೆಯುವುದು. **'ಓಂ ಐಂ ಕ್ಲೀಂ ಸೌಃ' ಮಂತ್ರವನ್ನು ನಿತ್ಯ 4 ಮಾಲೆ ಜಪಿಸಿ.**

ವೃಷಭ: ಇ, ಉ, ಎ, ಒ, ವ, ವಿ, ವು, ವೆ, ವೊ



ಮುಂದಿನ ಮಾರ್ಚ್ 2023 ರವರೆಗೆ ಲಾಭ ಸ್ಥಾನದಲ್ಲಿ ಪರಿಭ್ರಮಿಸುವ ದೇವಗುರು ಸರ್ವ ಕಾರ್ಯಗಳಲ್ಲಿ ಜಯ, ಯಶಸ್ಸುಗಳನ್ನು ನೀಡಲಿದ್ದಾನೆ. ಎಲ್ಲರಲ್ಲಿ ಪ್ರೀತಿಯನ್ನು ಗಳಿಸುವಿರಿ. ಉತ್ತಮ ಆಹಾರ-ವಿಹಾರಗಳು ಲಭಿಸುತ್ತವೆ. ವಿದ್ವಜ್ಜನರಿಗೆ ಸನ್ಮಾನಗಳು ಉಂಟಾಗಲಿವೆ. ವಿವಾಹಯೋಗ್ಯರು ಮಧು-ಚಂದ್ರಕ್ಕೆ ತೆರಳಲು ಸಿದ್ಧತೆ ಮಾಡಿಕೊಳ್ಳಬಹುದು. ವಾಹನ ಖರೀದಿ ಯೋಗವೂ ಉಂಟು. ಆರೋಗ್ಯವೂ ಸುಧಾರಿಸುವುದು. ನಂತರ ದೀಪಾವಳಿಯವರೆಗೆ ಗುರುಬಲದ ಕೊರತೆಯಿಂದ ಸ್ವಂತ ಬಂಧು ಜನರನ್ನು ತೊರೆದು ದೂರವಿರಬೇಕಾಗುತ್ತದೆ. ರವಿ ನಂದನನಾದ ಶನಿಯು ವರ್ಷಪೂರ್ತಿ ನವಮ-ದಶಮರಲ್ಲಿ ಸಂಚರಿಸುವ ಫಲವಾಗಿ ದುಃಖ ಪ್ರಸಂಗಗಳು, ಮನೋವ್ಯಾಧಿಗಳನ್ನೂ ನೀಡುವನು. ಕೃಷಿಕರಿಗೆ ಶ್ರಮ ಹಾಗೂ ಹಾಕಿದ ಬಂಡವಾಳಕ್ಕೆ ತಕ್ಕ ಪ್ರತಿಫಲ ದೊರೆಯದು. ರಿಯಲ್ ಎಸ್ಟೇಟ್ ವ್ಯವಹಾರ ಮಾಡುವವರಿಗೆ ಹೇಳಿಕೊಳ್ಳುವಂಥ ಆದಾಯವಿರದು. ದುಷ್ಕರ್ಮಕ್ಕೆ ಮನಸ್ಸಾಗುವುದು, ಕೆಲವೊಮ್ಮೆ ಸ್ಥಾನಲಾಭವಾದರೂ ಮನಸ್ಸಿಗೆ ಹಿತವಿರದು. **"ಓಂ ಐಂ ಕ್ಲೀಂ ಶ್ರೀಮ್" ಮಂತ್ರವನ್ನು ನಿತ್ಯ 4 ಮಾಲೆ ಜಪಿಸಿ.**

ಮಿಥುನ: ಕ, ಕಿ, ಕು, ಘ, ಙ್ಞ ಛ, ಕೆ, ಕೊ ಹ



ಮಾರ್ಚ್ 2023 ರವರೆಗೆ ಬೃಹಸ್ಪತಿಯು ನಿಮಗೆ ಶುಭಫಲವನ್ನು ನೀಡಲಾರದ ಭಾವದಲ್ಲಿದ್ದಾನೆ. ವೃತ್ತಿಯಲ್ಲಿ ತೊಂದರೆಗಳು, ನೌಕರ ವರ್ಗದವರಿಗೆ ಬೇಡದ ವರ್ಗಾವಣೆಗಳು, ರಾಜಕೀಯ ವ್ಯಕ್ತಿಗಳಿಗೆ ಹಿನ್ನಡೆ ಹಾಗೂ ಅಪವಾದಗಳು ಉಂಟಾಗಲಿವೆ. ಜೀವನದಲ್ಲಿ ಜಾರಬಾರದು ಎಂದಿದ್ದರೆ ಜಾಗರೂಕರಾಗಿರಿ. ಮಾರ್ಚ್ ನಂತರ ಏಕಾದಶ ಸ್ಥಾನಕ್ಕೆ ಬಂದಾಗ ಸರ್ವಕಾರ್ಯಗಳಲ್ಲಿ ಜಯವೂ, ಲಾಭಗಳೂ ಉಂಟಾಗುವುದು. ವಿವಾಹ ಯೋಗ್ಯರಿಗೆ 'ವೆಡ್‌ಲಾಕ್' ಯೋಗವಿದೆ.

ಈ ವರ್ಷಪೂರ್ತಿ ಶನಿ ಫಲ ಅಷ್ಟು ಅನುಕೂಲವಾಗಿರದು. ಸತಿ-ಸುತರು ನಿಮಗೆ ವಿರುದ್ಧವಾಗಿ ನಡೆಯುವರು. ಕೃಷಿಕರಿಗೆ ಕಾರ್ಯಭಂಗ, ಪ್ರಾಕೃತಿಕವಾಗಿ ಬೆಳೆ ನಾಶ. ಭೂ ವ್ಯವಹಾರಗಳಲ್ಲಿ ಹಾಗೂ ನ್ಯಾಯಾಲಯ ವಿಚಾರಗಳಲ್ಲಿ ಹಿನ್ನಡೆಯನ್ನು ಅನುಭವಿಸಬೇಕಾದೀತು. ಸಮಾಜ ವಿರೋಧಿ ಕೆಲಸಗಳಿಗೆ ಮನಸ್ಸಾಗುವುದು. ಶ್ರೀ ಶನಿ ಪ್ರೀತ್ಯರ್ಥ ಎಳ್ಳೆಣ್ಣೆ ದಾನ. **"ಓಂ ಕ್ಲೀಂ ಐಂ ಸೌಃ" ಮಂತ್ರ ನಿತ್ಯ 3 ಜಪಮಾಲೆ ಜಪಿಸಿ.**

ಕಟಕ: ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ




ಮಾರ್ಚ್ 2023 ರವರೆಗೂ ಬೃಹಸ್ಪತಿಯ ಅನುಗ್ರಹದಿಂದ ಕೈಗೊಂಡ ಮಹತ್ತರ ಕೆಲಸ ಕಾರ್ಯಗಳನ್ನು ದಕ್ಷತೆಯಿಂದಲೂ, ಜಾಣ್ಮೆಯಿಂದಲೂ ಪೂರೈಸಿಕೊಳ್ಳುವಿರಿ. ನಿವೇಶನ, ಗೃಹ ಖರೀದಿಯ ಮಹತ್ವಾಕಾಂಕ್ಷೆಗಳು ಸಾಕಾರಗೊಳ್ಳುವುದು. ಬಂಗಾರ, ರೇಷ್ಮೆ ವ್ಯಾಪಾರಿಗಳಿಗೆ ಹೇರಳ ಧನಲಾಭ. ವಿದ್ಯಾರ್ಥಿಗಳಿಗೆ ಉನ್ನತ ಶ್ರೇಣಿ ದೊರೆಯುವುದು. ನಂತರದ ಉತ್ತರಾರ್ಧಕ್ಕೆ ಸರ್ಕಾರಿ ನೌಕರರಿಗೆ ತನಿಖಾ ಸಂಸ್ಥೆಗಳ ಬಿಸಿ ತಟ್ಟುವುದು. ಪದಚ್ಯುತಿಯೂ ಉಂಟಾದೀತು.

ವರ್ಷಪೂರ್ತಿ ಕಲಿಯುಗ ದಂಡಾಧಿಕಾರಿಯಾದ ಶನಿದೇವನ ಕೃಪಾಭಾವದಿಂದ ಘಟನಾವಳಿಗಳು ನಡೆದೀತು. ಅನಾರೋಗ್ಯ ವೈದ್ಯರ ದರ್ಶನ, ಅಪಘಾತಗಳಿಂದ ಕಂಗಾಲು ಆಗುವಿರಿ. ಸ್ತ್ರೀ ಪುತ್ರರಿಂದ ದೂರ ಇರಬೇಕಾದ ಸಂದರ್ಭ ಒದಗೀತು. ನೀಚಕರ್ಮದಲ್ಲಿ ಆಸಕ್ತಿ, ನಂತರ ಪಶ್ಚಾತ್ತಾಪ ಪಡುವಿಕೆ. ಶ್ರೀ ಶನಿ ಅಷ್ಟೋತ್ತರ ನಿತ್ಯ ಪಠಿಸಿ.

"ಓಂ ಹ್ರೀಂ ಕ್ಲೀಂ ಶ್ರೀಂ" ಮಂತ್ರ ನಿತ್ಯ 4 ಮಾಲೆ ಜಪಿಸಿ.

ಸಿಂಹ: ಮ, ಮಿ, ಮು, ಮೆ, ಮಾ, ಟ, ಟಿ, ಟು, ಟೆ



ಮಾರ್ಚ್ 2023 ರವರೆಗೆ ಸುರಗುರುವು ನಿಮ್ಮನ್ನು ಬಹುವಿಧದಿಂದ ಪರೀಕ್ಷೆಗೆ ಗುರಿ ಮಾಡಲಿದ್ದಾನೆ. ಹಣಕಾಸಿನ ಪರಿಸ್ಥಿತಿ ಹಾಗೂ ಆರೋಗ್ಯ ಹದಗೆಡುವುದು. ಹೃದಯದಲ್ಲಿ ಎಷ್ಟು ಕ್ಲೇಶಗಳು ಉಂಟಾಗುತ್ತದೆ ಎಂದರೆ ಸುಂದರ ವನಿತೆಯರ ನಗು ಮುಖ ಕಾಣಲೂ ಇಷ್ಟಪಡುವುದಿಲ್ಲ. ಅನವಶ್ಯಕ ಸಂಚಾರಗಳೂ, ಪ್ರಯಾಣ ಸಮಯದಲ್ಲಿ ಹಾನಿಕಾರಕ ಘಟನೆಗಳು ಎದುರಾಗುವುದು. ನಂತರ ದೀಪಾವಳಿಯವರೆಗೆ 'ಫುಲ್ ರಿಲೀಫ್', ಕೈಗೊಂಡ ಮಹತ್ವದ ಕೆಲಸ ಕಾರ್ಯಗಳಲ್ಲಿ ಯಶಸ್ಸು, ಭೂ ಸಂಪತ್ತಿನ ಲಾಭ, ಪುತ್ರಲಾಭ ಸಂಭವಿಸುತ್ತದೆ. ವಿವಾಹಾಕಾಂಕ್ಷಿಗಳಿಗೆ ಸೂಕ್ತ ಬಾಳಸಂಗಾತಿ ದೊರೆಯುವರು.

ಮುಂದಿನ ಉತ್ತರಾರ್ಧಕ್ಕೆ ಶನಿದೇವನಿಂದ ಮೊದಲಲ್ಲಿ ಅನಾರೋಗ್ಯ, ದ್ರವ್ಯನಷ್ಟ, ವಿರೋಧಗಳು, ಪಾಲುದಾರಿಕೆ ವ್ಯವಹಾರದಲ್ಲಿ ನಷ್ಟ, ಪತ್ನಿಗೆ ಅನಾರೋಗ್ಯ. ನಂತರದಲ್ಲಿ ಧನ-ಧಾನ್ಯ ಲಾಭ, ಆಪ್ತ ಬಂಧು ವರ್ಗದವರಿಂದ ಆದರ, ಸ್ತ್ರೀ ಸೌಖ್ಯ, ನೂತನ ಗೃಹ ನಿರ್ಮಾಣಕ್ಕೆ ಪೂರ್ವ ತಯಾರಿ. ಅಧಿಕಾರಿ ವರ್ಗದವರಿಂದ ಸಹಾಯ.

'ಶನಿ ಶಾಂತಿ, ನಿತ್ಯ ಶ್ರೀ ಆದಿತ್ಯ ಹೃದಯ ಪಠಿಸಿ.'


ಕನ್ಯಾ: ಟೊ. ಪ, ಪಿ, ಪು, ಷ, ಣ, ದ, ಪೆ, ಪೊ





2023 ಮಾರ್ಚ್‌ವರೆಗೆ ಶುಭ ಗುರುವಿನ ಪರಿಣಾಮ ನಡೆ-ನುಡಿಗಳಲ್ಲಿ ದೃಢತೆ, ಆತ್ಮವಿಶ್ವಾಸದಿಂದ ಹಂತಹಂತವಾಗಿ ಸತ್ಫಲಗಳನ್ನು, ಮೇಲ್ಮೆಯನ್ನೂ ಗಳಿಸುವಿರಿ. ನೌಕರ ವರ್ಗದವರಿಗೆ ಉನ್ನತ ಸ್ಥಾನಕ್ಕೆ ಬಡ್ತಿ ದೊರೆಯುವುದು. ನಿವೇಶನ, ಮನೆ ಒಡೆಯರಾಗುವ ಸಾಧ್ಯತೆ ಇದೆ. ಶಿಕ್ಷಣ ಸಂಸ್ಥೆಗಳಿಗೆ ಹೆಚ್ಚಿನ ಧನಾರ್ಜನೆ ಆಗುವುದು. ಸುವರ್ಣ, ರಜತ ಒಡವೆಗಳ ಖರೀದಿಯಿಂದ ಗೃಹ ಲಕ್ಷ್ಮಿಗೆ ಸಂಭ್ರಮ. ವಧು-ವರಾನ್ವೇಷಣೆ ಸಫಲವಾಗಲಿದೆ. ಏಪ್ರಿಲ್ ನಂತರ ಅನಾರೋಗ್ಯ ಕಾಡಿಸುವುದು. ಔಷಧೋಪ ಚಾರಕ್ಕೆ ಹಣವ್ಯಯ ಆಗುವುದು. ಮಿತ್ರರೇ ಮುಖ ತಿರುಗಿಸು ವರು. ನವಿಲಿನ ನರ್ತನವೂ, ಕೋಗಿಲೆಯ ಮಧುರ ಧ್ವನಿಯೂ ಬೇಕೆನಿಸುವುದಿಲ್ಲ. ನ್ಯಾಯಮಾರ್ಗ ಕೋವಿದನಾದ ಶನಿದೇವ ಮಿಶ್ರಫಲದಾಯಕನಾಗಿದ್ದಾನೆ. ಏಪ್ರಿಲ್ 2023 ರವರೆಗೆ ನಿಮ್ಮ ಸ್ವಭಾವದಲ್ಲಿ ತೀಕ್ಷ್ಣತೆ ಕಂಡುಬರುತ್ತದೆ. ಶತ್ರುಗಳ ಮೇಲೆ ವಿಜಯವನ್ನೂ ಸಾಧಿಸುವಿರಿ. ನ್ಯಾಯಾಲಯ ವಿಚಾರಗಳು ನಿಮ್ಮ ಪರವಾಗಿರುತ್ತದೆ. ನಂತರ ಪಂಚಮ ಶನಿ ಕಾಟದ ಪರಿಣಾಮ ಸತಿ-ಸುತರಲ್ಲಿ ಕಲಹಗಳು ಉಂಟಾಗುತ್ತವೆ. ಧನ ಸಂಪತ್ತಿನ ಅವನತಿ, ಪುತ್ರರಿಂದಲೂ, ಆಸ್ತಿಯಿಂದಲೂ ವಿಯೋಗಗಳಿಂದ ಜರ್ಝರಿತರಾಗುವಿರಿ. **'ಗುರು ಶಾಂತಿ, ಶನಿಶಾಂತಿ, "ಓಂ ಐಂ ಕ್ಲೀಂ ಸೌಃ" ನಿತ್ಯ 4 ಮಾಲೆ ಜಪಿಸಿ.'**

ತುಲಾ: ರ, ರಿ, ರು, ರೆ, ರೂ, ತ, ತಿ, ತು, ತೆ



ಮಾರ್ಚ್ 2023 ರವರೆಗೆ ಗುರು ಕರುಣೆಯ ಕೊರತೆ ಇದೆ. ನಂಬಿಕಸ್ಥರೇ 'ಕೈ' ಕೊಡುವರು. ಅನಾರೋಗ್ಯದಿಂದ ವೈದ್ಯರ ದರ್ಶನ ಅನಿವಾರ್ಯವಾಗುವುದು. ಶತ್ರುಗಳು ಮೇಲುಗೈ ಸಾಧಿಸುವರು. ಸಜ್ಜನರಲ್ಲಿ ವಿರೋಧ, ಬಂಧು ಜನರಲ್ಲಿ ಅಕಾರಣ ವಾದ ವಿರೋಧ. ದಾಯಾದಿಗಳಿಂದ ಹಾನಿ, ಜಿಂಕೆಯಂತೆ ಕುಣಿದು ನಲಿದಾಡುವ ಮಕ್ಕಳಿರುವ ಮನೆಯಲ್ಲಿದ್ದರೂ ಮನಸ್ಸಿಗೆ ಮುದವಿರದು. ಏಪ್ರಿಲ್ 2023ರ ನಂತರ ಆಸ್ತಿ ಖರೀದಿಸುವಿರಿ. ವಿದ್ಯಾರ್ಥಿ, ವಿಜ್ಞಾನಿಗಳಿಗೆ ವಿಶೇಷ ಸಾಧನೆಯ ಫಲ ದೊರೆಯುವುದು. ಬೆಲೆ ಬಾಳುವ ವಸ್ತ್ರಾಭರಣ ಮನೆಗೆ ಬಂದು ಗೃಹಿಣಿಗೆ ಸಂತಸ, ಸರ್ಕಾರಿ ನೌಕರರಿಗೆ ಬಡ್ತಿ ದೊರೆಯುವುದು. ಈ ವರ್ಷ ಪೂರ್ತಿ ಶನಿದೇವ ಪಂಚಮ, ಅರ್ಧಾಷ್ಟಮದಲ್ಲಿ ಭ್ರಮಿಸುವ ಪರಿಣಾಮವಾಗಿ ಜೀವನದಲ್ಲಿ ಹೆಚ್ಚಿನ ಏಳು, ಬೀಳುಗಳನ್ನು ಅನುಭವಿಸಬೇಕಾದೀತು. ಸಂಪಾದಿಸಿದ ಹಣ ಬಿದಿರೆಲೆಗೆ ಬಿದ್ದ ಮಳೆ ನೀರಿನಂತೆ ಅದೃಶ್ಯವಾಗುವುದು. ಆಸ್ತಿ ವಿಭಾಗ ವಿಷಯದಲ್ಲಿ ಒಮ್ಮತವಿಲ್ಲದ ಮನಃ ಕ್ಲೇಶಗಳು ಉಂಟಾಗುವುದು. ಮಕ್ಕಳಿಂದ ನಿಮ್ಮ ಗೌರವ ಪ್ರತಿಷ್ಠೆಗಳಿಗೆ ಧಕ್ಕೆ ಆಗುವುದು. **'ಶ್ರೀ ಶನಿಚಾಲೀಸ ಪಠಿಸಿ, ಶ್ರೀ ಆಂಜನೇಯನಿಗೆ ಶನಿವಾರ ಸಿಂಧೂರ ಅಲಂಕಾರ.'**

ವೃಶ್ಚಿಕ: ತೊ, ನ, ನಿ, ನು, ನೆ, ನೊ, ಯ, ಯಿ, ಯು



ಮಾರ್ಚ್ 2023 ರವರೆಗೆ ಇರುವ ಗುರುಬಲವನ್ನು ನೀವು ಎನ್‌ಕ್ಯಾಷ್ ಮಾಡಿಕೊಳ್ಳಲು ಹಿಂದೆ ಬೀಳದಿರಿ. ಸರ್ಕಾರದಿಂದಲೂ ಅನುಕೂಲವಾಗುವುದು. ಮನೆಯಲ್ಲಿ ಮಂಗಳಕಾರ್ಯಗಳು ಜರುಗಲಿದೆ. ಹಲವರಿಗೆ ಪದೋನ್ನತಿ ಉಂಟಾಗುವುದು. ತಾತ್ಕಾಲಿಕ ಉದ್ಯೋಗಗಳಿಗೂ ಶುಭ ಸಮಾಚಾರ ಬರುವುದು. ವಿವಾಹಾಕಾಂಕ್ಷಿಗಳಿಗೆ ಕಂಕಣಬಲ ಕೂಡಿಬರಲಿದೆ. ಏಪ್ರಿಲ್ 2023ರ ನಂತರ ವೈರಿಗಳ ನಿಮ್ಮ ತಂತ್ರಕ್ಕೆ ಪ್ರತಿತಂತ್ರವನ್ನು ಮಾಡುವರು. ಕಳತ್ರ ಪುತ್ರಾದಿಗಳಲ್ಲಿ ನಾನಾ ವಿಧವಾದ ಕ್ಲೇಶಗಳು, ಅನಾರೋಗ್ಯಕ್ಕೆ ಗುರಿಯಾಗುವ ಸಾಧ್ಯತೆ ಸಾಲ ಹೆಚ್ಚಾಗುವುದು. ನ್ಯಾಯಮೂರ್ತಿ ಶನಿಸ್ವಾಮಿಯು ಜೂನ್ 2023 ರವರೆಗೆ ನಿಮ್ಮನ್ನು ನಾನಾ ರೀತಿಯ ಪರೀಕ್ಷೆಗೆ ಒಳಪಡಿಸುವರು. ಆರೋಗ್ಯವನ್ನು ಕಾಪಾಡಿಕೊಳ್ಳಿ, ಮಾನಸಿಕ ಕ್ಲೇಶಗಳೂ ಉಂಟಾಗುತ್ತವೆ. ನಂತರ ನೂತನ ವೃತ್ತಿಯಿಂದ ಲಾಭ. ಪಶು ಸಂಪತ್ತಿನಿಂದ ಲಾಭಗಳಿಕೆ, ಸೇವಕರು ಆಜ್ಞಾಧಾರಿಗಳಾಗಿರುತ್ತಾರೆ. ನೀವು ಪ್ರಭಾವಶಾಲಿಯಾಗಿ, ರೋಗ ವಿಮುಕ್ತರೂ ಆಗಿರುತ್ತೀರಿ. **'ಶ್ರೀ ಅಶ್ವತ್ಥ ವೃಕ್ಷ, ಬನ್ನೀವೃಕ್ಷ ಪ್ರದಕ್ಷಿಣೆ.'**

ಧನುಸ್ಸು: ಯೆ, ಯಾ, ಬ, ಬಿ, ಬು, ಧ, ಭ, ಢ, ಬೆ



ಬ್ರಹ್ಮಾಂಡದ ಬೃಹತ್ ಗ್ರಹ ಗುರು. ಪ್ರಾರಂಭದಲ್ಲಿ ಅಂದರೆ ಮಾರ್ಚ್ 2023 ವರೆಗೆ ಕಷ್ಟ ಫಲವನ್ನೂ ನಂತರ ದೀಪಾವಳಿಯವರೆಗೆ ಶುಭಫಲವನ್ನೂ ನೀಡಲಿರುವನು. ಆರಂಭಕ್ಕೆ ಕೈಗೊಂಡ ಕಾರ್ಯಗಳಲ್ಲಿ ವಿಘ್ನ, ಪದಚ್ಯುತಿ, ಬಂಧುಜನರ ವಿರೋಧ, ದಾರಿದ್ರ್ಯತ್ವ, ಸ್ವಂತ ಸ್ಥಳವನ್ನು ಬಿಟ್ಟು ತೊಂದರೆಗಳಿಗೆ ಗುರಿಯಾಗುವಿರಿ. ಇಷ್ಟ ಜನರ ವಿಯೋಗದಿಂದ ಮನಸ್ಸಿಗೆ ಮುದವಿರದು. ಏಪ್ರಿಲ್ 2023 ರ ನಂತರ ಮನೆಯಲ್ಲಿ ಹರುಷದ ವಾತಾವರಣ. ಧನಲಾಭ, ಸ್ತ್ರೀ ಸುಖಾದಿಗಳು, ಗೃಹಕ್ರಯ, ವಿವಾಹಾದಿ ಶುಭಕಾರ್ಯಾನುಕೂಲ, ಐಶ್ವರ್ಯ ಪ್ರಾಪ್ತಿ, ಯತ್ನಕಾರ್ಯ ಸಿದ್ಧಿ.

ಶನಿದೇವನು ಪ್ರಥಮಾರ್ಧದಲ್ಲಿ ಅಂದರೆ ಜೂನ್ 2023 ರವರೆಗೆ ಸ್ಥಾನಲಾಭ, ಸಾರ್ವಜನಿಕ ಸೇವೆಯಿಂದ ಗೌರವ ಪ್ರಾಪ್ತಿ. ಧನಸಂಚಯ, ಶತ್ರು ದಮನ, ಪಶು ಸಂಪತ್ತುಗಳು ಲಭಿಸುತ್ತವೆ. ಪ್ರಭಾವಶಾಲಿಗಳೆನಿಸಿ, ರೋಗದಿಂದ ವಿಮುಕ್ತರಾಗಿ, ಸುಖಿಯಾಗುತ್ತಾರೆ. ಜೂನ್ 2023 ರ ನಂತರ ಯತ್ನ ಕಾರ್ಯಗಳಲ್ಲಿ ಅಪಜಯ, ಧನನಷ್ಟವನ್ನು ಅನುಭವಿಸಿ ಸುಖವನ್ನೂ ಕಳೆದುಕೊಳ್ಳುತ್ತಾರೆ. **"ಓಂ ಐಂ ಹ್ರೀಂ ಶ್ರೀಂ ಶನೇಶ್ವರಾಯನಮಃ" ಮಂತ್ರವನ್ನು ನಿತ್ಯ ಜಪಿಸಿ.**

ಮಕರ: ಬೊ, ಜ, ಜಿ, ಶಿ, ಶು, ಶೆ, ಶೊ, ಗ, ಗಿ



ದೀಪಾವಳಿಯಿಂದ ಮಾರ್ಚ್ 2023 ರವರೆಗೆ ತೃತೀಯ ಮತ್ತು ಚತುರ್ಥದಲ್ಲಿ ಸಂಚರಿಸುವ ದೇವಗುರು ನಿಮ್ಮನ್ನು ಯಾವ ರೀತಿಯಿಂದಲೂ ಕೈ ಹಿಡಿಯಲಾರ. ಪ್ರಾರಂಭಕ್ಕೆ ಇಷ್ಟ ಜನರ ವಿಯೋಗ. ಕೈ ಹಾಕಿದ ಯಾವ ಕೆಲಸವೂ ಸುಖಾಂತ್ಯವಾಗದು. ಅನಾರೋಗ್ಯವು ಕಾಡಿಸುತ್ತದೆ. ವೈದ್ಯಕೀಯ ಖರ್ಚುಗಳು ಹೆಚ್ಚಾಗುವುದು. ಸರ್ಕಾರಿ ನೌಕರರಿಗೆ ತನಿಖಾ ಸಂಸ್ಥೆಗಳಿಂದ ತೊಂದರೆ, ಬಂಡವಾಳ ಹೂಡಿಕೆಗಳನ್ನು ವಿವೇಚನೆಯಿಂದ ಮಾಡಿ, ಅನ್ಯಥಾ ನಷ್ಟವನ್ನು ಅನುಭವಿಸುವಿರಿ.

ಶನಿದೇವನ ಸಾಡೇಸಾತಿ ಪ್ರಭಾವವೂ ನಿಮ್ಮ ವೈಯಕ್ತಿಕ. ಸಾಮಾಜಿಕ ವ್ಯವಹಾರಗಳ ಮೇಲೆ ಪ್ರತಿಕೂಲ ಪ್ರಭಾವವನ್ನು ಬೀರುವುದು. ಪ್ರಯಾಣಗಳಲ್ಲಿ ಅತ್ಯಂತ ಜಾಗೃತರಾಗಿರಿ. ಕೊಟ್ಟ ಸಾಲ ವಾಪಸ್ ಬರದು. ಬೃಹತ್ ಉದ್ಯಮಿಗಳಿಗೆ ಕಾರ್ಮಿಕರ ಅಸಹಕಾರದಿಂದ ನಷ್ಟವನ್ನು ಅನುಭವಿಸಬೇಕಾದೀತು.

ಶ್ರೀಗುರು ಶಾಂತಿಗೆ ಓಂ ಬೃಂ ಬೃಹಸ್ಪತಯೇ ನಮಃ, ಶ್ರೀ ಶನಿ ಶಾಂತಿಗೆ ಓಂ ಐಂ ಕ್ಲೀಂ ಹ್ರೀಂ ಶ್ರೀಮ್ ಸೌಃ ಈ ಮಂತ್ರಗಳ ಜಪ ನಿತ್ಯ 3 ಮಾಲೆ ಜಪಿಸಿ.

ಕುಂಭ: ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ



ಈ ದೀಪಾವಳಿಯ ಆರಂಭದಿಂದ ಮಾರ್ಚ್ 2023 ರವರೆಗೆ ಗೋಚಾರದಲ್ಲಿ ಸಂಚರಿಸುವ ಶ್ರೀ ಗುರು ನಿಮಗೆ ರಕ್ಷಣೆ ನೀಡಲಿರುವನು. ಹಲವು ಮೂಲಗಳಿಂದ ಧನ ಪ್ರಾಪ್ತಿಯಾಗಿ ಮನೆ, ನಿವೇಶನ ಹೊಂದುವ ಅವಕಾಶ ಇದೆ. ಮನೆಯಲ್ಲಿ ಮಂಗಳಕಾರ್ಯಗಳೂ ನಡೆಯುವುದು. ವಿದ್ಯಾಪ್ರಸಂಗಗಳಲ್ಲಿ ಯಶಸ್ಸು, ಕೀರ್ತಿಗಳನ್ನು ಗಳಿಸುವಿರಿ. ಈ ಸಮಯದಲ್ಲಿ ಶನಿ ಪ್ರಭಾವವೂ ಕೊಂಚ ಕಡಿಮೆ ಇರುತ್ತದೆ.

ಈ ವರುಷ ಪೂರ್ತಿ ನೀವು ಕಲಿಯುಗ ದಂಡಾಧಿಕಾರಿ ಎನಿಸಿದ ಶ್ರೀಶನಿಯ ಸಾಡೇಸಾತಿ ಪ್ರಭಾವದಲ್ಲಿ ಇರುತ್ತೀರ. ಜೀವನದಲ್ಲಿ ಅನೇಕ ರೀತಿಯ ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚಿನ ಆದಾಯವಿರದು. ಕೃಷಿಕರಿಗೆ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲ. ರಾಜಕಾರಣಿಗಳಿಗೆ ದುರ್ದೆಸೆ ಎಂದು ಹೇಳಬೇಕಾದೀತು. ಅನೇಕ ರೀತಿಯ ಸಾಂಸಾರಿಕ ಕ್ಲೇಶಗಳಿಂದ ಜರ್ಝರಿತರಾಗುವಿರಿ. ಅನವಶ್ಯಕ ಸಂಚಾರಗಳನ್ನು ಅವಾಯ್ಡ್ ಮಾಡಿ.

'ಬನ್ನಿ ವೃಕ್ಷ ಪ್ರದಕ್ಷಿಣೆ ಹಾಗೂ ಎಳ್ಳೆಣ್ಣೆದಾನ'

ಮೀನ: ದಿ, ದು, ಖ, ಝ, ತ, ದೆ, ದೊ, ಚ, ಚಿ



ನವಗ್ರಹಗಳಲ್ಲಿ ಪ್ರಮುಖರಾದ ಗುರುದೇವ, ಶನಿದೇವ ಇಬ್ಬರೂ ನಿಮ್ಮನ್ನು ಹಲವು ರೀತಿಯಿಂದ ಕಾಡಿಸಲಿದ್ದಾರೆ. ಸ್ವಂತ ಜನ, ಸ್ವಂತ ಸ್ಥಳವನ್ನು ಅಗಲಿರಬೇಕಾದ ಪರಿಸ್ಥಿತಿ, ಕೂಡಿಟ್ಟ ಧನ-ಧಾನ್ಯ ನಾಶ, ಸಜ್ಜನರ ವಿರೋಧ ಎದುರಿಸಬೇಕಾದೀತು. ವಿನಾಕಾರಣ ವ್ಯಾಜ್ಯಗಳಿಂದ ಮನಃಶಾಂತಿ ಕದಡುವುದು. ಆಸ್ತಿ ವಿಭಾಗ ವಿಷಯದಲ್ಲಿ ಒಮ್ಮತ ಮೂಡದೆ ಮನಸ್ತಾಪಗಳು ಉಂಟಾಗುವುದು. ಸರ್ಕಾರಿ ನೌಕರರಿಗೆ ಇಲಾಖಾ ವಿಚಾರಣೆ ಎದುರಿಸಬೇಕಾದೀತು.

ಜೂನ್ 2023 ರಿಂದ ಶನಿದೇವ ಲಾಭಸ್ಥಾನಕ್ಕೆ ಬರುವ ಪರಿಣಾಮ ಸಿಮೆಂಟ್, ಕಬ್ಬಿಣ ವ್ಯಾಪಾರಿಗಳಿಗೆ ಇಂಜಿನಿಯರ್ ಕಂಟ್ರಾಕ್ಟರುಗಳಿಗೆ ಉತ್ತಮ ಆದಾಯವಾಗುವುದು. ಕೃಷಿಕರಿಗೂ, ಕೃಷಿ ಔಷಧಿ, ಉಪಕರಣ ಮಾರಾಟಗಾರರಿಗೂ ಉತ್ತಮ ಧನಲಾಭವಾಗುವುದು. ಪಶು ಪಾಲಕರಿಗೆ ಪಶು ಸಂತತಿ ಹೆಚ್ಚುವುದು. ಬೃಹತ್ ಉದ್ದಿಮೆದಾರರಿಗೆ ಕಾರ್ಮಿಕರು ಆಜ್ಞಾನುವರ್ತಿಗಳಾಗಿರುತ್ತಾರೆ.

ಈ ವರುಷ ಪೂರ್ತಿ ಶ್ರೀ ಶನಿಯ ಸಾಡೇಸಾತಿ ಪ್ರಭಾವದಲ್ಲಿ ಇದ್ದು, ಜೀವನದಲ್ಲಿ ಅನೇಕ ರೀತಿಯ ಪರೀಕ್ಷೆಗಳನ್ನು ಎದುರಿಸಬೇಕಾಗುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಹೆಚ್ಚಿನ ಆದಾಯವಿರದು. ಕೃಷಿಕರಿಗೆ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲ. ರಾಜಕಾರಣಿಗಳಿಗೆ ದುರ್ದೆಸೆ. ಅನೇಕ ರೀತಿಯ ಸಾಂಸಾರಿಕ ಕ್ಲೇಶಗಳಿಂದ ಜರ್ಝರಿತರಾಗುವಿರಿ. ಅನವಶ್ಯಕ ಸಂಚಾರಗಳನ್ನು ಅವಾಯ್ಡ್ ಮಾಡಿ. ಪರಿಹಾರಕ್ಕೆ ಬನ್ನಿವೃಕ್ಷ ಪ್ರದಕ್ಷಿಣೆ ಹಾಗೂ ಎಳ್ಳೆಣ್ಣೆ ದಾನ.

**ಶ್ರೀ ಗುರುಶಾಂತಿಗೆ ಔದುಂಬರ ವೃಕ್ಷ ಪ್ರದಕ್ಷಿಣೆ
ಶ್ರೀ ಶನಿಶಾಂತಿಗೆ ಅಶ್ವತ್ಥ ವೃಕ್ಷ ಪ್ರದಕ್ಷಿಣೆ**

'ಸರ್ವೇ ಜನಾಃ ಸುಖಿನೋಭವಂತು'

ಬಾಲಕಿ ಹತ್ಯೆ ಆರೋಪಿಗೆ ಕಠಿಣ ಶಿಕ್ಷೆಗೆ ಆಗ್ರಹಿಸಿ ಪ್ರತಿಭಟನೆ



ಕೆ.ಆರ್.ಪೇಟೆ,ಅ.22– ಮಳವಳ್ಳಿಯಲ್ಲಿ ಮನೆಪಾಠಕ್ಕೆ ಹೋದ ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿ ಅಮಾನುಷವಾಗಿ ಕೊಲೆ ಮಾಡಿದ ಆರೋಪಿಯನ್ನು ಕಠಿಣ ಶಿಕ್ಷೆಗೆ ಗುರಿಪಡಿಸಬೇಕು ಎಂದು ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆಯ ಸ್ವಾಭಿಮಾನಿ ಸೇನೆಯ ಕಾರ್ಯಕರ್ತರು ತಹಸೀಲ್ದಾರ್ ಕಚೇರಿ ಮುಂದೆ ಪ್ರತಿಭಟನೆ ಮಾಡಿ ಮನವಿ ಸಲ್ಲಿಸಿದರು.

ರೈತ ನಾಯಕಿ ನಂದಿನಿ ಜಯರಾಂ ಮಾತನಾಡಿ, 10 ವರ್ಷದ ಬಾಲಕಿಯ ಮೇಲೆ ಅಮಾನುಷವಾಗಿ ಲೈಂಗಿಕ ದೌರ್ಜನ್ಯ ನಡೆಸಿ ಹತ್ಯೆ ಮಾಡಿರುವ ಘಟನೆಯು ಇಡೀ ನಾಗರಿಕ ಸಮಾಜವೇ ತಲೆ ತಗ್ಗಿಸುವ ವಿಚಾರವಾಗಿದೆ. ಇಂತಹ ಘಟನೆ ನಡೆಸಿರುವ ಶಿಕ್ಷಕನಿಗೆ ಕಠಿಣ ಶಿಕ್ಷೆಯನ್ನು ನೀಡಬೇಕು. ಯಾವುದೇ ಕಾರಣಕ್ಕೂ ವಿಳಂಬ ಮಾಡಬಾರದು. ಆರೋಪಿ ಶಿಕ್ಷಕನ ಪರವಾಗಿ ಯಾವುದೇ ವಕೀಲರು ವಕಾಲತ್ತು ವಹಿಸಬಾರದು. ಆರೋಪಿಗೆ ಶಿಕ್ಷೆಯಾಗುವಂತೆ ಎಲ್ಲಾ ವಕೀಲರು ನೋಡಿಕೊಳ್ಳಬೇಕು. ಈ ಮೂಲಕ ಕಾಮುಕರಿಗೆ ತಕ್ಕ ಪಾಠ ಕಲಿಸಬೇಕು. ಮತ್ತೆ ಯಾರೂ ಸಹ ಇಂತಹ ಕೃತ್ಯಕ್ಕೆ ಮುಂದಾಗದಂತೆ ಎಚ್ಚರಿಕೆ ನೀಡಬೇಕು ಎಂದು ಮನವಿ ಮಾಡಿದರು.

ಪ್ರತಿಭಟನೆಯ ನಂತರ ಉಪತಹಸೀಲ್ದಾರ್ ರವಿ ಅವರಿಗೆ ಮನವಿ ಸಲ್ಲಿಸಿದರು.

ಸೇನೆಯ ಜಿಲ್ಲಾ ಉಪಾಧ್ಯಕ್ಷ ಸಮೀರ್, ಗೌರವಾಧ್ಯಕ್ಷ ದೇವರಾಜು, ತಾಲೂಕು ಘಟಕದ ಅಧ್ಯಕ್ಷ ಅಮ್ಜದ್‌ಖಾನ್, ಕಾನೂನು ಸಲಹೆಗಾರ ವಕೀಲ ಆರ್.ಎಂ.ದೇವಾನಂದ್, ಅನುವಿನಕಟ್ಟೆ ಸೋಮು, ಕರ್ನಾಟಕ ರೈತ ಸಂಘದ ಮಹಿಳಾ ಘಟಕದ ಅಧ್ಯಕ್ಷೆ ನಂದಿನಿ ಜಯರಾಂ, ರೈತ ಮುಖಂಡ ಎಲ್.ಬಿ.ಜಗದೀಶ್, ಮಹಿಳಾ ಹೋರಾಟ ಸಮಿತಿಯ ಮುಖಂಡರಾದ ಮಂಗಳಾ, ಮೂಡನಹಳ್ಳಿ ಮಧು, ನವ್ಯವಾಸು, ಕರವೇ ಸ್ವಾಭಿಮಾನಿ ಸೇನೆಯ ಯುವ ಘಟಕದ ಅಧ್ಯಕ್ಷ ಸಲ್ಮಾನ್‌ಖಾನ್, ಜಮೀಲ್, ಇಲಿಯಾಜ್ ಮತ್ತಿತರರ ನೇತೃತ್ವದಲ್ಲಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸಭೆ ನಡೆಸಿ ಬಾಲಕಿಯ ಆತ್ಮಕ್ಕೆ ಶಾಂತಿ ಕೋರಿ ಮೌನಾಚರಣೆ ನಡೆಸಿ ಭಾವಚಿತ್ರಕ್ಕೆ ಪುಷ್ಪ ನಮನದ ಮೂಲಕ ಗೌರವ ಸಲ್ಲಿಸಿದರು.

ಮಂಡ್ಯ ವಿವಿ ಅಭಿವೃದ್ಧಿಗೆ ಕೈ ಜೋಡಿಸಲು ಕುಲಪತಿ ಮನವಿ



ಮಂಡ್ಯ,ಅ.22– ಹಿರಿಯ ವಿದ್ಯಾರ್ಥಿಗಳು ತಮ್ಮ ಅಧ್ಯಯನ ಸಂಸ್ಥೆಯ ಆಧಾರ ಸ್ತಂಭಗಳಾಗಿರುತ್ತಾರೆ. ತಮ್ಮಲ್ಲಿರುವ ವಿದ್ವತ್ತು, ಕೌಶಲ್ಯ, ಕ್ರೀಡೆ, ಸಾಹಿತ್ಯ, ಸಂಗೀತ ಇತ್ಯಾದಿಗಳನ್ನು ಕಿರಿಯ ವಿದ್ಯಾರ್ಥಿಗಳಿಗೆ ತಿಳಿಸಿಕೊಡುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಆದ್ದರಿಂದ ಎಲ್ಲ ಹಿರಿಯ ವಿದ್ಯಾರ್ಥಿಗಳು ಮಂಡ್ಯ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಕೈಜೋಡಿಸಬೇಕೆಂದು ವಿವಿ ಕುಲಪತಿ ಡಾ. ಪುಟ್ಟರಾಜು ಮನವಿ ಮಾಡಿದರು.

ಮಂಡ್ಯ ವಿವಿ ವಿದ್ಯಾರ್ಥಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮಂಡ್ಯ ವಿಶ್ವವಿದ್ಯಾಲಯವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಹಿರಿಯ ವಿದ್ಯಾರ್ಥಿಗಳ ಸಹಕಾರ ಅಗತ್ಯವಾಗಿದ್ದು ತಮ್ಮೆಲ್ಲರ ಸಹಕಾರದ ಜೊತೆಗೆ ರಾಜ್ಯದಲ್ಲಿ, ರಾಷ್ಟ್ರದಲ್ಲಿಯೇ ಅತ್ಯಂತ ಉನ್ನತವಾದಂತಹ ಸಂಸ್ಥೆಯನ್ನಾಗಿ ರೂಪಿಸಲಾಗುವುದು ಎಂದು ಕುಲಸಚಿವ ಡಾ. ನಾಗರಾಜ್ ಜಿ.ಚೊಳ್ಳಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಸಿ. ರವಿರವರು ಒಂದು ಸಂಸ್ಥೆ ಉನ್ನತ ಮಟ್ಟಕ್ಕೆ ಬೆಳೆಯಬೇಕಾದರೆ ಹಿರಿಯ ವಿದ್ಯಾರ್ಥಿಗಳ ಸಹಕಾರ, ಸಲಹೆ ತುಂಬಾ ಅತ್ಯಗತ್ಯವಾಗಿದ್ದು, ತಾವೆಲ್ಲರೂ ಈ ಸಂಸ್ಥೆಯ ಬೆನ್ನೆಲುಬಾಗಿ ಇದರ ಪೂರ್ವಭಿವೃದ್ಧಿಗೆ ಶ್ರಮಿಸಬೇಕೆಂದು ಕೋರಿದರು. ಕಾರ್ಯಕ್ರಮದಲ್ಲಿ ಹಾಜರಿದ್ದ ಹಿರಿಯ ವಿದ್ಯಾರ್ಥಿಗಳಾದ ಬೇಲೂರು ಸೋಮಶೇಖರ್, ಡಾ. ವೆಂಕಟೇಗೌಡ, ಅಶೋಕ್ ಕುಮಾರ್, ಚಂದನ್ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ, ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಶ್ರಮಿಸುವುದಾಗಿ ತಿಳಿಸಿದರು

ವೇದಿಕೆಯಲ್ಲಿ ಹಣಕಾಸು ಅಧಿಕಾರಿಗಳಾದ ಪ್ರೊ.ಮಲ್ಲಿಕಾರ್ಜುನಯ್ಯ, ಸಂಯೋಜಕ ಡಾ. ಶಿವರಾಂ ಹಾಗೂ ಹಿರಿಯ ವಿದ್ಯಾರ್ಥಿಗಳು ಹಾಜರಿದ್ದರು.

ಚಿರತೆ ದಾಳಿಗೆ ಕುರಿ ಬಲಿ

ಭಾರತೀನಗರ, ಅ.22– ಚಿರತೆ ದಾಳಿಗೆ ಕುರಿ ಸಾವನ್ನಪ್ಪಿರುವ ಘಟನೆ ಅಣ್ಣೂರು ಗ್ರಾಮದಲ್ಲಿ ನಡೆದಿದೆ. ಗ್ರಾಮದ ರಾಮೇಗೌಡ ಎಂಬುವರಿಗೆ ಸೇರಿದ ಕುರಿಯಾಗಿದ್ದು, ಇವರು ಎಂದಿನಂತೆ ಕುರಿಯನ್ನು ಗ್ರಾಮದ ಹೊರವಲಯದ ಬಯಲಿನಲ್ಲಿ ಮೇಯಿಸುತ್ತಿದ್ದಾಗ ಚಿರತೆ ದಾಳಿ ನಡೆಸಿ ಕೊಂದು ಹಾಕಿದೆ. ಕಳೆದ ಮೂರು ದಿನಗಳ ಹಿಂದೆ ಹೊಂಬೇಗೌಡನದೊಡ್ಡಿ ಗ್ರಾಮದ ಜೋಗಪ್ಪ ಎಂಬುವವರ ಕುರಿಯನ್ನು ಸಹ ಚಿರತೆ ತಿಂದು ಹಾಕಿತ್ತು. ಇದರಿಂದ ಅಣ್ಣೂರು, ಹೊಂಬೇಗೌಡನದೊಡ್ಡಿ ಮತ್ತು ಸುತ್ತ-ಮುತ್ತಲಿನ ಗ್ರಾಮಸ್ಥರು ಆತಂಕದಲ್ಲಿದ್ದಾರೆ. ಕೂಡಲೇ ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಚಿರತೆಯನ್ನು ಹಿಡಿಯಲು ಮುಂದಾಗಬೇಕೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಹೊಳೆ ಆಂಜನೇಯ ಸ್ವಾಮಿ ದರ್ಶಿಸಿದ ಪೇಜಾವರ ಶ್ರೀ



ಮದ್ದೂರು, ಅ.22– ಪಟ್ಟಣದ ಪುರಾಣ ಪ್ರಸಿದ್ಧ ಶ್ರೀ ಹೊಳೆ ಆಂಜನೇಯ ಸ್ವಾಮಿ ದೇವಾಲಯಕ್ಕೆ ಶನಿವಾರ ಉಡುಪಿ ಮಠದ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಭೇಟಿ ನೀಡಿ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ, ದರ್ಶನ ಪಡೆದರು.

ಬಳಿಕ ಮಾತನಾಡಿದ ಅವರು, ಚಿತ್ರ ನಟ ಚೇತನ್ ಪ್ರಚಾರಕ್ಕಾಗಿ ಈ ರೀತಿಯ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಅವರು ನೋಡುವ ದೃಷ್ಟಿಕೋನದಲ್ಲಿ ಎಲ್ಲಾ ಅಡಗಿರುತ್ತದೆ ಹಿಂದುತ್ವ ಹಾಗೂ ಬ್ರಾಹ್ಮಣತ್ವ ಬೇರೆ ಬೇರೆ ಅಲ್ಲ, ಹಿಂದುತ್ವ ವಿಶಾಲವಾದದ್ದು, ಅದರೊಳಗೆ ಬ್ರಾಹ್ಮಣತ್ವವು ಬರುತ್ತದೆ ಎಂದರು. ದೇವಸ್ಥಾನದ ಆವರಣದ ಮುಂಭಾಗ ನೀರಿನ ಜಲವಿದೆ. ಉಸಿರಿರುವ ಈ ಸ್ಥಳವನ್ನು ಸರ್ಕಾರ ವಿಶೇಷ ಅನುದಾನದಲ್ಲಿ ಅಭಿವೃದ್ಧಿ ಪಡಿಸಬೇಕೆಂದು ತಿಳಿಸಿದರು. ದೇವಸ್ಥಾನದ ಪ್ರಧಾನ ಅರ್ಚಕ ಪ್ರದೀಪ ಆಚಾರ್ಯ, ಸುರೇಶ್ ಆಚಾರ್ಯ ಇದ್ದರು.

ಚಿನಕುರಳಿ ಡೈರಿ ಉಪಾಧ್ಯಕ್ಷರ ಅವಿರೋಧ ಆಯ್ಕೆ



ಚಿನಕುರಳಿ, ಅ.22– ಚಿನಕುರಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಉಪಾಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ರಾಮಕೃಷ್ಣೇಗೌಡ ಅವಿರೋಧವಾಗಿ ಆಯ್ಕೆಯಾದರು. ಹಿಂದಿನ ಉಪಾಧ್ಯಕ್ಷೆ ಗಾಯಿತ್ರಿ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ರಾಮಕೃಷ್ಣೇಗೌಡ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಮುಕ್ತ ಘೋಷಿಸಿದರು.

ನೂತನ ಉಪಾಧ್ಯಕ್ಷ ರಾಮಕೃಷ್ಣೇಗೌಡ ಅವರಿಗೆ ಅಧ್ಯಕ್ಷರು, ನಿರ್ದೇಶಕರು ಅಭಿನಂದಿಸಿದರು.

ಉಪಾಧ್ಯಕ್ಷ ರಾಮಕೃಷ್ಣೇಗೌಡ ಮಾತನಾಡಿ, ಎಲ್ಲರ ಸಹಕಾರದಿಂದ ಉಪಾಧ್ಯಕ್ಷನಾಗಿ ಅವಿರೋಧವಾಗಿ ಆಯ್ಕೆಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಡೇರಿಯ ಅಧ್ಯಕ್ಷರು ಹಾಗೂ ನಿರ್ದೇಶಕರ ಜತೆಗೂಡಿ ಡೇರಿಯ ಅಭಿವೃದ್ದಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದು ಭರವಸೆ ನೀಡಿದರು. ಈ ವೇಳೆ ಗ್ರಾಪಂ ಸದಸ್ಯ ಸಿ.ಶಿವಕುಮಾರ್, ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ, ಡೇರಿ ಅಧ್ಯಕ್ಷ ಸಿ.ಎಸ್.ಲೋಕೇಶ್, ಮಾಜಿ ಅಧ್ಯಕ್ಷರಾದ ಸಿ.ಎಂ.ರಮೇಶ್, ಆರ್.ವರದರಾಜು, ವಿಷಕಂಠೇಗೌಡ, ಸಿ.ಆರ್.ಹೊನ್ನರಾಜು, ಸಿ.ಪಿ.ಪುಟ್ಟರಾಜು, ನಿರ್ದೇಶಕರಾದ ನಾಗರಾಜು, ಸಿ.ಎಸ್.ರಮೇಶ್, ಸವಿತ, ಗೀತಾ ಇತರರಿದ್ದರು.

ಮೇಲುಕೋಟೆಯಲ್ಲಿ ಗ್ರಹಣ ದಿನದಂದು ದೇವರ ದರ್ಶನ ಇಲ್ಲ



ಮೇಲುಕೋಟೆ, ಅ.22– ಚೆಲುವನಾರಾಯಣಸ್ವಾಮಿ ದೇವಾಲಯದಲ್ಲಿ ಸೂರ್ಯಗ್ರಹಣದ ದಿನವಾದ ಮಂಗಳವಾರ (ಅ.25) ಮಧ್ಯಾಹ್ನ ಒಂದು ಗಂಟೆಯ ನಂತರ ದೇಗುಲ ಬಂದ್ ಆಗಲಿದೆ. ಸೂರ್ಯಗ್ರಹಣ ಮುಕ್ತಾಯವಾದ ನಂತರ ಶಾಂತಿಹೋಮಗಳನ್ನು ನೆರವೇರಿಸಿ ಅಭಿಷೇಕ ನೆರವೇರಿದ ನಂತರ ರಾತ್ರಿಯ ನಿತ್ಯಪೂಜಾ ಕೈಂಕರ್ಯಗಳು ನೆರವೇರಲಿದೆ. ಅಲ್ಲಿಯವರೆಗೂ ಭಕ್ತರಿಗೆ ದೇವರದರ್ಶನಕ್ಕೆ ಅವಕಾಶ ಇರುವುದಿಲ್ಲ ಎಂದು ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಮಹೇಶ್ ತಿಳಿಸಿದ್ದಾರೆ.

ಉತ್ಪಾದಕರ ಪ್ರತಿ ಲೀ. ಹಾಲಿಗೆ 1 ರೂ. ಹೆಚ್ಚಳ

ಮಂಡ್ಯ,ಅ.22– ಜಿಲ್ಲಾ ಹಾಲು ಒಕ್ಕೂಟ ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ 1 ರೂ. ಹೆಚ್ಚಿಸುವ ಮೂಲಕ ರೈತರಿಗೆ ದೀಪಾವಳಿ ಕೊಡುಗೆ ನೀಡಿದೆ.

ಅ. 21ರಂದು ನಡೆದ ಒಕ್ಕೂಟದ ಆಡಳಿತ ಮಂಡಳಿ ಸಭೆಯಲ್ಲಿ ಹಾಲು ಖರೀದಿ ದರವನ್ನು ನ.1ರಿಂದ 2023 ಮಾ.31ರವರೆಗೆ ಜಾರಿಗೆ ಬರುವಂತೆ ರೈತರಿಂದ ಖರೀದಿಸುವ ಪ್ರತೀ ಲೀಟರ್ ಹಾಲಿಗೆ 1 ರೂ. ಹೆಚ್ಚಿಸಿ ದರ ಪರಿಷ್ಕರಿಸಲಾಗಿದೆ.

ಶೇ.4 ಜಿಡ್ಡು ಮತ್ತು ಶೇ. 8.5ರಷ್ಟು ಜಿಡ್ಡೇತರ ಘನಾಂಶವಿರುವ ಹಾಲಿಗೆ ಪ್ರಸ್ತುತ ಸಂಘಗಳಿಗೆ 29.15 ರೂ. ನೀಡಲಾಗುತ್ತಿದ್ದು, ನ.1ರಿಂದ 30.15 ರೂ. ನೀಡಲಾಗುವುದು.

ಉತ್ಪಾದಕರಿಗೆ ಪ್ರಸ್ತುತ 28.25 ರೂ. ನೀಡಲಾಗುತ್ತಿದ್ದು, ಈ ದರವನ್ನು 29.25 ರೂ.ಗೆ ಹೆಚ್ಚಿಸಲಾಗಿದೆ ಎಂದು ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ. ಒಕ್ಕೂಟದ ವ್ಯಾಪ್ತಿಯಲ್ಲಿ ನಿತ್ಯ 9.84 ಲಕ್ಷ ಲೀಟರ್ ಹಾಲು ಶೇಖರಣೆಯಾಗುತ್ತಿದೆ. ಪ್ರಸ್ತುತ ಮಳೆಯಿಂದಾಗಿ ಹಾಲು ಶೇಖರಣೆ ಪ್ರಮಾಣದಲ್ಲಿ ಕಡಿಮೆಯಾಗುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಹಸಿರು ಮೇವಿನ ಕೊರತೆ ಹಾಗೂ ಇತರೆ ಕಾರಣಗಳಿಂದ ಹಾಲು ಉತ್ಪಾದನಾ ವೆಚ್ಚ ಅಧಿಕವಾಗಿದೆ. ಒಕ್ಕೂಟದ ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ದೊರಕಿ ಆರ್ಥಿಕವಾಗಿ ಸುಸ್ಥಿತಿಯಲ್ಲಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಸಂಕಷ್ಟದಲ್ಲಿರುವ ರೈತರ ನೆರವಿಗೆ ಧಾವಿಸುವ ಅಗತ್ಯತೆ ಇರುವುದರಿಂದ ಖರೀದಿ ದರವನ್ನು ಪ್ರತೀ ಲೀಟರ್ ಹಾಲಿಗೆ 1 ರೂ. ಹೆಚ್ಚಿಸಿರುವುದಾಗಿ ಅವರು ತಿಳಿಸಿದ್ದಾರೆ.


ನಾಗಮಂಗಲದಲ್ಲಿ ವಿದ್ಯಾಗಣಪತಿ ವಿಸರ್ಜನೆ



ನಾಗಮಂಗಲ, ಅ.22– ಪಟ್ಟಣದ ಕೋಟೆ ವಿದ್ಯಾಗಣಪತಿಯ 70ನೇ ವರ್ಷದ ವಿಸರ್ಜನಾ ಮಹೋತ್ಸವವು ವೈಭವದಿಂದ ನಡೆಯಿತು.

ಚತುರ್ಥಿಯಂದು ಪ್ರತಿಷ್ಠಾಪನೆಗೊಂಡ ವಿಘ್ನ ವಿನಾಯಕನಿಗೆ 48 ದಿನಗಳ ಕಾಲ ಅಭಿಷೇಕ, ಪುಷ್ಪಾರ್ಚನೆಗಳು ನಡೆದು ಇದೇ ಶುಕ್ರವಾರ ಇಲ್ಲಿನ ಇತಿಹಾಸ ಪ್ರಸಿದ್ಧ ಹಂಪೆ ಅರಸನ ಕೊಳದಲ್ಲಿ ವಿಸರ್ಜಿಸಲಾಯಿತು. ಮುಂಜಾನೆ ಹತ್ತು ಘಂಟೆಗೆ ವಿವಿಧ ಹೂವುಗಳಿಂದ ಅಲಂಕೃತಗೊಂಡ ಮಂಟಪೋತ್ಸವ ಪಟ್ಟಣದ ಹಳೆ ಅಂಚೆ ಕಚೇರಿ ರಸ್ತೆ, ಟ್ಯಾಂಕ್ ರಸ್ತೆ ಮತ್ತು ಬೆಂಗಳೂರು ಮೈಸೂರು ರಸ್ತೆಗಳಲ್ಲಿ ಹಾರನಹಳ್ಳಿ ವಾದ್ಯ, ಕರಡಿ ವಾದ್ಯ, ಮತ್ತು ವೀರಗಾಸೆ ಕುಣಿತದೊಂದಿಗೆ ಮೆರವಣಿಗೆ ಮಾಡಲಾಯಿತು. ವಿಸರ್ಜನೆಯ ಅಂಗವಾಗಿ ಹಂಪೆ ಅರಸನ ಕೊಳದ ಸುತ್ತ ವಿದ್ಯುತ್ ದೀಪಲಂಕಾರ ಮಾಡಲಾಗಿತ್ತು. ಸಾವಿರಾರು ಭಕ್ತರ ಸಮ್ಮುಖದಲ್ಲಿ ಬಾಣ ಬಿರುಸುಗಳೊಂದಿಗೆ ವಿನಾಯಕನನ್ನು ವಿಸರ್ಜಿಸಲಾಯಿತು.

ಬ್ರಿಟನ್ ಪ್ರಧಾನಿ ಗಾದಿ ಸ್ಪರ್ಧೆಗೆ ಅರ್ಹತೆ ಪಡೆದ ರಿಷಿ ಸುನಕ್



ಲಂಡನ್, ಅ.22– ಬ್ರಿಟನ್‌ನ ಕನ್ಸರ್ವೇಟಿವ್ ಪಕ್ಷದ ಸಂಸದ ರಿಷಿ ಸುನಕ್ ಶುಕ್ರವಾರ ತಡರಾತ್ರಿ ಪಕ್ಷದ ನಾಯಕತ್ವಕ್ಕೆ ಸ್ಪರ್ಧಿಸಲು ಬೇಕಾದ ಕನಿಷ್ಠ ಮಿತಿಯನ್ನು ತಲುಪಿದ್ದಾರೆ.

ರಿಷಿ ಸುನಕ್ ಅವರನ್ನು ಬೆಂಬಲಿಸುವ 100ನೇ ಸಂಸದನ ಗೌರವ ಸಿಕ್ಕಿದೆ ಎಂದು ಹಿರಿಯ ಸಂಸದ ಟೋಬಿಯಾಸ್ ಎಲ್ವುಡ್ ಟ್ವೀಟ್ ಮಾಡಿದ್ದಾರೆ. ಸುನಕ್ ಅವರ ಇತರ ಬೆಂಬಲಿಗರು ಸಹ ಅವರು ಕನಿಷ್ಠ ಮಿತಿಯನ್ನು ದಾಟಿದ್ದಾರೆ ಎಂದು ಹೇಳಿದ್ದಾರೆ.


ರಿಷಿ ಸುನಕ್ ಅವರ ಪ್ರತಿಸ್ಪರ್ಧಿಗಳು ಪಕ್ಷದ 100 ಸಂಸದರಿಂದ ಬೆಂಬಲ ಪಡೆಯಲು ವಿಫಲವಾದರೆ ಸುನಕ್ ನೇರವಾಗಿ ಪಕ್ಷದ ನಾಯಕ ಮತ್ತು ಪ್ರಧಾನ ಮಂತ್ರಿಯಾಗಿ ಆಯ್ಕೆಯಾಗುತ್ತಾರೆ.

ಪ್ರಧಾನ ಮಂತ್ರಿ ಲಿಜ್ ಟ್ರಸ್ ಅವರ ನಾಟಕೀಯ ರಾಜೀನಾಮೆಯ ನಂತರ, ಬ್ರಿಟನ್ ಆಡಳಿತ ಪಕ್ಷದಲ್ಲಿ ಈ ವರ್ಷ ಎರಡನೇ ಬಾರಿ ನಾಯಕತ್ವ ಸ್ಪರ್ಧೆ ಏರ್ಪಟ್ಟಿದೆ. ಕ್ಯಾಬಿನೆಟ್ ಸದಸ್ಯ ಪೆನ್ನಿ ಮೊರ್ಡಾಂಟ್ ಅವರು ತಮ್ಮ ಉಮೇದುವಾರಿಕೆಯನ್ನು ಔಪಚಾರಿಕವಾಗಿ ಘೋಷಿಸಿದ ಮೊದಲಿಗರಾಗಿದ್ದಾರೆ. ಈ ಮಧ್ಯೆ, ಬೋರಿಸ್ ಜಾನ್ಸನ್ ಸಹ ಸ್ಪರ್ಧಿಸುತ್ತಾರೆ ಎಂದು ಹೇಳಲಾಗುತ್ತಿದೆ. ಆದರೆ, ಸುನಕ್ ಅಥವಾ ಜಾನ್ಸನ್ ಅವರು ತಮ್ಮ ಸ್ಪರ್ಧೆ ಕುರಿತಂತೆ ಈವರೆಗೆ ಸಾರ್ವಜನಿಕವಾಗಿ ಘೋಷಿಸಿಲ್ಲ.



ಮೈಸೂರು ಗೋಕುಲಂನ ಬೃಂದಾವನ ಬಡಾವಣೆಯ ವಾರ್ಡ್ ನಂ.6ರ ಉದ್ಯಾನವನ ಹಾಗೂ ದೀಪಗಳ ಅಭಿವೃದ್ಧಿ ಕಾಮಗಾರಿಗೆ ನಗರಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು ಚಾಲನೆ ನೀಡಿದರು. ಈ ವೇಳೆ ನಿವೇದಿತ ಬಡಾವಣೆಯ ಹಿರಿಯರಾದ ನಂಜೇಗೌಡ, ಕುಮಾರ್, ಪುರುಷೋತ್ತಮ್, ಪಾಪಣ್ಣ, ಕುಶಾಲಪ್ಪ, ನಾಗಮ್ಮ, ಲಕ್ಷ್ಮಮ್ಮ, ಲಲಿತಮ್ಮ ಇನ್ನಿತರರು ಹಾಜರಿದ್ದರು.

ಅ.25ಕ್ಕೆ ಮೃಗಾಲಯ, ಕಾರಂಜಿಕೆರೆ ಪ್ರವೇಶ ಮುಕ್ತ

ಮೈಸೂರು,ಅ.22–ದೀಪಾವಳಿ ಹಬ್ಬದ ಪ್ರಯುಕ್ತ ಪ್ರವಾಸಿಗರು, ಜನ ಸಾಮಾನ್ಯರಿಗೆ ಹಾಗೂ ಸ್ಥಳೀಯರಿಗೆ ಅನುಕೂಲವಾಗುವಂತೆ ಅ.25ರಂದು ಮೃಗಾಲಯ ಹಾಗೂ ಕಾರಂಜಿ ಕೆರೆ ಪ್ರಕೃತಿ ಉದ್ಯಾನವನವನ್ನು ಸಾರ್ವಜನಿಕ ವೀಕ್ಷಣೆಗೆ ತೆರೆಯಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ರಾಮೋಜಿ ಫಿಲ್ಮ್ ಸಿಟಿ ಮಾಜಿ ಎಂಡಿ ಅಟ್ಲೂರಿ ರಾಮಮೋಹನ್ ರಾವ್ ನಿಧನ



ಹೈದರಾಬಾದ್: ರಾಮೋಜಿ ಫಿಲ್ಮ್ ಸಿಟಿಯ ವ್ಯವಸ್ಥಾಪಕ ನಿರ್ದೇಶಕರಾಗಿ ನಿವೃತ್ತರಾಗಿದ್ದ ಅಟ್ಲೂರಿ ರಾಮಮೋಹನ್ ರಾವ್ (87) ಅವರು ಅನಾರೋಗ್ಯದಿಂದ ಇಂದು (ಶನಿವಾರ) ಇಹಲೋಕ ತ್ಯಜಿಸಿದರು. ನಾಳೆ(ಭಾನುವಾರ) ಜುಬಿಲಿ ಹಿಲ್ಸ್‌ನ ಮಹಾಪ್ರಸ್ಥಾನದಲ್ಲಿ ಬೆಳಗ್ಗೆ 10 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ. ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅಟ್ಲೂರಿ ರಾಮಮೋಹನ್ ರಾವ್ ಹೈದರಾಬಾದ್‌ನ ಎಐಜಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರು ದೀರ್ಘಕಾಲದವರೆಗೆ ರಾಮೋಜಿ ಗ್ರೂಪ್ ಆಫ್ ಕಂಪನಿ ಜೊತೆ ನಿಕಟ ಸಂಬಂಧ ಹೊಂದಿದ್ದರು. ಈನಾಡು ದಿನಪತ್ರಿಕೆಯ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದರು. 1935ರಲ್ಲಿ ಕೃಷ್ಣಾ ಜಿಲ್ಲೆಯ ಪೆದಪರುಪುಡಿಯಲ್ಲಿ ಜನಿಸಿದ್ದ ರಾವ್ ಅವರು, 1975 ರಲ್ಲಿ ಈನಾಡು ಮೂಲಕ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದ್ದರು. ರಾಮೋಜಿ ಗ್ರೂಪ್ ಅಧ್ಯಕ್ಷರಾದ ರಾಮೋಜಿ ರಾವ್ ಅವರ ಬಾಲ್ಯದ ಗೆಳೆಯರಾಗಿದ್ದರು.

ಅ.26ರಂದು ಸೋನಿಯಾ ಗಾಂಧಿಯಿಂದ ಖರ್ಗೆಗೆ ಅಧಿಕಾರ ಹಸ್ತಾಂತರ



ನವದೆಹಲಿ: ಸಾಮಾನ್ಯ ದಲಿತ ಕುಟುಂಬದಿಂದ ಬಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಆಯ್ಕೆಯಾಗುವುದು ಎಂದರೆ ಅದು ಸಾಮಾನ್ಯ ವಿಷಯವೇನೂ ಅಲ್ಲ. ಅದರ ಜೊತೆಗೆ ದೇಶಾದ್ಯಂತ ಮಕಾಡೆ ಮಲಗಿರುವ ಕಾಂಗ್ರೆಸ್ ಪಕ್ಷವನ್ನು ಪುನರುಜ್ಜೀವನಗೊಳಿಸುವುದು ಖರ್ಗೆ ಮುಂದಿರುವ ಬಹುದೊಡ್ಡ ಸವಾಲಾಗಿದೆ.

ಹೊಸದಾಗಿ ಆಯ್ಕೆಯಾಗಿರುವ ಮಲ್ಲಿಕಾರ್ಜುನ ಖರ್ಗೆ ಅ.26ರಂದು ಸೋನಿಯಾ ಗಾಂಧಿ ಅವರಿಂದ ಅಧಿಕಾರ ಸ್ವೀಕರಿಸಲಿದ್ದಾರೆ, ನೇಮಕದ ನಂತರ ಕಾಂಗ್ರೆಸ್ ಕಾರ್ಯಕಾರಿ ಸಮಿತಿ, ಇಲಾಖೆಗಳು ಮತ್ತು ಕೋಶಗಳು ಸೇರಿದಂತೆ ಸಾಂಸ್ಥಿಕ ಸಂಸ್ಥೆಗಳ ಸಂಪೂರ್ಣ ಪುನರ್ ನಿರ್ಮಾಣವಾಗಲಿದೆ. ಎಐಸಿಸಿಯಲ್ಲಿ ಪ್ರಧಾನ ಕಾರ್ಯದರ್ಶಿ ಗಳು ಮತ್ತು ಕಾರ್ಯದರ್ಶಿಗಳು ಸೇರಿದಂತೆ ಹೊಸ ತಂಡವನ್ನು ಖರ್ಗೆ ಆಯ್ಕೆ ಮಾಡಲಿದ್ದಾರೆ. ಸದ್ಯ ಕೆ.ಸಿ.ವೇಣುಗೋಪಾಲ್ ಅವರು ನಿರ್ವಹಿಸುತ್ತಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಸ್ಥಾನಕ್ಕೆ ಲಾಬಿ ಆರಂಭವಾಗಿದೆ.

ಎಐಸಿಸಿಗೆ ಕರ್ನಾಟಕದವರು ಅಧ್ಯಕ್ಷರಾಗಿರುವುದರಿಂದ ಉತ್ತರ ಭಾರತದ ನಾಯಕನಿಗೆ ಈ ಹುದ್ದೆ ಹೋಗಬಹುದು. ಪಕ್ಷದ ವಿಷಯಗಳಲ್ಲಿ ಪ್ರಭಾವವನ್ನು ಮುಂದುವರಿಸುವ ರಾಹುಲ್ ಗಾಂಧಿ ಸಂಸತ್ತಿನಲ್ಲಿ ಕೇರಳವನ್ನು ಪ್ರತಿನಿಧಿಸುತ್ತಾರೆ ಎಂದು ಮೂಲಗಳು ತಿಳಿಸಿವೆ.

ಖರ್ಗೆ ಅವರು ಅಧಿಕಾರ ವಹಿಸಿಕೊಳ್ಳುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ರಾಹುಲ್ ಭಾರತ್ ಜೋಡೋ ಯಾತ್ರೆಯಿಂದ ಎರಡು ದಿನಗಳ ವಿರಾಮ ತೆಗೆದುಕೊಳ್ಳಲಿದ್ದಾರೆ. ವರ್ಷದ ಅಂತ್ಯದ ಮೊದಲು ಖರ್ಗೆ ಅವರು ಎಐಸಿಸಿ ಸರ್ವಸದಸ್ಯರ ಸಭೆ ಕರೆಯುವ ನಿರೀಕ್ಷೆಯಿದೆ, ಅಲ್ಲಿ ಪಕ್ಷದ ಅತ್ಯುನ್ನತ ನಿರ್ಧಾರ ತೆಗೆದುಕೊಳ್ಳುವ ಮಂಡಳಿಯ 12 ಹೊಸ ಸದಸ್ಯರನ್ನು ಆಯ್ಕೆ ಮಾಡಲು CWC ಚುನಾವಣೆ ನಡೆಯಲಿದೆ.

ಸಿಡಬ್ಲ್ಯೂಸಿ ಸದಸ್ಯರನ್ನು ಸುಮಾರು 1,400 ಎಐಸಿಸಿ ಸದಸ್ಯರು ಚುನಾಯಿಸುತ್ತಾರೆ, ಅವರು ಪ್ಲೀನರಿಯಲ್ಲಿ ಭಾಗವಹಿಸುತ್ತಾರೆ. ಸಿಡಬ್ಲ್ಯೂಸಿ ಚುನಾವಣೆಗೆ ತಮ್ಮ ತಂಡವನ್ನು ಒಟ್ಟುಗೂಡಿಸುವ ಸಲುವಾಗಿ ಪಕ್ಷದ ಪ್ಲೀನರಿಗೂ ಮುನ್ನ ಖರ್ಗೆ ಅವರು ಎಐಸಿಸಿಯಲ್ಲಿ ಕೆಲವು ಉನ್ನತ ಹುದ್ದೆಗಳ ನೇಮಕಾತಿಗಳನ್ನು ಮಾಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಗಾಂಧಿ ಕುಟುಂಬ ಮತ್ತು ಖರ್ಗೆ ಅವರು ಸಿಡಬ್ಲ್ಯೂಸಿಗೆ ಮುಕ್ತ ಮತ್ತು ನ್ಯಾಯಯುತ ಚುನಾವಣೆಗೆ ಅವಕಾಶ ನೀಡಿದರೆ, ಹೆಚ್ಚಿನ ಸಂಖ್ಯೆಯ ಹಾಲಿ ಸದಸ್ಯರು ತಮ್ಮ ಸ್ಥಾನವನ್ನು ಕಳೆದುಕೊಳ್ಳಬಹುದು. CWC ಕಾಂಗ್ರೆಸ್ ಅಧ್ಯಕ್ಷರಲ್ಲದೆ 23 ಸದಸ್ಯರನ್ನು ಹೊಂದಿದೆ. ಅವರಲ್ಲಿ ಹನ್ನೆರಡು ಮಂದಿ ಚುನಾಯಿತರಾಗಿದ್ದರೆ ಉಳಿದವರು ನಿರ್ದೇಶನಗೊಂಡಿದ್ದಾರೆ. ರಾಜ್ಯಗಳ ಪಕ್ಷದ ಅಧ್ಯಕ್ಷರ ಆಯ್ಕೆಯಲ್ಲೂ ಖರ್ಗೆ ನಿರ್ಣಾಯಕ ಪಾತ್ರ ವಹಿಸಲಿದ್ದಾರೆ. ಕೇಂದ್ರ ವೀಕ್ಷಕರನ್ನು ಭೇಟಿಯಾಗದಂತೆ ರಾಜ್ಯದ ಶಾಸಕರನ್ನು ತಡೆದ ರಾಜಸ್ಥಾನದ ಮೂವರು ನಾಯಕರ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಲು ರಚಿಸಲಾದ ಶಿಸ್ತು ಸಮಿತಿಯ ಭವಿಷ್ಯವೂ ತೂಗುಯ್ಯಾಲೆಯಲ್ಲಿದೆ.

ವಿಶ್ವಕ್ಕೆ ಭಾರತ ಸಕ್ಕರೆ ಕಾಯಿಲೆ ರಾಜಧಾನಿ!: ಆರೋಗ್ಯ ಸಚಿವ ಡಾ.ಸುಧಾಕರ್ ಆತಂಕ



ಬೆಂಗಳೂರು, ಅ. 22(ಕೆಎಂಶಿ)– ದೇಶದಲ್ಲಿ ಖಿನ್ನತೆ, ಹೈಪರ್‌ಟೆನ್ಷನ್‌ಗೆ ಒಳಗಾಗುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ. ಭಾರತ ಸಕ್ಕರೆ ಕಾಯಿಲೆಯಲ್ಲಿ ವಿಶ್ವಕ್ಕೆ ರಾಜಧಾನಿಯಾಗುತ್ತಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ಕಳವಳ ವ್ಯಕ್ತಪಡಿಸಿದ್ದಾರೆ.

ವರ್ಲ್ಡ್ ಸ್ಟ್ರೋಕ್ ಡೇ ಅಂಗವಾಗಿ ಬೆಂಗಳೂರು ಮೆಡಿಕಲ್ ಕಾಲೇಜ್ ಸಭಾಂಗಣದಲ್ಲಿ ನಡೆದ ಬೆಂಗಳೂರು ಸ್ಟ್ರೋಕ್ ನರ್ಸಿಂಗ್ ಕಾನ್ ಕ್ಲೈವ್ 2022 ಉದ್ಘಾಟಿಸಿ ಮಾತನಾಡಿದ ಅವರು, ಎಷ್ಟು ರಕ್ತದೊತ್ತಡ ಕಡಿಮೆ ಮಾಡುತ್ತೇವೆಯೋ ಅಷ್ಟು ಸ್ಟ್ರೋಕ್‌ಗೆ ಒಳಗಾಗುವವರ ಸಂಖ್ಯೆ ಕಡಿಮೆಯಾಗುತ್ತದೆ. ಸ್ಟ್ರೋಕ್‌ಗೆ ಮೊದಲ ಕಾರಣವೇ ಹೈಪರ್‌ಟೆನ್ಷನ್ ಆಗಿದೆ. ಜೀವನ ಶೈಲಿ, ಆಹಾರ ಪದ್ಧತಿ, ದೈಹಿಕ, ಮಾನಸಿಕ ಹಾಗೂ ಸಾಮಾಜಿಕವಾಗಿ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಮೂಲಕ ಸ್ಟ್ರೋಕ್‌ಗೆ ಒಳಗಾಗುವುದನ್ನು ತಪ್ಪಿಸಬಹುದು ಎಂದರು.

ಸಾಂಕ್ರಾಮಿಕ ರೋಗಗಳಿಂದ ಉಂಟಾಗುವ ಸಾವಿನ ಪ್ರಮಾಣಕ್ಕಿಂತ, ಅಸಾಂಕ್ರಾಮಿಕ ರೋಗದಿಂದ ಎದುರಾಗುತ್ತಿರುವ ಸಾವಿನ ಸಂಖ್ಯೆ ಹೆಚ್ಚಾಗಿದೆ. ವಿವಿಧ ಕಾರಣಗಳಿಂದಾಗಿ ಶೇ.70ರಷ್ಟು ಪ್ರಕರಣಗಳು ಬಡತನ ರೇಖೆಗಿಂತ ಕೆಳಗಡೆ, ಮಧ್ಯಮ ವರ್ಗದವರಲ್ಲಿ ಅಧಿಕ ರಕ್ತದೊತ್ತಡ ಕಾಣಿಸಿಕೊಳ್ಳುತ್ತಿದೆ. ಬಡ ಹಾಗೂ ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಇದು ದೊಡ್ಡ ಸವಾಲಾಗಿ ಪರಿಣಮಿಸುತ್ತಿದೆ ಎಂದರು. ಅ.29ರಂದು ವಿಶ್ವ ಸ್ಟ್ರೋಕ್ ದಿನವನ್ನಾಚರಿಸಲಾಗುತ್ತಿದೆ. ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಪ್ರಯತ್ನಗಳು ಸತತವಾಗಿ ನಡೆಯುತ್ತಿವೆ. ಅಚ್ಚರಿ ಅಂದರೆ ಸಾಂಕ್ರಾಮಿಕ ರೋಗಗಳಿಂದ ಉಂಟಾಗುವ ಸಾವಿಗಿಂತ ಸಕ್ಕರೆ ಕಾಯಿಲೆ, ಅಧಿಕ ರಕ್ತದೊತ್ತಡ ಸೇರಿದಂತೆ ಇತರೆ ಅಸಾಂಕ್ರಾಮಿಕ ರೋಗಗಳಿಂದ ಉಂಟಾಗುತ್ತಿರುವ ಸಾವು ಹೆಚ್ಚಾಗುತ್ತಿದೆ ಎಂದರು.

ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕ ನೇಮಕಾತಿ

ವಿವಾಹಿತ ಮಹಿಳೆಯರು ಸಲ್ಲಿಸಿದ ತಂದೆ ಮನೆ ಜಾತಿ, ಆದಾಯ ಪ್ರಮಾಣ ಪತ್ರ ತಿರಸ್ಕೃತ

ಮೈಸೂರು, ಅ.22(ಎಸ್‌ಪಿಎನ್)–ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿ ವೇಳೆ ವಿವಾಹಿತ ಮಹಿಳಾ ಅಭ್ಯರ್ಥಿಗಳು, ತಂದೆ ಕುಟುಂಬದ ವಂಶವೃಕ್ಷದಡಿ 'ಜಾತಿ ಮತ್ತು ಆದಾಯ' ಪ್ರಮಾಣ ಪತ್ರ ಪಡೆದು ಶಿಕ್ಷಕ ಹುದ್ದೆಗೆ ಸಲ್ಲಿಕೆ ಮಾಡಿದ್ದ ದಾಖಲಾತಿಯನ್ನು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಜಿಲ್ಲಾ ನೇಮಕಾತಿ ಪ್ರಾಧಿಕಾರ ತಿರಸ್ಕರಿಸಿದೆ.

ವಿವಿಧ ಕೆಟಗರಿಯಡಿ ಆಯ್ಕೆ ಬಯಸಿದ್ದ ವಿವಾಹಿತ ಮಹಿಳಾ ಅಭ್ಯರ್ಥಿಗಳು ಪರೀಕ್ಷೆ ಬರೆಯುವ ಸಂದರ್ಭದಲ್ಲಿ ವಿವಾಹವಾಗಿದ್ದರೆ ನಿಯಮಾನುಸಾರ ತನ್ನ ಗಂಡನ ಮನೆಯ ವಂಶವೃಕ್ಷದಡಿ ಪಡೆದಿರುವ 'ಜಾತಿ ಮತ್ತು ಆದಾಯ' ಪ್ರಮಾಣ ಪತ್ರವನ್ನು ದಾಖಲಾತಿ ಪರಿಶೀಲನೆಗೆ ನೀಡಬೇಕಿತ್ತು. ಆದರೆ, ಈ ಅಭ್ಯರ್ಥಿಗಳು ತಮ್ಮ ತಂದೆ ಮನೆ ವಿಳಾಸದಲ್ಲಿ ಪಡೆದಿದ್ದ 'ಜಾತಿ ಮತ್ತು ಆದಾಯ' ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದರು. ಇಂತಹ ನೂರಕ್ಕೂ ಹೆಚ್ಚು ಅಭ್ಯರ್ಥಿಗಳು ಈ ಗೊಂದಲದಲ್ಲಿ ಸಿಲುಕಿ ದ್ದಾರೆ. ಸರಿಯಾದ ದಾಖಲಾತಿ ನೀಡದ ಹಿನ್ನೆಲೆಯಲ್ಲಿ ಅಂತಹ ಅಭ್ಯರ್ಥಿಗಳ ಹೆಸರನ್ನು ಕೆಟಗರಿ ಪಟ್ಟಿಯಿಂದ ಕೈಬಿಟ್ಟು, ಸಾಮಾನ್ಯ ವರ್ಗದ ಪಟ್ಟಿಗೆ ವರ್ಗಾಯಿಸ ಲಾಗಿದೆ ಎಂದು ಅಧಿಕಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

> “ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳ ದಾಖಲಾತಿ ಪರಿಶೀಲಿಸಲಾಗಿದೆ. ಅದರಲ್ಲಿ ನೂರಕ್ಕೂ ಹೆಚ್ಚು ವಿವಾಹಿತ ಮಹಿಳಾ ಅಭ್ಯರ್ಥಿಗಳು, ಗಂಡನ ಮನೆಯ ವಿಳಾಸದ 'ಜಾತಿ ಮತ್ತು ಆದಾಯ' ಪ್ರಮಾಣ ಪತ್ರವನ್ನು ನೀಡುವ ಬದಲು, ತಮ್ಮ ತಂದೆ ಮನೆ ವಿಳಾಸದಲ್ಲಿ ಪಡೆದಿದ್ದ ಪ್ರಮಾಣ ಪತ್ರವನ್ನು ನೀಡಿದ್ದಾರೆ. ಈ ಅಂಶ ದಾಖಲಾತಿ ಪರಿಶೀಲನೆ ವೇಳೆ ಬಯಲಾಗಿದೆ. ನಾವು ಇಲಾಖಾ ನಿಯಮದಂತೆ ಇಂತಹ ಅಭ್ಯರ್ಥಿಗಳನ್ನು ಕೆಟಗರಿ ಪಟ್ಟಿಯಿಂದ ಕೈಬಿಟ್ಟು ಸಾಮಾನ್ಯ ವರ್ಗದ ಪಟ್ಟಿಗೆ ಸೇರಿಸಲಾಗಿದೆ. ಈ ಗೊಂದಲ ರಾಜ್ಯಾದ್ಯಂತ ಕೆಲ ಅಭ್ಯರ್ಥಿಗಳಲ್ಲಿದೆ.
>
> **–ರಾಮಚಂದ್ರರಾಜೇಅರಸ್, ಉಪನಿರ್ದೇಶಕ, ಶಾಲಾ ಶಿಕ್ಷಣ ಮತ್ತು ಸಾರಕ್ಷತಾ ಇಲಾಖೆ**

ದಾಖಲಾತಿ ಸರಿಪಡಿಸಿಕೊಳ್ಳಿ: ನಾವು ಪದವಿಯನ್ನು ಕಷ್ಟಪಟ್ಟು ಓದಿದ್ದೇವೆ. ಎಲ್ಲಾ ಹಂತದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ದಾಖಲಾತಿ ಪರಿಶೀಲನೆ ವೇಳೆ ಗಂಡನ ಮನೆಯ ವಿಳಾಸದಲ್ಲಿ ಪಡೆದಿರುವ 'ಜಾತಿ ಮತ್ತು ಆದಾಯ ಪ್ರಮಾಣ ಪತ್ರ'ವನ್ನು ನೀಡಬೇಕು ಎಂದು ಇಲಾಖಾ ಅಧಿಕಾರಿಗಳು ತಿಳಿಸಿ, ನಮ್ಮನ್ನು ಕೆಟಗರಿ ಪಟ್ಟಿಯಿಂದ ಕೈಬಿಟ್ಟು, ಸಾಮಾನ್ಯ ಕೆಟಗರಿ ಪಟ್ಟಿಗೆ ಸೇರಿಸಿದ್ದಾರೆ.

ಇದರಿಂದ ನಾವು 'ಕೆಟಗರಿ' ಪಟ್ಟಿಯಲ್ಲಿ ಆಯ್ಕೆಯಾಗುವ ಸಂಭವವಿದ್ದರೂ ಈ ಗೊಂದಲದಿಂದ ನಾವು ಶಿಕ್ಷಕ ವೃತ್ತಿಗೆ ಆಯ್ಕೆಯಾಗುವ ಕನಸು ಗಗನಕುಸುಮವಾಗಿದೆ ಎಂದು ವಿವಾಹಿತ ಮಹಿಳಾ ಅಭ್ಯರ್ಥಿಯೊಬ್ಬರು 'ಮೈಸೂರು ಮಿತ್ರ'ನಲ್ಲಿ ತಮ್ಮ ಅಳಲು ತೋಡಿಕೊಂಡರಲ್ಲದೆ, ಬೇರೆ ಅಭ್ಯರ್ಥಿಗಳು ಈ ಗೊಂದಲದಲ್ಲಿದ್ದರೆ, ಕೂಡಲೇ ದಾಖಲಾತಿ ಸರಿಪಡಿಸಿಕೊಳ್ಳುವಂತೆ ಮನವಿ ಮಾಡಿದರು.

ನಾವು ಪರೀಕ್ಷೆ ಬರೆಯುವಾಗ ಈ ಅಂಶ ನಮಗೆ ತಿಳಿದಿರಲಿಲ್ಲ. ಇದೀಗ ಅಧಿಕಾರಿಗಳು ದಾಖಲಾತಿ ಪರಿಶೀಲನೆ ವೇಳೆ ಹುದ್ದೆಗೆ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಮಹಿಳಾ ಅಭ್ಯರ್ಥಿ ತಂದೆಯ ಆಶ್ರಯ (ಮದುವೆ ಆಗದಿದ್ದ ಸಂದರ್ಭದಲ್ಲಿ)ದಲ್ಲಿದ್ದರೇ ಮಾತ್ರ ಆ ವಿಳಾಸದ 'ಜಾತಿ ಮತ್ತು ಆದಾಯ' ಪ್ರಮಾಣ ಪತ್ರ ವನ್ನು ಪರಿಗಣಿಸುತ್ತಿದ್ದೆವು. ಈಗ ಅದು ಸಾಧ್ಯವಿಲ್ಲ.

ಮಾರ್ಗಸೂಚಿ ಅನ್ವಯ ಗಂಡನ ಮನೆ ವಿಳಾಸದ 'ಜಾತಿ ಮತ್ತು ಆದಾಯ' ಪ್ರಮಾಣ ಪತ್ರವನ್ನು ಮಾತ್ರ ಪರಿಗಣಿಸುತ್ತೇವೆ ಎಂದು ತಿಳಿಸಿದ್ದಾರೆ. ಇದರಿಂದ ನಾವು ಶಿಕ್ಷಕ ವೃತ್ತಿಯಿಂದ ವಂಚಿತರಾಗುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು.

ವಿಧಾನಸಭಾ ಚುನಾವಣೆಗೆ ಪಕ್ಷಗಳ ಸಿದ್ಧತೆ; ಹಾಲಿ ಶಾಸಕರ ಪುನರಾಯ್ಕೆ ತೆಲೆಬಿಸಿ

ಬೆಂಗಳೂರು, ಅ.22– ರಾಜ್ಯ ವಿಧಾನ ಸಭೆ ಚುನಾವಣೆಗೆ ಕೆಲ ತಿಂಗಳು ಬಾಕಿಯಿರುವಾಗಲೇ ಬಿಜೆಪಿ, ಕಾಂಗ್ರೆಸ್ ಹಾಗೂ ಜೆಡಿಎಸ್ ಪ್ರಚಾರ ಆರಂಭಿಸಿದ್ದು, ಮೂರೂ ಪಕ್ಷಗಳ ಹಾಲಿ ಶಾಸಕರು ಸೋಲು, ಗೆಲುವಿನ ಲೆಕ್ಕಾಚಾರದಲ್ಲಿ ತೊಡಗಿದ್ದಾರೆ.

ಅಭಿವೃದ್ಧಿ ನಿರ್ಲಕ್ಷ್ಯ, ಸಮುದಾಯದ ವಿರೋಧ ಸೇರಿದಂತೆ ಹಲವು ಕಾರಣಗಳಿಂದಾಗಿ ಬಿಜೆಪಿಯ 20, ಕಾಂಗ್ರೆಸ್ 15 ಹಾಗೂ ಜೆಡಿಎಸ್‌ನ 5 ಹಾಲಿ ಶಾಸಕರ ಪುನರಾಯ್ಕೆ ಕಷ್ಟ ಎನ್ನುವುದು ಆಯಾ ಪಕ್ಷಗಳ ಆಂತರಿಕ ಸಮೀಕ್ಷೆಯಿಂದ ತಿಳಿದುಬಂದಿದ್ದು, ಅಂತಹ ಕ್ಷೇತ್ರಗಳನ್ನು ಉಳಿಸಿಕೊಳ್ಳುವ ನಿಟ್ಟಿನಲ್ಲಿ ಅನುಸರಿಸಬೇಕಾದ ಕಾರ್ಯತಂತ್ರದ ಬಗ್ಗೆ ಚಿಂತನೆ ನಡೆಸಿದ್ದಾರೆ.

ಬಿಜೆಪಿ ಇದುವರೆಗೂ ಗೆಲ್ಲದಿರುವ 60 ಕ್ಷೇತ್ರಗಳ ಜೊತೆಗೆ 20 ಹಾಲಿ ಶಾಸಕರ ಪುನರಾಯ್ಕೆ ಕಷ್ಟಸಾಧ್ಯವಾಗಿರುವ ಕ್ಷೇತ್ರಗಳತ್ತ ಪಕ್ಷದ ನಾಯಕರು ಗಮನಹರಿಸಿದ್ದಾರೆ. ಅಧಿಕಾರಕ್ಕೆ ಬರಬೇಕೆಂಬ ಅತೀವ ವಿಶ್ವಾಸದಲ್ಲಿರುವ ಕಾಂಗ್ರೆಸ್‌ನಲ್ಲೂ ಆಂತರಿಕ ಸಮೀಕ್ಷೆಯ ತಳಮಳ ಶುರುವಾಗಿದ್ದು, ಬಣ ರಾಜಕೀಯ, ನಾಯಕರಲ್ಲಿನ ಸಮನ್ವಯ ಕೊರತೆ ದೊಡ್ಡ ಮಟ್ಟದ ಪೆಟ್ಟು ಕೊಡಲಿದೆ. ಮತ್ತೆ ಗೆಲ್ಲುವುದು ಕಷ್ಟಸಾಧ್ಯ ಎನ್ನುವಂತಿರುವ ಜೆಡಿಎಸ್ ಶಾಸಕರು, ಮುಂದಿನ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷಗಳತ್ತ ಮುಖಮಾಡುವ ಸಾಧ್ಯತೆ ಇರುವುದರಿಂದ ಜೆಡಿಎಸ್‌ನಲ್ಲಿ ಸಂಘಟನೆಗೆ ಆದ್ಯತೆ ನೀಡಲಾಗಿದೆ. ಈ ನಿಟ್ಟಿನಲ್ಲಿ ನ.1ರಿಂದ 'ಪಂಚರತ್ನ ಯಾತ್ರೆ' ಆರಂಭಿಸಿದೆ.

ಮೈಸೂರು ಮಿತ್ರ ಭಾನುವಾರ 23 ಅಕ್ಟೋಬರ್ 2022

ವಿರಾಜಪೇಟೆ ಬಳಿ ಪುರಾತನ ಶಿವನ ದೇವಾಲಯ ಪತ್ತೆ







ಮಡಿಕೇರಿ,ಅ.22– ವಿರಾಜಪೇಟೆ ತಾಲೂಕಿನ ಬೊಳ್ಳುಮಾಡು ಗ್ರಾಮದಲ್ಲಿ ಪುರಾತನ ಕಾಲದ ಅಂದಾಜು 700 ವರ್ಷ ಹಿಂದಿನ ಶಿವ ದೇವಾಲಯ ಒಂದು ಪತ್ತೆಯಾಗಿದೆ. ದೇವಾಲಯ ಸಂಪೂರ್ಣ ಕುಸಿದು ಬಿದ್ದ ಸ್ಥಿತಿಯಲ್ಲಿದ್ದು, ಹಿಂದಿನ ಕಾಲದ ಕೆಂಪು ಕಲ್ಲಿನಿಂದ ನಿರ್ಮಾಣವಾಗಿರುವುದು ಕಂಡು ಬಂದಿದೆ. ವಿರಾಜಪೇಟೆ ತಾಲೂಕಿನ ಕಡಂಗ ಪಾರಾಣೆ ರಸ್ತೆಯಲ್ಲಿರುವ ಅಂಚೆ ಕಂಚೇರಿಯ ಹಿಂಭಾಗ ಈ ದೇವಾಲಯ ಪತ್ತೆಯಾಗಿದೆ.

2008ರಲ್ಲಿ ಬೆಳಕಿಗೆ: ಈ ಭಾಗದಲ್ಲಿ ಶಿವನ ದೇವಾಲಯ ಇರುವುದಾಗಿ ತಂತ್ರಿಗಳ ಮೂಲಕ 2008ರಲ್ಲಿ ಗ್ರಾಮಸ್ಥರಿಗೆ ತಿಳಿದು ಬಂದಿತ್ತು ಆ ಸಂದರ್ಭ ಪಾಳು ಬಿದ್ದ ದೇವಾಲಯದ ಅಭಿವೃದ್ಧಿ ಮಾಡುವ ಸಲುವಾಗಿ ಗ್ರಾಮಸ್ಥರು ದೇವಾಲಯದ ಸುತ್ತಲು ಕಾಡುಗಳನ್ನು ಕಡಿದು ಸ್ವಚ್ಛಗೊಳಿಸಿದ್ದರು. ಆದರೆ ಈ ದೇವಾಲಯಕ್ಕೆ ತೆರಳಲು ರಸ್ತೆ ಇಲ್ಲದ ಕಾರಣ ಮತ್ತೆ ಹಳೆಯ ಸ್ಥಿತಿಗೆ ತಲುಪಿತ್ತು. ಇದೀಗ ಎರಡು ದಿನಗಳ ಹಿಂದೆ ಮತ್ತೆ ದೇವಾಲಯದ ಸುತ್ತಲು ಬೆಳೆದು ನಿಂತಿದ್ದ ಕಾಡನ್ನು ಕಡಿದು ಸ್ವಚ್ಛಗೊಳಿಸಿ ಶೋಧ ಕಾರ್ಯ ನಡೆಸಲಾಯಿತು.

> ಈ ದೇವಾಲಯವನ್ನು ಮಾದೇರಪ್ಪ(ಶಿವ) ದೇವಾಲಯ ಎಂದು ಗುರುತಿಸಲಾಗಿದೆ. ಅತ್ಯಂತ ಪುರಾತನವಾಗಿರುವ ದೇವಾಲಯವನ್ನು ಪುನರ್ ನಿರ್ಮಾಣ ಅಥವಾ ಅಭಿವೃದ್ಧಿ ಮಾಡಲು ಗ್ರಾಮಸ್ಥರೇ ಮುಂದಾಗಿದ್ದೇವೆ. ದೇವಾಲಯಕ್ಕೆ ಸೂಕ್ತ ರಸ್ತೆ ನಿರ್ಮಾಣಕ್ಕೂ ನಿರ್ಧರಿಸಲಾಗಿದೆ. ದೇವಾಲಯದ ಆವರಣದ ಸ್ವಲ್ಪ ದೂರದಲ್ಲಿ ಜೋಡಿ ನಾಗರ ಹಾವಿನ ಕಲ್ಲು ಕೂಡ ಇದೆ. ಇಲ್ಲಿ ಬ್ರಾಹ್ಮಣ ಕುಟುಂಬ ಒಂದು ನೆಲೆಸಿತ್ತು ಎನ್ನಲಾಗುತ್ತಿದೆ. ಆದರೆ ಬ್ರಾಹ್ಮಣರ ಮನೆ ಇದ್ದ ಬಗ್ಗೆ ಯಾವುದೇ ಅವಶೇಷಗಳು ಕಂಡು ಬಂದಿಲ್ಲ.
>
> – **ಮಾತಂಡ ಅರುಣ್**, ಬೊಳ್ಳುಮಾಡು ಗ್ರಾಪಂ ಅಧ್ಯಕ್ಷರು.

ಪುರಾತನ ವಸ್ತುಗಳು ಪತ್ತೆ: ಈ ವೇಳೆ ಬಲಿಪೀಠ, ಕಳಸ, ಮುಖಮಂಟಪ, ಗರ್ಭ ಗುಡಿ, ಮತ್ತು ದೇವಾಲಯದ ಆವರಣದಲ್ಲಿರುವ ಬಾವಿಯಲ್ಲಿ ಕಲ್ಲಿನಲ್ಲಿ ಕೆತ್ತಿರುವ ಶಿವಲಿಂಗ ಒಂದು ಪತ್ತೆಯಾಗಿದೆ. ಕೂಡ ದೇವಾಲಯದಲ್ಲಿ ದೇವರ ಆಯುಧ(ಕಡ್ತಲೆ) ಸಣ್ಣ ಗಣಪತಿ ವಿಗ್ರಹಗಳು ಪತ್ತೆಯಾಗಿವೆ. ಈ ದೇವಾಲಯದ ಅಡಿಪಾಯದಲ್ಲಿ ತ್ರಿಪಟ, ಕುಮುದ, ಜಗತ್ತಿ, ಕಂಠ, ಪಟ್ಟಿಕ, ದೇವಕೋಷ್ಟ, ಸೋಪಾನಗಳಿವೆ. ಸೋಪಾನದಲ್ಲಿ ಸಿಂಹ ಹಾಗೂ ಮೊಸಳೆಯ ಅಂದವಾದ ಕೆತ್ತನೆಗಳಿವೆ

ಶೋಧ ಕಾರ್ಯ: ಬೊಳ್ಳುಮಾಡು ಗ್ರಾಮಸ್ಥರು ದೇವಾಲಯದ ಚರಿತ್ರೆ ಅರಿಯುವ ಸಲುವಾಗಿ ಕೊಡಗಿನವರಾದ ಪ್ರಸ್ತುತ ಮೈಸೂರಿನಲ್ಲಿ ನೆಲೆಸಿರುವ ನಾಯಕಂಡ ಪ್ರಕಾಶ್ ಅವರ ಸಹಾಯ ಪಡೆದಿದ್ದಾರೆ. ನಾಯಕಂಡ ಪ್ರಕಾಶ್ ಅವರು ಆರ್ಕಿಯಾಜಿಕಲ್ ಸರ್ವೆ ಆಫ್ ಇಂಡಿಯಾದ ನಿವೃತ್ತ ಅಧಿಕಾರಿಯಾಗಿದ್ದು, ರಾಮಜನ್ಮ ಭೂಮಿಯ ಸೈಟ್ ಮೇಲ್ವಿಚಾರಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

ದೇವಾಲಯ ಇರುವ ಸ್ಥಳಕ್ಕೆ ಆಗಮಿಸಿ ಅಧ್ಯಯನ ನಡೆಸಿದ ನಾಯಕಂಡ ಪ್ರಕಾಶ್ ಅವರು ಇದು ಅಂದಾಜು 600ರಿಂದ 700 ವರ್ಷ ಹಿಂದಿನ ಶಿವ ದೇವಾಲಯವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಈ ಪುರಾತನ ಕಾಲದ ದೇವಾಲಯ ಭಾಗಮಂಡಲ ದೇವಾಲಯ ನಿರ್ಮಾಣದ ಸಮಕಾಲೀನವಾಗಿರುವ ಸಾಧ್ಯತೆ ಇದೆ ಎಂದು ಮಾಹಿತಿ ನೀಡಿದ್ದಾರೆ. ಮಾತ್ರವಲ್ಲದೇ ಕೆಲವು ದಾಖಲೆಗಳನ್ನು, ತವೊಂದಿಗೆ ತೆಗೆದು ಕೊಂಡು ಹೋಗಿರುವ ನಾಯಕಂಡ ಪ್ರಕಾಶ್, ಸ್ಥಳದಲ್ಲಿ ಉತ್ಖನನ ನಡೆಸುವ ಅವಶ್ಯಕತೆ ಇರುವುದಾಗಿ ತಿಳಿಸಿದ್ದಾರೆ ಎಂದು ಬೊಳ್ಳುಮಾಡು ಗ್ರಾಪಂ ಅಧ್ಯಕ್ಷ ಮಾತಂಡ ಅರುಣ್ ಅವರು ತಿಳಿಸಿದ್ದಾರೆ.

ಪೈಸಾರಿ ಸ್ಥಳ: ಪ್ರಸ್ತುತ ದೇವಾಲಯ ಇರುವ ಸ್ಥಳ ಪೈಸಾರಿ ಜಾಗ ಎನ್ನಲಾಗುತ್ತಿದೆ. ಆದರೆ ಈ ದೇವಾಲಯ ಸುತ್ತಲು ಹಲವು ಕುಟುಂಬಗಳ ನಿವಾಸ ಮತ್ತು ತೋಟವಿದೆ ಎಂದು ಮಾತಂಡ ಅರುಣ್ ಅವರು ಮಾಹಿತಿ ನೀಡಿದ್ದಾರೆ. ದೇವಾಲಯ ಈ ಹಿಂದೆಯೇ ಪತ್ತೆಯಾಗಿದ್ದರೂ, ಸ್ಥಳಕ್ಕೆ ತೆರಳಲು ಮಾರ್ಗವಿರಲಿಲ್ಲ. ಹೀಗಾಗಿ ಅತ್ತ ಕಡೆಯಾರು ತೆರಳಿರಲಿಲ್ಲ. ದೇವಾಲಯದ ಗರ್ಭ ಗುಡಿಯ ಮೇಲೆ ಮರ ಮುರಿದು ಬಿದ್ದು, ಧ್ವಂಸವಾಗಿರುವಂತೆ ಕಂಡು ಬರುತ್ತಿದೆ ಎಂದು ಅರುಣ್ ಮಾಹಿತಿ ನೀಡಿದರು. ಇದೀಗ ಸ್ಥಳೀಯ ನಿವಾಸಿಯೊಬ್ಬರು ದಾರಿಯನ್ನು ಬಿಟ್ಟು ಕೊಡುವುದಾಗಿ ತಿಳಿಸಿದ್ದಾರೆ ಎಂದು ಮಾತಂಡ ಅರುಣ್ ಮಾಹಿತಿ ನೀಡಿದರು.





ಭೂಸೇನೆಯಲ್ಲಿ ಮೇಜರ್ ಆಗಿ ಬಡ್ತಿ ಪಡೆದ ಕೊಡಗಿನ ಕುವರಿ ಲಿಶ್ಮಿತಾ



ಮಡಿಕೇರಿ,ಅ.22– ಭಾರತೀಯ ಭೂಸೇನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಬಾರಿಕೆ ಲಿಶ್ಮಿತಾ ಮೇಜರ್ ಹುದ್ದೆಗೆ ಬಡ್ತಿ ಹೊಂದಿದ್ದು, ಪ್ರಸ್ತುತ ನಾಗಾಲ್ಯಾಂಡ್‌ನ ದಿಮಾಪುರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಮೂಲತಃ ಭಾಗಮಂಡಲದ ತಾವೂರು ಗ್ರಾಮದ ನಿವಾಸಿ, ಪ್ರಸ್ತುತ ಮಡಿಕೇರಿಯ ಕಾವೇರಿ ಬಡಾವಣೆಯಲ್ಲಿ ನೆಲೆಸಿರುವ ಬಾರಿಕೆ ಅಯ್ಯಪ್ಪ ಹಾಗೂ ರತ್ನಶೀಲ ಅವರ ಪುತ್ರಿ ಲಿಶ್ಮಿತ ಬೆಂಗಳೂರಿನ ಎಸ್‌ಎಂವಿಟಿ ತಾಂತ್ರಿಕ ಕಾಲೇಜಿನಲ್ಲಿ ಸಿವಿಲ್ ಇಂಜಿನಿಯರಿಂಗ್ ಪದವೀಧರೆಯಾಗಿದ್ದು, ಔಪಚಾರಿಕ ಶಿಕ್ಷಣವನ್ನು ಮಡಿಕೇರಿಯ ಸಂತ ಜೋಸೆಫರ ಶಾಲೆ ಮತ್ತು ಪದವಿ ಪೂರ್ವ ಶಿಕ್ಷಣವನ್ನು ಮಂಗಳೂರಿನ ಎಕ್ಸ್‌ಪರ್ಟ್ ಪ.ಪೂ.ಕಾಲೇಜಿನಲ್ಲಿ ಪೂರೈಸಿದ್ದಾರೆ. 2016ರಲ್ಲಿ ಬಾಂಬೆ ಇಂಜಿನಿಯರಿಂಗ್ ಗ್ರೂಪ್ ರೆಜಿಮೆಂಟ್ ಮೂಲಕ ಲೆಫ್ಟಿನೆಂಟ್ ಆಗಿ ಸೇನೆಗೆ ಸೇರ್ಪಡೆಗೊಂಡ ಲಿಶ್ಮಿತ ಒಟಿಎ ಚೆನ್ನೈನಲ್ಲಿ 11 ತಿಂಗಳು ತರಬೇತಿ ಪಡೆದು ನಂತರ ಕ್ಯಾಪ್ಟನ್ ಆಗಿ ಬಡ್ತಿ ಹೊಂದಿ ರಾಂಚಿಯಲ್ಲಿ ಕರ್ತವ್ಯ ನಿರ್ವಹಿಸಿದರು. ಬಳಿಕ ದೆಹಲಿಯಲ್ಲಿ ಸೇವೆ ಸಲ್ಲಿಸಿ ಇದೀಗ ಮೇಜರ್ ಆಗಿ ಬಡ್ತಿ ಹೊಂದಿ ದಿಮಾಪುರದಲ್ಲಿ ಕರ್ತವ್ಯದಲ್ಲಿದ್ದಾರೆ.

ಪೊನ್ನಂಪೇಟೆ ಕೊಡವ ಸಮಾಜದಿಂದ ಕೊಡವ ಆಟ್ ಪಾಟ್ ಕಲಿಕಾ ಶಿಬಿರ

ಶ್ರೀಮಂಗಲ, ಅ.22– ಕೊಡವ ಸಮಾಜಗಳು ಕೇವಲ ಕಲ್ಯಾಣ ಮಂಟಪಕ್ಕೆ ಸೀಮಿತ ಎಂಬ ಅಪವಾದದಿಂದ ಹೊರಬರಲು ಹಲವಾರು ಜನಪರ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು, ಇದೀಗ ಪೊನ್ನಂಪೇಟೆ ಕೊಡವ ಸಮಾಜದಿಂದ ಕೊಡವ ಜಾನಪದ ಕಲೆ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಉಚಿತ ಕೊಡವ ಆಟ್‌ಪಾಟ್, ಪಡಿಪು ಶಿಬಿರ ಹಮ್ಮಿಕೊಂಡಿರುವುದಾಗಿ ಕೊಡವ ಸಮಾಜದ ಅಧ್ಯಕ್ಷ ಕಾಳಿಮಾಡ ಮೋಟಯ್ಯ ಅವರು ತಿಳಿಸಿದ್ದಾರೆ.

ಪೊನ್ನಂಪೇಟೆಯ ಅಪ್ಪಚ್ಚಕವಿ ವಿದ್ಯಾಸಂಸ್ಥೆಯಲ್ಲಿ ನ.1ರಿಂದ ಸಂಜೆ 5 ಗಂಟೆಗೆ ಪ್ರತಿದಿನ ಆಟ್‌ಪಾಟ್ ಪಡಿಪು ಕಾರ್ಯಕ್ರಮ ನಡೆಯಲಿದೆ ಆಸಕ್ತರು ಪೊನ್ನಂಪೇಟೆ ಕೊಡವ ಸಮಾಜದ ಕಚೇರಿಯಲ್ಲಿ ಅಥವಾ ನೇರವಾಗಿ ತರಬೇತಿ ಕಾರ್ಯಕ್ರಮಕ್ಕೆ ಹಾಜರಾಗಬಹುದೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿದ್ದಾಪುರ ವ್ಯಾಪ್ತಿ ಕಾಡಾನೆ ಹಾವಳಿ: ಅಪಾರ ಪ್ರಮಾಣದ ಕೃಷಿ ಫಸಲು ನಾಶ



ಸಿದ್ದಾಪುರ, ಅ.22– ಕಳೆದ ಕೆಲ ತಿಂಗಳುಗಳಿಂದ ಕಾಡಾನೆಗಳು ನಿರಂತರವಾಗಿ ಗ್ರಾಮದ ಸಮೀಪವೇ ಹಾಡಹಗಲಿನಲ್ಲೇ ಕಾಣಿಸಿಕೊಳ್ಳುವುದರ ಮೂಲಕ ಅಪಾರ ಪ್ರಮಾಣದ ಬೆಳೆ ನಾಶದೊಂದಿಗೆ ಕಾರ್ಮಿಕರು, ಬೆಳೆಗಾರರು, ಶಾಲಾ ವಿದ್ಯಾರ್ಥಿಗಳು ಆತಂಕದಲ್ಲಿ ನಡೆದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದ್ದು, ಅರಣ್ಯ ಇಲಾಖೆ ಆನೆ ಹಾವಳಿ ತಡೆಗಟ್ಟುವಲ್ಲಿ ವಿಫಲವಾಗಿದೆ ಸ್ಥಳೀಯರು ಆರೋಪಿಸಿದ್ದಾರೆ.

ಕರಡಿಗೋಡು, ಸಿದ್ದಾಪುರ, ಬೀಟಿಕಾಡು, ಮಟ್ಟ, ಇಂಜಿಲಗೆರೆ, ಅಮ್ಮತ್ತಿ, ಗುಹ್ಯ, ಮಾಲ್ದಾರೆ, ಬಾಡಗ ಬಾಣಂಗಾಲ, ಬಜಕೊಲ್ಲಿ, ಹುಂಡಿ, ಘಟ್ಟದಳ್ಳ, ಮೈಲಾಪುರ ಸೇರಿದಂತೆ ಇತರ ಭಾಗಗಳಲ್ಲಿ ಕಾಡಾನೆ ಹಾವಳಿ ಮಿತಿಮೀರಿದೆ.

ಕಾಫಿ ತೋಟಗಳಲ್ಲೇ ಬೀಡು ಬಿಟ್ಟು ರೈತರು ಬೆಳೆದ ಕಾಫಿ, ಏಲಕ್ಕಿ, ಮೆಣಸು, ಕಿತ್ತಳೆ, ಬಾಳೆ, ಅಡಿಕೆ, ಭತ್ತ ಸೇರಿದಂತೆ ಕೃಷಿ ಫಸಲು ನಾಶ ಮಾಡುವ ಮೂಲಕ ಕಾರ್ಮಿಕರ ಬೆಳೆಗಾರರಲ್ಲಿ ಆತಂಕ ಸೃಷ್ಟಿ ಮಾಡುತ್ತಿದೆ. ಇದರೊಂದಿಗೆ ಹುಲಿ, ಚಿರತೆ, ಕಾಡೆಮ್ಮೆ, ಕಾಡು ಹಂದಿಗಳು ಸೇರಿದಂತೆ ಇತರ ಪ್ರಾಣಿಗಳು ಹಾಡಹಗಲಿನಲ್ಲೇ ರಾಜಾರೋಷವಾಗಿ ಕಾಣಿಸಿಕೊಳ್ಳುವುದರ ಮೂಲಕ ಸಾರ್ವಜನಿಕರ ಮೇಲೆ ದಾಳಿ ಮಾಡುತ್ತಿವೆ.

ಇತ್ತೀಚೆಗೆ ಹುಲಿ ಹಾವಳಿಯಿಂದ ರೈತರ ಜಾನುವಾರುಗಳು ನಿರಂತರ ಬಲಿಯಾಗುತ್ತಿದ್ದು ಕಾರ್ಮಿಕರು, ಬೆಳೆಗಾರರು ಆತಂಕದಲ್ಲಿದ್ದಾರೆ. ಕಾಡಾನೆ ಹಾವಳಿಯಿಂದ ಹಲವು ಸಾವು ನೋವುಗಳು ಸಂಭವಿಸಿದ್ದು, ಕಾಡು ಪ್ರಾಣಿಗಳ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟುವ ನಿಟ್ಟಿನಲ್ಲಿ ಗ್ರಾಮ ಸಭೆಯಲ್ಲಿ ನಿರ್ಣಯ ಕೈಗೊಂಡು ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದ್ದರೂ ಇದುವರೆಗೂ ಯಾವುದೇ ಕ್ರಮ ಕೈಗೊಳ್ಳದೆ ಯೋಜನೆ ರೂಪಿಸದೆ ಅಸಾಯಕತೆ ತೋರುತ್ತಿದ್ದಾರೆ ಎಂಬುದು ಗ್ರಾಮಸ್ಥರ ವಾದ.

ಗ್ರಾಮೀಣ ಭಾಗದಲ್ಲಿ ಬಸ್ ಸಂಪರ್ಕ ವ್ಯವಸ್ಥೆ ಇಲ್ಲದೆ ಶಾಲಾ ವಿದ್ಯಾರ್ಥಿಗಳು ಶಾಲೆಗೆ ತೆರಳಲು ಹಿಂದೇಟು ಹಾಕುವಂಥ ಸ್ಥಿತಿ ಎದುರಾಗಿದೆ. ಶಾಲೆಗೆ ತೆರಳುವ ಸಂದರ್ಭದಲ್ಲಿ ಹಲವು ಬಾರಿ ಹುಲಿ ಕಾಡಾನೆಗಳು ವಿದ್ಯಾರ್ಥಿಗಳಿಗೆ ಕಾಣಿಸಿಕೊಂಡು ಮನೆಗೆ ಹಿಂತಿರುಗಿದ್ದ ಘಟನೆಗಳು ನಡೆದಿದೆ. ಬೆಳೆ ಹಾಗೂ ಪ್ರಾಣ ಹಾನಿಗೆ ಪರಿಹಾರಕೊಡುವ ಮುನ್ನ ಕಾಡುಪ್ರಾಣಿಗಳನ್ನು ಶಾಶ್ವತವಾಗಿ ತಡೆಗಟ್ಟಬೇಕೆಂದು ಕಾರ್ಮಿಕರು, ಬೆಳೆಗಾರರು ಒತ್ತಾಯಿಸಿದರು.

> ಸಿದ್ಧಾಪುರ ಸುತ್ತಮುತ್ತಲ ಭಾಗಗಳಲ್ಲಿ ನಿರಂತರವಾಗಿ ಕಾಡುಪ್ರಾಣಿಗಳ ಹಾವಳಿ ಮಿತಿಮೀರಿದ್ದು, ಕೃಷಿ ಫಸಲು ನಾಶ ಮಾಡುವ ಮೂಲಕ ಸಾರ್ವಜನಿಕರಲ್ಲಿ ಆತಂಕ ಸೃಷ್ಟಿ ಮಾಡಿದೆ. ಕೂಡಲೆ ಕಾಡುಪ್ರಾಣಿಗಳ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟಬೇಕು.
>
> –**ದೇಚಣಿರ ವಜ್ರು ಬೋಪಣ್ಣ**, ಕೊಡಗು ರೈತ ಸಂಘದ ಸಿದ್ದಾಪುರ ವಲಯಾಧ್ಯಕ್ಷ.

> ಕಾಡು ಪ್ರಾಣಿಗಳ ಹಾವಳಿ ತಡೆಗಟ್ಟಲು ಗ್ರಾಮ ಸಭೆಯಲ್ಲಿ ಅರಣ್ಯ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಕಾಡು ಪ್ರಾಣಿಗಳ ಹಾವಳಿಯಿಂದ ನೆಮ್ಮದಿಯ ಜೀವನ ನಡೆಸಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ.
>
> –**ಸಮೀರ್**, ಮಾಲ್ದಾರೆ ಗ್ರಾಪಂ ಅಧ್ಯಕ್ಷ.

ಇಂದು 7ನೇ ಅಂತಾರಾಷ್ಟ್ರೀಯ ಆಯುರ್ವೇದ ದಿನಾಚರಣೆ

ಮಡಿಕೇರಿ, ಅ.22– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆಯುಷ್ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಿವಿಧ ಸಂಘ ಸಂಸ್ಥೆಗಳ ಸಹಕಾರದಲ್ಲಿ 7 ನೇ ಅಂತರಾಷ್ಟ್ರೀಯ ಆಯುರ್ವೇದ ದಿನಾಚರಣೆಯು 'ಪ್ರತಿ ದಿನ ಪ್ರತಿ ಮನೆಯಲ್ಲೂ ಆಯುರ್ವೇದ' ಎಂಬ ಘೋಷ ವಾಕ್ಯದಡಿ ಅ.23 ರಂದು ಬೆಳಗ್ಗೆ 9 ಗಂಟೆಗೆ ನಗರದ ಕೆಳಗಿನ ಗೌಡ ಸಮಾಜದಲ್ಲಿ ನಡೆಯಲಿದೆ.

ಜಿಲ್ಲಾ ಉಸ್ತುವಾರಿ ಸಚಿವ ಬಿ.ಸಿ.ನಾಗೇಶ್, ಶಾಸಕರಾದ ಎಂ.ಪಿ. ಅಪ್ಪಚ್ಚುರಂಜನ್, ಕೆಜಿ.ಬೋಪಯ್ಯ, ಎಂ.ಪಿ.ಸುಜಾ ಕುಶಾಲಪ್ಪ ಎಸ್.ಎಲ್. ಭೋಜೇಗೌಡ, ಆಯನೂರು ಮಂಜುನಾಥ್, ಸಂಸದ ಪ್ರತಾಪ್ ಸಿಂಹ, ಕರ್ನಾಟಕ ಜೀವ ವೈವಿಧ್ಯ ಮಂಡಳಿಯ ಅಧ್ಯಕ್ಷರಾದ ನಾಪಂಡ ರವಿ ಕಾಳಪ್ಪ ಕೊಡಗು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಅನ್ಬುಕುಮಾರ್, ಆಯುಷ್ ಇಲಾಖೆಯ ಆಯುಕ್ತ ರಾಮಚಂದ್ರ, ಡಿಸಿ ಭಂವರ್ ಸಿಂಗ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎ.ಅಯ್ಯಪ್ಪ ಜಿಲ್ಲಾ ಆಯುಷ್ ಅಧಿಕಾರಿ ಡಾ.ರೇಣುಕಾದೇವಿ ಇತರರು ಪಾಲ್ಗೊಳ್ಳಲಿದ್ದಾರೆ.

ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಪೌರಕಾರ್ಮಿಕರ ಖಾಯಂಗೆ ಸಂಪುಟ ಅನುಮೋದನೆ

ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಮಾಹಿತಿ



ಚಾಮರಾಜನಗರ, ಅ.22–ಪೌರ ಕಾರ್ಮಿಕರು ಗೌರವಯುತ ಜೀವನಕ್ಕಾಗಿ ರಾಜ್ಯ ಸರ್ಕಾರವು ದೇಶದಲ್ಲಿಯೇ ಮೊದಲ ಬಾರಿಗೆ ಗುತ್ತಿಗೆ ಹಾಗೂ ನೇರಪಾವತಿಯಡಿ ಕಾರ್ಯ ನಿರ್ವಹಿಸುತ್ತಿರುವ ಪೌರ ಕಾರ್ಮಿಕರನ್ನು ಖಾಯಂಗೊಳಿಸಲು ಸಮಿತಿ ರಚಿಸಿದ್ದು, ಇದರ ಭಾಗವಾಗಿ 11,133 ಮಂದಿಯ ಖಾಯಂಗೆ ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಮಾಹಿತಿ ನೀಡಿದರು.

ನಗರದ ಎಲ್‌ಐಸಿ ಕಚೇರಿಯ ಬಳಿಯಿರುವ ನಂದಿ ಭವನದಲ್ಲಿಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಮತ್ತು ಅಭಿವೃದ್ಧಿ ನಿಗಮ ಹಾಗೂ ಜಿಲ್ಲಾಡಳಿತದ ಸಹಯೋಗದಲ್ಲಿ ಆಯೋಜಿಸಿದ್ದ ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಮ್ಯಾನುವೆಲ್ ಸ್ಕ್ಯಾವೆಂಜಿಂಗ್ ನಿರ್ಮೂಲನಾ ಕಾಯ್ದೆ–2013ರ ಕುರಿತು ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ 54 ಸಾವಿರಕ್ಕೂ ಹೆಚ್ಚಿನ ಪೌರಕಾರ್ಮಿಕರು ಜನರ ಮನೆ ಕಸ ತೆಗೆದು ಹೃದಯವಂತಿಕೆ ಮೆರೆಯುತ್ತಿದ್ದಾರೆ. ಈ ಪೈಕಿ 10,527 ಖಾಯಂ ಪೌರಕಾರ್ಮಿಕರಿದ್ದು, 26,349 ಮಂದಿ ನೇರಪಾವತಿಯಡಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಲೋಡರ್ಸ್, ಕ್ಲೀನರ್ಸ್, ಯುಜಿಡಿ ವರ್ಕರ್ಸ್ ಆಗಿ 17,636 ಮಂದಿ ಪೌರಕಾರ್ಮಿಕರು ದುಡಿಯುತ್ತಿರುವುದು ಕಂಡು ಬಂದಿದೆ. ಡಿಸೆಂಬರ್ ಅಂತ್ಯದ ವೇಳೆಗೆ ಎಲ್ಲಾ ಪೌರಕಾರ್ಮಿಕರನ್ನು ಖಾಯಂಗೊಳಿಸಲು ಸರ್ಕಾರ ನಿರ್ಧರಿಸಿದೆ ಎಂದು ಸಚಿವರು ತಿಳಿಸಿದರು.

ಚಾಮರಾಜನಗರ ಜಿಲ್ಲೆಯ ನಗರ, ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಒಟ್ಟು 326 ಪೌರ ಕಾರ್ಮಿಕರಿದ್ದು, ಈ ಪೈಕಿ 129 ಖಾಯಂ, 108 ನೇರಪಾವತಿ ಹಾಗೂ 91 ನೌಕರರು ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಮೊದಲ ಹಂತದಲ್ಲಿ ಜಿಲ್ಲೆಯ 108 ಪೌರಕಾರ್ಮಿಕರನ್ನು ಖಾಯಂಗೊಳಿಸಲು ಸಚಿವ ಸಂಪುಟ ನಿರ್ಣಯಿಸಿದೆ. ಮಲೆ ಮಹದೇಶ್ವರಬೆಟ್ಟದ ಎಲ್ಲಾ ಸಫಾಯಿ ಕರ್ಮಚಾರಿಗಳಿಗೂ ಶೀಘ್ರದಲ್ಲಿಯೇ ವಸತಿ ಸೌಲಭ್ಯ ಕಲ್ಪಿಸಿ, 150 ಮಂದಿ ಪೌರಕಾರ್ಮಿಕರನ್ನೂ ಖಾಯಂಗೊಳಿಸಲು ಸರ್ಕಾರ ಕ್ರಮ ವಹಿಸಲಿದೆ ಎಂದು ವಿ.ಸೋಮಣ್ಣ ಭರವಸೆ ನೀಡಿದರು.

ಸಂಸದ ವಿ.ಶ್ರೀನಿವಾಸಪ್ರಸಾದ್ ಮಾತನಾಡಿ, ಪರಿಶಿಷ್ಟ ಸಮುದಾಯಗಳಲ್ಲಿ ಪೌರ ಕಾರ್ಮಿಕರನ್ನು ಅಸ್ಪೃಶ್ಯರಂತೆ ನೋಡಲಾಗುತ್ತಿದೆ. ಇದು ಸಲ್ಲದು. ನಾವೆಲ್ಲರೂ ಅವರನ್ನು ಮಾದರಿಯಾಗಿಸಿಕೊಳ್ಳುವ ಹೃದಯವಂತ ಮನಸ್ಸುಗಳಾಗಬೇಕು. ಸಾಮಾಜಿಕ ಬದಲಾವಣೆಗಾಗಿ ಇಂತಹ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಬೇಕು ಹಾಗೂ ಪೌರಕಾರ್ಮಿಕರನ್ನು ಪ್ರೋತ್ಸಾಹಿಸಬೇಕು ಎಂದರು.

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಎಂ.ಶಿವಣ್ಣ ಕೋಟೆ ಮಾತನಾಡಿದರು. ಇದೇ ವೇಳೆ ಸಚಿವರು ಪೌರಕಾರ್ಮಿಕರ ಐದು ಮಕ್ಕಳನ್ನು ಶೈಕ್ಷಣಿಕವಾಗಿ ದತ್ತು ತೆಗೆದುಕೊಳ್ಳುತ್ತಿರುವುದಾಗಿ ಘೋಷಿಸಿದರು. ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ನಗದು ಬಹುಮಾನ, ಸ್ಮರಣಿಕೆ ನೀಡಿ ಸನ್ಮಾನಿಸಿದ್ದಲ್ಲದೆ, ಅರ್ಹ ಪೌರಕಾರ್ಮಿಕ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಿಸಲಾಯಿತು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಾಸಕರಾದ ಎನ್.ಮಹೇಶ್, ಸಿ.ಎಸ್.ನಿರಂಜನಕುಮಾರ್, ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ನಗರಸಭೆ ಅಧ್ಯಕ್ಷೆ ಸಿ.ಎಂ.ಆಶಾ, ಉಪಾಧ್ಯಕ್ಷೆ ಪಿ.ಸುಧಾ, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಡಿಸಿ ಎಸ್.ಕಾತ್ಯಾಯಿನಿದೇವಿ, ರಾಜ್ಯ ಸಫಾಯಿ ಕರ್ಮಚಾರಿಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ವೆಂಕಟೇಶ್ ಇತರರು ಕಾರ್ಯಕ್ರಮದಲ್ಲಿದ್ದರು.

ಸಚಿವರ ವಿಳಂಬ ಆಗಮನಕ್ಕೆ ಆಕ್ರೋಶ

ಸಭೆ ಬಹಿಷ್ಕರಿಸಿ, ರೈತ ಮುಖಂಡರ ಪ್ರತಿಭಟನೆ



ಚಾಮರಾಜನಗರ, ಅ.22–ರೈತರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಚರ್ಚಿಸಲು ಕರೆದಿದ್ದ ಸಭೆಗೆ ಜಿಲ್ಲಾ ಉಸ್ತುವಾರಿ ಸಚಿವರು ಒಂದೂವರೆ ಗಂಟೆಗಳ ಕಾಲ ವಿಳಂಬವಾಗಿ ಆಗಮಿಸಿದ್ದಕ್ಕೆ ಅಸಮಾಧಾನಗೊಂಡ ರೈತ ಮುಖಂಡರು, ಸಭೆ ಬಹಿಷ್ಕರಿಸಿ ಸಚಿವರ ವಿರುದ್ಧ ಪ್ರತಿಭಟಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ನೇತೃತ್ವದಲ್ಲಿ ನಗರ ಜಿಲ್ಲಾ ಪಂಚಾಯಿತ್ ಸಭಾಂಗಣದಲ್ಲಿಂದು 12 ಗಂಟೆಗೆ ರೈತ ಮುಖಂಡರ ಸಭೆ ಕರೆಯಲಾಗಿತ್ತು. ಸಭೆಯಲ್ಲಿ ಪಾಲ್ಗೊಂಡು ತಮ್ಮ ಸಮಸ್ಯೆಗಳನ್ನು ತಿಳಿಸಲು ರೈತ ಮುಖಂಡರು ಸರಿಯಾದ ಸಮಯಕ್ಕೆ ಆಗಮಿಸಿದ್ದರು. ಆದರೆ ಸಭೆ ನಡೆಸಬೇಕಾದ ಜಿಲ್ಲಾ ಉಸ್ತುವಾರಿ ಸಚಿವರೇ ಮಧ್ಯಾಹ್ನ 1.30ಕ್ಕೆ ಅಂದರೆ ಸಭೆಗೆ ಒಂದೂವರೆ ಗಂಟೆಗಳ ಕಾಲ ತಡವಾಗಿ ಆಗಮಿಸಿದರು.

ಇದರಿಂದ ಕುಪಿತಗೊಂಡ ರೈತ ಮುಖಂಡರು, ಜಿಲ್ಲಾಡಳಿತ ಭವನದ ಮುಖ್ಯದ್ವಾರ ಮುಂಭಾಗ ಪ್ರತಿಭಟನೆ ಆರಂಭಿಸಿದರು. ಸಚಿವ ವಿ.ಸೋಮಣ್ಣ ಅವರ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಆಕ್ರೋಶ ವ್ಯಕ್ತಪಡಿಸಿದರು.

ಸಭೆಗೆ ವಿಳಂಬವಾಗಿ ಆಗಮಿಸುವ ಮೂಲಕ ರೈತರನ್ನು ಅವಮಾನಿಸಿದ್ದಾರೆ. ಇವರಿಗೆ ರೈತರ ಸಭೆ ಮುಖ್ಯವಲ್ಲ. ಗಣಪತಿ ಮೆರವಣಿಗೆ ಸೇರಿದಂತೆ ಇತರೆ ಸಭೆ, ಸಮಾರಂಭಗಳು ಮುಖ್ಯವಾಗಿದೆ. ಸೋಮಣ್ಣ ಅವರು ಮಾತಿನಂತೆ ನಡೆದುಕೊಳ್ಳುವುದಿಲ್ಲ. ಬರೀ ಸುಳ್ಳಿನ ಸರದಾರರಾಗಿದ್ದಾರೆ ಎಂದು ಪ್ರತಿಭಟನಾಕಾರರು ಆರೋಪಿದರು.

ರೈತ ಸಂಘದ ರಾಜ್ಯ ಉಪಾಧ್ಯಕ್ಷ ಮಹೇಶ ಪ್ರಭು, ಜಿಲ್ಲಾ ಅಧ್ಯಕ್ಷ ಹೊನ್ನೂರು ಪ್ರಕಾಶ್, ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ಹಳ್ಳಿಕೆರೆಹುಂಡಿ ಭಾಗ್ಯರಾಜ್, ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗುರುಪ್ರಸಾದ್ ಮಾತನಾಡಿ, ವಿ.ಸೋಮಣ್ಣ ಅವರಿಗೆ ರೈತರ ಸಮಸ್ಯೆಗಳನ್ನು, ಬಗೆಹರಿಸುವುದು ಮುಖ್ಯವಲ್ಲ. ನಮ್ಮ ಒತ್ತಡಕ್ಕೆ ಮಣಿದು ಈ ಸಭೆ ಕರೆದಿದ್ದರು. ಇನ್ನು ಮುಂದೆ ಸೋಮಣ್ಣ ಅವರು ಕರೆಯುವ ಸಭೆಯಲ್ಲಿ ನಾವು ಪಾಲ್ಗೊಳ್ಳುವುದಿಲ್ಲ. ಮುಖ್ಯಮಂತ್ರಿಗಳೇ ರೈತರ ಸಭೆ ಕರೆಯಬೇಕು. ಸೋಮಣ್ಣ ಅವರನ್ನು ಜಿಲ್ಲೆಯ ಉಸ್ತುವಾರಿಯಿಂದ ಕೈಬಿಡಬೇಕು ಎಂದು ಒತ್ತಾಯಿಸಿದರು.ಎಸ್‌ಪಿ ಟಿ.ಪಿ.ಶಿವಕುಮಾರ್, ಎಡಿಸಿ ಕಾತ್ಯಾಯಿನಿದೇವಿ ಅವರಿಂದ ಪ್ರತಿಭಟನಾನಿರತ ರೈತ ಮುಖಂಡರ ಮನವೊಲಿಸುವ ಪ್ರಯತ್ನ ಸಫಲವಾಗಲಿಲ್ಲ. ಕೊನೆಗೆ ಸಚಿವ ಸೋಮಣ್ಣ ಅವರು ನೆಪಮಾತ್ರಕ್ಕೆ ಶಾಸಕರು ಹಾಗೂ ಅಧಿಕಾರಿಗಳ ಸಭೆ ನಡೆಸಿದರು.



ಜನವರಿ ತಿಂಗಳಲ್ಲಿ ಜರುಗಲಿರುವ ಐತಿಹಾಸಿಕ ಚಿಕ್ಕಲ್ಲೂರು ಶ್ರೀ ಸಿದ್ದಪ್ಪಾಜಿ ಜಾತ್ರಾ ಮಹೋತ್ಸವದ ಸಿದ್ಧತೆಗಳನ್ನು ಕೈಗೊಳ್ಳುವ ನಿಟ್ಟಿನಲ್ಲಿ ಹನೂರು ಬಳಿ ಚಿಕ್ಕಲ್ಲೂರು ಹಳೇಮಠ ಘನನೀಲ ಶ್ರೀ ಸಿದ್ದಪ್ಪಾಜಿ ದೇವಸ್ಥಾನದ ಪೀಠಾಧಿಕಾರಿಗಳು ಹಾಗೂ ಆಡಳಿತಾಧಿಕಾರಿ ಶ್ರೀ ಜ್ಞಾನಾನಂದ ಚೆನ್ನರಾಜೇಅರಸ್ ಅವರ ಪತ್ನಿ ಸನ್ಮತಿ ಜ್ಞಾನಾನಂದ ಚೆನ್ನರಾಜೇಅರಸ್ ಅವರು ಇಂದು ದೇವಸ್ಥಾನಕ್ಕೆ ಭೇಟಿ ನೀಡಿ ಅರ್ಚಕರು ಹಾಗೂ ಹಿರಿಯರ ಜೊತೆಗೆ ಸಮಾಲೋಚನೆ ನಡೆಸಿದರು. ಈ ಸಂದರ್ಭಗಳಲ್ಲಿ ಹಿರಿಯ ಅರ್ಚಕರಾದ ಶಿವನಂಜಪ್ಪ, ಕುಮಾರಸ್ವಾಮಿ, ಶಿವಮೂರ್ತಿ. ವಿವಿಧ ಗ್ರಾಮಗಳ ಮುಖಂಡರಿದ್ದರು.

ಇಂದು ಆಯುರ್ವೇದ ಆರೋಗ್ಯ ತಪಾಸಣೆ

ಗುಂಡ್ಲುಪೇಟೆ, ಅ.22–ತಾಲೂಕಿನ ತೆರಕಣಾಂಬಿಯಲ್ಲಿ 7ನೇಯ ರಾಷ್ಟ್ರೀಯ ಆಯುರ್ವೇದ ದಿನಾಚರಣೆಯ ಅಂಗವಾಗಿ ಅ.23ರಂದು ಉಚಿತ ಆಯುರ್ವೇದ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಏರ್ಪಡಿಸಲಾಗಿದೆ.

ಗ್ರಾಮದಲ್ಲಿರುವ ಶ್ರೀ ಲಕ್ಷ್ಮೀ ವರದರಾಜ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಭಾನುವಾರ ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಜಿಲ್ಲಾಡಳಿತ, ಜಿಪಂ, ಆಯುಷ್ ಇಲಾಖೆ, ಚಾಮರಾಜನಗರ ತಾಲೂಕು ಶರಣ ಸಾಹಿತ್ಯ ಪರಿಷತ್, ಗುಂಡ್ಲುಪೇಟೆ ಹಾಗೂ ತೆರಕಣಾಂಬಿಯ ರವಿಚಂದ್ರ ಯೋಗ ತರಬೇತಿ ಕೇಂದ್ರ ಸಂಯುಕ್ತ ಆಶ್ರಯದಲ್ಲಿ 'ಪ್ರತಿ ದಿನ ಪ್ರತಿ ಮನೆಯಲ್ಲೂ ಆಯುರ್ವೇದ' ಘೋಷವಾಕ್ಯದೊಂದಿಗೆ ಉಚಿತ ಆಯುರ್ವೇದ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಈ ಶಿಬಿರದಲ್ಲಿ ರಕ್ತದೊತ್ತಡ (ಬಿಪಿ), ಮಧುಮೇಹ(ಶುಗರ್), ಮಂಡಿನೋವು, ಕೀಲುನೋವು, ಶ್ವಾಸಕ್ಕೆ ಸಂಬಂಧಿಸಿದಂತೆ ತೊಂದರೆ, ಸ್ತ್ರೀರೋಗ, ವಾತರೋಗ, ತಲೆನೋವು, ಇತರೆ ಕಾಯಿಲೆಗಳಿಗೆ ಉಚಿತ ತಪಾಸಣೆ ನಡೆಸಿಯಲಿದೆ.

ವಿದ್ಯಾ ಗಣಪತಿ ವಿಸರ್ಜನಾ ಅದ್ದೂರಿ ಶೋಭಾಯಾತ್ರೆ



ಚಾಮರಾಜನಗರ, ಅ.22–ನಗರದ ರಥಬೀದಿಯಲ್ಲಿ ಶ್ರೀ ವಿದ್ಯಾಗಣಪತಿ ಮಂಡಳಿಯು ಗಣೇಶ ಚತುರ್ಥಿಯಂದು ಪ್ರತಿಷ್ಠಾಪಿಸಿದ್ದ ವಿದ್ಯಾ ಗಣಪತಿ ವಿಸರ್ಜನಾ ಶೋಭಾಯಾತ್ರೆ ಭಾರೀ ಪೊಲೀಸ್ ಬಂದೋಬಸ್ತ್‌ನಲ್ಲಿ ಶನಿವಾರ ಅದ್ದೂರಿಯಾಗಿ ನಡೆಯಿತು.

ಗುಂಡ್ಲುಪೇಟೆ ಶಾಸಕ ಸಿ.ಎಸ್.ನಿರಂಜನಕುಮಾರ್, ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಬಿಜೆಪಿ ಜಿಲ್ಲಾ ಅಧ್ಯಕ್ಷ ಆರ್.ಸುಂದರ್, ಗಣಪತಿ ಮಂಡಳಿ ಅಧ್ಯಕ್ಷ ಮನೋಜ್ ಪಟೇಲ್ ಸೇರಿದಂತೆ ಇತರರು ಗಣಪತಿಗೆ ಪೂಜೆ ಸಲ್ಲಿಸಿ, ಮೆರವಣಿಗೆಗೆ ಚಾಲನೆ ನೀಡಿದರು.

ನಂತರ ಮೆರವಣಿಗೆ ಸಾಗುತ್ತಿದ್ದಂತೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಅವರು ಆಗಮಿಸಿ ಗಣಪತಿಗೆ ನಮಿಸಿ ಮೆರವಣಿಗೆಯಲ್ಲಿ ತುಸು ದೂರ ಹೆಜ್ಜೆ ಹಾಕಿದರು. ಬಳಿಕ ನಿಗದಿತ ಕಾರ್ಯಕ್ರಮಗಳ ನಿಮಿತ್ತ ತೆರಳಿದರು.

ಗಮನ ಸೆಳೆದ ಕಲಾತಂಡಗಳು: ನಂದಿಧ್ವಜ, ಕಂಸಾಳೆ, ಡೊಳ್ಳುಕುಣಿತ, ವೀರಗಾಸೆ, ಗೊರವರ ಕುಣಿತ, ಕೀಲುಕುದುರೆ, ಯಕ್ಷಗಾನದ ಗೊಂಬೆ, ಮಂಗಳವಾದ್ಯ, ಬ್ಯಾಂಡ್‌ಸೆಟ್, ತಮಟೆ, ಕೇರಳದ ಸಿಂಗಾರಿ ಮೇಳ ಸೇರಿದಂತೆ ಅನೇಕ ಕಲಾತಂಡಗಳು ಭಾಗವಹಿಸುವ ಮೂಲಕ ಮೆರವಣಿಗೆಯ ಮೆರುಗು ಹೆಚ್ಚಿಸಿದ್ದವು. ಗಣಪತಿ ಮೆರವಣಿಗೆಯು ಪ್ರತಿ ವರ್ಷದಂತೆಯೇ ಈ ಬಾರಿಯೂ ನಿಗದಿತ ಮಾರ್ಗಗಳಲ್ಲಿ ಸಾಗಿತು. ತಡರಾತ್ರಿವರೆಗೂ ಮೆರವಣಿಗೆ ಮುಂದುವರೆಯಿತು. ಮೆರವಣಿಗೆ ಮುಗಿದ ಬಳಿಕ ದೊಡ್ಡರಸನ ಕೊಳದಲ್ಲಿ ಗಣಪತಿ ಮೂರ್ತಿ ವಿಸರ್ಜಿಸಲಾಗುವುದು.

ಮೆರವಣಿಗೆಯು ಖಡಕ್ ಮೊಹಲ್ಲಾಕ್ಕೆ ಆಗಮಿಸಿದಾಗ, ಮುಸ್ಲಿಂ ಸಮುದಾಯದ ಮುಖಂಡರು ಮಸೀದಿ ಮುಂಭಾಗ ನಿಂತು ಮೆರವಣಿಗೆಯನ್ನು ಸ್ವಾಗತಿಸಿದರು. ಈ ವೇಳೆ ಹಿಂದೂ ಸಮುದಾಯ, ವಿದ್ಯಾಗಣಪತಿ ಮಂಡಳಿಯ ಮುಖಂಡರು ಹಾಗೂ ಮುಸ್ಲಿಂ ಸಮುದಾಯದ ಮುಖಂಡರು ಶುಭಾಶಯ ವಿನಿಮಯ ಮಾಡಿಕೊಂಡಿದ್ದು ವಿಶೇಷವಾಗಿತ್ತು.

ಅಂಬೇಡ್ಕರ್ ಬೀದಿಗೆ ಮೆರವಣಿಗೆ ಆಗಮಿಸುತ್ತಿದ್ದಂತೆ ತಮ್ಮ ಬಡಾವಣೆಯ ಯಜಮಾನರಿಗೆ ಮೆರವಣಿಗೆಗೆ ವೀಳ್ಯ ನೀಡಿಲ್ಲ. ಶಾಂತಿ ಸಭೆಗೆ ಕರೆಯದೇ ತಮ್ಮನ್ನು ನಿರ್ಲಕ್ಷಿಸಲಾಗಿದೆ ಎಂದು ಬಡಾವಣೆಯ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದರು. ಇವರನ್ನು ಮುಖಂಡರು ಹಾಗೂ ಪೊಲೀಸರು ಮನವೊಲಿಸಿದ ನಂತರ ಮೆರವಣಿಗೆ ಮತ್ತೆ ಆರಂಭವಾಯಿತು. ಗಣಪತಿ ಶೋಭಾಯಾತ್ರೆ ಶಾಂತ ರೀತಿಯಲ್ಲಿ ನಡೆಯುವ ಸಲುವಾಗಿ ಎಸ್ಪಿ ಶಿವಕುಮಾರ್ ಅವರ ನೇತೃತ್ವದಲ್ಲಿ ನಗರದ ಎಲ್ಲೆಡೆ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.



ಗುಂಡ್ಲುಪೇಟೆ ಪಟ್ಟಣದ ಚಾಮುಲ್ ಉಪಕಚೇರಿಯಲ್ಲಿ ತಾಲೂಕಿನ ವಿವಿಧ ಹಾಲು ಉತ್ಪಾದಕರ ಸಹಕಾರ ಸಂಘದ ಮೃತಪಟ್ಟ ಸದಸ್ಯರ 33 ವಾರಸುದಾರರಿಗೆ ತಲಾ 15 ಸಾವಿರ ರೂ.ಗಳಂತೆ 4 ಲಕ್ಷದ 95 ಸಾವಿರ ರೂ. ಪರಿಹಾರವನ್ನು ಚಾಮುಲ್ ನಿರ್ದೇಶಕರಾದ ಹೆಚ್.ಎಸ್.ನಂಜುಂಡಪ್ರಸಾದ್, ಮೂಡುಗೂರು ಎಂ.ಪಿ.ಸುನಿಲ್ ವಿತರಿಸಿದರು. ಈ ವೇಳೆ ಚಾಮುಲ್ ಉಪಕಚೇರಿ ಸಹಾಯಕ ವ್ಯವಸ್ಥಾಪಕ ಜಿ.ಪ್ರಭು ವಿಸ್ತರಣಾಧಿಕಾರಿಗಳು, ಹಾಲು ಉತ್ಪಾದಕರ ಸಹಕಾರ ಸಂಘದ ಕಾರ್ಯದರ್ಶಿಗಳಾದ ಮಹೇಂದ್ರ, ಮೃತ್ಯುಂಜಯ, ನಾಗೇಶ್ ಸೇರಿದಂತೆ ಫಲಾನುಭವಿಗಳಿದ್ದರು.

ಮೈಸೂರು ಮಿತ್ರ ಭಾನುವಾರ 23 ಅಕ್ಟೋಬರ್ 2022

ಒಂದನೇ ಪುಟದಿಂದ

ಅನುಮೋದನೆ

ಕೋಟಿ ರೂ. ಬಂಡವಾಳ ಹೂಡಿಕೆಯಾಗಿ ಸುಮಾರು 2461 ಜನರಿಗೆ ಉದ್ಯೋಗಾವಕಾಶ ಲಭ್ಯವಾಗಲಿದೆ ಎಂದು ಹೇಳಿದರು. 15 ಕೋಟಿ ರೂ.ನಿಂದ 50 ಕೋಟಿ ರೂ. ಒಳಗಿನ ಬಂಡವಾಳ ಹೂಡಿಕೆಯ 25 ಹೊಸ ಯೋಜನೆಗಳಿಗೆ ಸಮಿತಿಯು ಒಪ್ಪಿಗೆ ನೀಡಿದ್ದು, ಇವುಗಳಿಂದ 567.43 ಕೋಟಿ ರೂ. ಬಂಡವಾಳ ಹೂಡಿಕೆ ಹಾಗೂ 2443 ಜನರಿಗೆ ಉದ್ಯೋಗಾವಕಾಶ ಲಭ್ಯವಾಗಲಿದೆ. ಹೆಚ್ಚುವರಿ ಬಂಡವಾಳ ಹೂಡಿಕೆಯ 2 ಯೋಜನೆಗೆ ಅನುಮೋದನೆ ನೀಡಿದ್ದು, ಇದರಿಂದ 230.83 ಕೋಟಿ ರೂ.ಬಂಡವಾಳ ಹೂಡಿಕೆಯಾಗಲಿದೆ. ಮೇಲ್ಕಂಡ ಒಟ್ಟು 35 ಯೋಜನೆಗಳಿಂದ 1747.37 ಕೋಟಿ ರೂ. ಬಂಡವಾಳ ಹೂಡಿಕೆಯಾಗಲಿದ್ದು, ಇವುಗಳಿಂದ 4904 ಜನರಿಗೆ ಉದ್ಯೋಗವಕಾಶ ಲಭ್ಯವಾಗಲಿದೆ.

ನೇಮಕಾತಿಪತ್ರ ವಿತರಿಸಿದ ಜೋಶಿ

ಯುವಕರಿಗೆ ಶುಭ ಕೋರಿದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಪ್ರಧಾನಿ ಮೋದಿ ಅವರ ನೇತೃತ್ವದಲ್ಲಿ ಕೇಂದ್ರ ಸರ್ಕಾರ ನುಡಿದಂತೆ ನಡೆಯುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು. 10 ಲಕ್ಷ ಆಕಾಂಕ್ಷಿಗಳಿಗೆ ಉದ್ಯೋಗದ ಭರವಸೆಯನ್ನು ನೀಡಿರುವ ಪ್ರಧಾನಿ ಮೋದಿಯವರು, ಅದನ್ನು ಶೀಘ್ರದಲ್ಲಿಯೇ ನೆರವೇರಿಸಲಿದ್ದಾರೆ. ಇದರ ಮೊದಲ ಹಂತವಾಗಿ ಇಂದು 75,000 ಯುವಕರಿಗೆ ನೇಮಕಾತಿ ಪತ್ರವನ್ನು ಪ್ರಧಾನಿ ಮೋದಿ ಅವರು ಖುದ್ದಾಗಿ ವರ್ಚುವಲ್ ವೇದಿಕೆಯ ಮೂಲಕ ಹಸ್ತಾಂತರಿಸಿದ್ದಾರೆ ಎಂದರು.

ಕೊಟ್ಟ ಮಾತಿನಂತೆ ಪ್ರಧಾನಿ ನರೇಂದ್ರ ಮೋದಿ ಅವರು ದೇಶದಲ್ಲಿ ಹೊಸ ಉದ್ಯೋಗಗಳನ್ನು ಸೃಷ್ಟಿಸುವತ್ತ ಹೆಜ್ಜೆ ಹಾಕುತ್ತಿದ್ದಾರೆ. ಅಲ್ಲದೇ ಹೆಚ್ಚಿನ ಸಂಖ್ಯೆಯಲ್ಲಿ ನೇಮಕಾತಿಗಳನ್ನು ಮಾಡುವತ್ತ ಮಹತ್ತರ ಹೆಜ್ಜೆಗಳನ್ನು ಇಟ್ಟಿದ್ದಾರೆ. ಒಬ್ಬ ದೂರ ದೃಷ್ಟಿಯುಳ್ಳ ನಾಯಕ ದೇಶದ ಅಭಿವೃದ್ಧಿಗಾಗಿ ಯಾವ ರೀತಿ ಬದಲಾವಣೆಗಳನ್ನು ತರಬಹುದು ಎಂಬುದಕ್ಕೆ ಇದೇ ಉದಾಹರಣೆ ಎಂದು ಪ್ರಹ್ಲಾದ್ ಜೋಶಿ ಅಭಿಪ್ರಾಯ ವ್ಯಕ್ತಪಡಿಸಿದರು. ದೇಶಾದ್ಯಂತ 75 ಸಾವಿರ ಯುವಕರಿಗೆ ಉದ್ಯೋಗದ ನೇಮಕಾತಿ ಪತ್ರ ನೀಡುವ ಈ ಮಹತ್ವದ ಕಾರ್ಯಕ್ರಮದಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿಯವರು ಬೆಂಗಳೂರಿನಿಂದ ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ಸಚಿವರಾದ ಡಾ. ಅಶ್ವತ್ಥ್ ನಾರಾಯಣ್, ಸಂಸದ ಪಿ.ಸಿ.ಮೋಹನ್, ಹಾಗೂ ತೇಜಸ್ವಿ ಸೂರ್ಯ ಉಪಸ್ಥಿತರಿದ್ದರು.

ಭಾರತ್ ಜೋಡೋ ಯಾತ್ರೆ

ಮಾನವೀಯತೆ ಹಾಗೂ ಮಾನವ ಧರ್ಮದ ಆಧಾರದ ಮೇಲೆ ನಡೆದಿರುವ ಯಾತ್ರೆ. ಮಾನವ ಧರ್ಮಕ್ಕೆ ಜಯ ವಾಗಲಿ ಎಂಬ ಉದ್ದೇಶದೊಂದಿಗೆ ರಾಹುಲ್ ಗಾಂಧಿ ಅವರು ಹೆಜ್ಜೆ ಹಾಕುತ್ತಿದ್ದಾರೆ ಎಂದು ಕಾಂಗ್ರೆಸ್ ನಾಯಕರು ಬಿಂಬಿಸಿದ್ದಾರೆ.

ರಾಹುಲ್ ಗಾಂಧಿ ಅವರು ಬಿಸಿಲು, ಮಳೆ ಲೆಕ್ಕಿಸದೆ ಯಾತ್ರೆ ಮಾಡುತ್ತಿದ್ದಾರೆ. ಅವರು ಪ್ರಧಾನಮಂತ್ರಿ ಸ್ಥಾನದ ಅವಕಾಶ ತ್ಯಾಗ ಮಾಡಿ, ಪಕ್ಷದ ಅಧಿಕಾರ ಬಿಟ್ಟುಕೊಟ್ಟು ದೇಶದಲ್ಲಿ ಬದಲಾವಣೆ ತರಲು ನಡೆಯುತ್ತಿದ್ದಾರೆ. ಇದು ಬದಲಾವಣೆ ಹೆಜ್ಜೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಯಾತ್ರೆ ಸಂದರ್ಭದಲ್ಲಿ ಜನರು ಹೇಳಿಕೊಂಡಿರುವ ಸಮಸ್ಯೆ, ನೋವುಗಳಿಗೆ ಪರಿಹಾರ ಕಲ್ಪಿಸಲು ಯೋಜನೆ ರೂಪಿಸಿ ಪ್ರಣಾಳಿಕೆಯಲ್ಲಿ ಸೇರಿಸಲಾಗು ವುದು. ರೈತರು, ಜನ ಸಾಮಾನ್ಯರು, ಯುವಕರು ಜೀವನ ಮಾಡುವುದು ಕಷ್ಟವಾಗಿದೆ. ಯುವಕರಿಗೆ ಉದ್ಯೋಗ ಇಲ್ಲ. ಜನ ಸಾಮಾನ್ಯ ರಿಗೆ ಬೆಲೆ ಏರಿಕೆ ಬರೆ, ರೈತರಿಗೆ ಬೆಂಬಲ ಬೆಲೆ ಇಲ್ಲ. ಈ ಸಮಸ್ಯೆಗಳ ಬಗ್ಗೆ ಹೆಚ್ಚು ಚರ್ಚೆ ಆಗಿದೆ ಎಂದು ತಿಳಿಸಿದರು.

ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಲ್ಲ

ಚುನಾವಣೆಗೆ ಸ್ಪರ್ಧಿಸುತ್ತೇನೆ. ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದಿಲ್ಲ ಎಂದು ಹೇಳಿದರು.ಇದೇ ವೇಳೆ ಬಿಜೆಪಿ ಸರಕಾರ, ಮುಖ್ಯಮಂತ್ರಿ ಬಸವರಾಜ್ ಬೊಮ್ಮಾಯಿ ಹಾಗೂ ಎಂಎಲ್‌ಸಿ ಸಿ.ಪಿ.ಯೋಗೇಶ್ವರ್ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮಕ್ಕಳಿಂದ ಹಣ ವಸೂಲಿಗೆ ಖಂಡನೆ: ಸರಕಾರಿ ಶಾಲೆಗಳಲ್ಲಿ ನಿತ್ಯದ ವೆಚ್ಚಕ್ಕೆ ಪೋಷಕರಿಂದ ಮಾಸಿಕ 100 ರೂ. ವಸೂಲಿ ವಿಚಾರದ ಬಗ್ಗೆಯೂ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಇದು ಅತೀ ನಾಚಿಕೆಗೇಡಿನ ಸಂಗತಿ. ತಕ್ಷಣವೇ ಸರಕಾರ ಈ ನಿರ್ಧಾರವನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಒತ್ತಾಯ ಮಾಡಿದರು. ಪೋಷಕರ ಬಳಿ ಹಣ ವಸೂಲಿ ಮಾಡೋದು ಕೆಟ್ಟ ನಿರ್ಧಾರ. ಸರಕಾರಿ ಶಾಲೆಗಳಲ್ಲಿ ಸರಿಯಾಗಿ ಮೂಲಭೂತ ಸೌಕರ್ಯಗಳಿಲ್ಲ. ಆದರೆ, ಪೋಷಕರಿಂದ ಚಂದಾ ವಸೂಲಿ ಮಾಡೋದು ಸರಕಾರದ ದಿವಾಳಿತನವನ್ನು ತೋರಿಸುತ್ತದೆ. ಈ ರೀತಿಯ ತೀರ್ಮಾನ ಮಾಡುವುದಕ್ಕೆ ಸರಕಾರಕ್ಕೆ ನಾಚಿಕೆ ಆಗಬೇಕು ಎಂದು ಗರಂ ಆದರು. ರಾಜ್ಯದ ಸರಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ದಿನನಿತ್ಯದ ಖರ್ಚು ವೆಚ್ಚಗಳನ್ನು ಭರಿಸಲು ಪ್ರತಿ ತಿಂಗಳು ವಿದ್ಯಾರ್ಥಿಗಳಿಂದ 100 ರು. ಸಂಗ್ರಹ ಮಾಡುವ ಬಗ್ಗೆ ರಾಜ್ಯ ಬಿಜೆಪಿ ಸರಕಾರ ಒಪ್ಪಿಗೆ ನೀಡಿದ್ದು, ಇದು ತೀವ್ರ ವಿವಾದಕ್ಕೆ ಕಾರಣವಾಗಿದೆ. ಪೋಷಕರಿಂದ ತೀವ್ರ ವಿರೋಧ ವ್ಯಕ್ತವಾಗಿದೆ.

ಫೋಟೋಗ್ರಾಫರ್ಸ್ ಸಾವು

ತಗುಲಿ ಕೆಳಗೆ ಬಿದ್ದು ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಎಂ.ಆರ್.ವಿವೇಕ್ 15 ವರ್ಷಗಳಿಂದ ಬೆಸಗರಹಳ್ಳಿ ಗ್ರಾಮದಲ್ಲಿ ಸ್ಟುಡಿಯೋ ನಡೆಸುತ್ತಿದ್ದರು. ಇವರು ಪತ್ನಿ, ಪುತ್ರ, ಪುತ್ರಿ ಅಗಲಿದ್ದಾರೆ. ಕುಟುಂಬಕ್ಕೆ ಆಧಾರವಾಗಿದ್ದ ಇವರ ನಿಧನದಿಂದ ಕುಟುಂಬ ಸಂಕಷ್ಟಕ್ಕೀಡಾಗಿದೆ. ಗೆಜ್ಜಲಗೆರೆ ಗ್ರಾಮದ ಯುವಕ ಜಿ.ಎಸ್.ಮಧುಕುಮಾರ್, ಕಳೆದ ಆರೇಳು ವರ್ಷಗಳಿಂದ ಎಂ.ಆರ್.ವಿವೇಕ್ ಅವರ ಲಕ್ಷ್ಮಿ ಸ್ಟುಡಿಯೋದಲ್ಲಿ ಕೆಲಸ ಮಾಡುತ್ತಿದ್ದರು. ಇವರ ಸಾವಿನಿಂದ ಬೆಸಗರಹಳ್ಳಿ ಗ್ರಾಮದಲ್ಲಿ ಶೋಕದ ವಾತಾವರಣ ನೆಲೆಸಿದೆ. ಘಟನೆಯ ಬಳಿಕ ಇಬ್ಬರ ದೇಹವನ್ನು ಮಂಡ್ಯ ಜಿಲ್ಲಾಸ್ಪತ್ರೆಗೆ ರವಾನಿಸಲಾಯಿತು. ಅಲ್ಲಿ ಪಂಚನಾಮೆ ನಡೆಸಿ ವಾರಸುದಾರಿಗೆ ಶವಗಳ ಒಪ್ಪಿಸಲಾಯಿತು.

ಬೆಸಗರಹಳ್ಳಿ ಠಾಣೆ ಸೌತ್ ಇನ್ಸ್‌ಪೆಕ್ಟರ್ ಮಹೇಶ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಪರಿಹಾರಕ್ಕೆ ಒತ್ತಾಯ: ಅಂಗಡಿ ಮುಂಗಟ್ಟು ಮತ್ತು ಮನೆಗಳ ಮೇಲೆ, ಮುಂದೆ ಹಾದು ಹೋಗಿರುವ ವಿದ್ಯುತ್ ವೈರ್‌ಗಳಿಂದ ಅವಘಡ ಸಂಭವಿಸದಂತೆ ಪೈಪ್‌ಗಳನ್ನು ಹಾಕಲು ಇಲಾಖೆಯ ಮಾರ್ಗಸೂಚಿ ಇದೆ. ಆದರೂ, ಇದನ್ನು ವಿದ್ಯುತ್ ಇಲಾಖೆ ಅಧಿಕಾರಿಗಳು ನಿರ್ಲಕ್ಷಿಸಿದ್ದಾರೆ. ಆದ್ದರಿಂದ, ಎರಡೂ ಕುಟುಂಬಗಳಿಗೆ ತಲಾ 25 ಲಕ್ಷ ರೂ. ಪರಿಹಾರ, ಅನುಕಂಪದ ಆಧಾರದ ಮೇಲೆ ಸರ್ಕಾರಿ ಉದ್ಯೋಗ ನೀಡಿ ಕುಟುಂಬಗಳನ್ನು ರಕ್ಷಿಸಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ದೇಣಿಗೆ ಸಂಗ್ರಹಿಸುವ ಸುತ್ತೋಲೆ ಹಿಂದಕ್ಕೆ

ವ್ಯಾಪಕ ಆಕ್ರೋಶ ವ್ಯಕ್ತವಾಗಿದೆ. ವಿಪಕ್ಷ ನಾಯಕ ಸಿದ್ದರಾಮಯ್ಯ, ಬಿಜೆಪಿ ಎಂಎಲ್‌ಸಿ ಆಗಿರುವ ಅಡಗೂರು ಹೆಚ್.ವಿಶ್ವನಾಥ್ ಸೇರಿದಂತೆ ಹಲವು ರಾಜಕೀಯ ಮುಖಂಡರು ಹಾಗೂ ಸಂಘ-ಸಂಸ್ಥೆಗಳು, ಸರ್ಕಾರಿ ಶಾಲಾ ಮಕ್ಕಳ ಪಾಲಕರಿಂದ ದೇಣಿಗೆ ಸಂಗ್ರಹಿಸುವುದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು. ಈ ಸಂಬಂಧ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು, ತಮ್ಮ ಇಲಾಖೆಯ ಆಯುಕ್ತರು ಹೊರಡಿಸಿರುವ ಸುತ್ತೋಲೆಗೂ ತಮಗೂ ಸಂಬಂಧವೇ ಇಲ್ಲ ಎಂದು ಹೇಳಿದ್ದರಲ್ಲದೆ, ಆರ್‌ಟಿಇ ಕಾಯಿದೆಯಲ್ಲಿ ದೇಣಿಗೆ ಸಂಗ್ರಹಿಸಲು ಅವಕಾಶ ಕಲ್ಪಿಸಲಾಗಿದೆ. ಈ ಕಾಯಿದೆಯನ್ನು ಸಿದ್ದರಾಮಯ್ಯ ಮುಖ್ಯಮಂತ್ರಿಗಳಾಗಿದ್ದ ವೇಳೆ ಜಾರಿಗೆ ತರಲಾಗಿತ್ತು ಎಂದು ಹೇಳಿದ್ದರು. ಅದೇ ವೇಳೆ ಸುತ್ತೋಲೆಯನ್ನು ಹಿಂಪಡೆಯುವಂತೆ ತಮ್ಮ ಇಲಾಖೆಯ ಅಯುಕ್ತರಿಗೆ ಸೂಚನೆ ನೀಡಿದ್ದರು. ಈ ಹಿನ್ನೆಲೆಯಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರು ಅ.19ರಂದು ಹೊರಡಿಸಿದ್ದ ತಮ್ಮ ಸುತ್ತೋಲೆಯನ್ನು ಹಿಂಪಡೆದಿದ್ದಾರೆ.

ಕೆಆರ್‌ಎಸ್ ಬೃಂದಾವನದಲ್ಲಿ ಚಿರತೆ ಪ್ರತ್ಯಕ್ಷ

ಕೆಆರ್‌ಎಸ್‌ಗೆ ಭೇಟಿ ನೀಡುತ್ತಿದ್ದರು. ಇದರಿಂದ ನಿಗಮಕ್ಕೆ ಲಕ್ಷಾಂತರ ರೂ. ಆದಾಯ ಬರುತ್ತಿತ್ತು. ಆದರೆ ಚಿರತೆ ಪ್ರತ್ಯಕ್ಷವಾಗಿ ಪ್ರವಾಸಿಗರಿಗೆ ನಿರ್ಬಂಧ ಹೇರಿದ್ದು, ನಿಗಮದ ಆದಾಯಕ್ಕೆ ಕಲ್ಲು ಬಿದ್ದಿದೆ. **ಬೃಂದಾವನ ಆವರಣ ಚಿರತೆಗೆ ಉತ್ತಮ ತಂಗುದಾಣ:** ಬೃಂದಾವನದಲ್ಲಿ ಚಿರತೆ ಕಾಣಿಸಿಕೊಳ್ಳುವುದು ಇದೇ ಮೊದಲಲ್ಲ. ಕೆಲವು ತಿಂಗಳ ಹಿಂದೆ ಅಣೆಕಟ್ಟೆಯ ನಾರ್ತ್ ಗೇಟ್ ಬಳಿ ಚಿರತೆ ಕಾಣಿಸಿಕೊಂಡು ಅರಣ್ಯ ಸಿಬ್ಬಂದಿ ಇರಿಸಿದ್ದ ಬೋನ್‌ಗೆ ಬಿದ್ದಿತ್ತು. ಹೀಗೆ ಪದೇ ಪದೆ ಈ ಸ್ಥಳಕ್ಕೆ ಚಿರತೆ ಬರುತ್ತಿರುವುದಕ್ಕೆ ಬೃಂದಾವನದ ಅನೇಕ ಕಡೆ ಆಳೆತ್ತರ ಬೆಳೆದು ನಿಂತಿರುವ ಗಿಡ-ಗಂಟೆಗಳೇ ಮುಖ್ಯ ಕಾರಣವಾಗಿದೆ. ಇದನ್ನು ತೆರವುಗೊಳಿಸಬೇಕಿದೆ. ಈ ಭಾಗ ದಟ್ಟಕಾಡಿನ ರೀತಿ ಗೋಚರಿಸುತ್ತಿರುವುದರಿಂದ ಈ ಸ್ಥಳದಲ್ಲಿ ಚಿರತೆ ಆಗಾಗ ಬಂದು ಅಡಗಿಕೊಳ್ಳುತ್ತಿವೆ. ಆದ್ದರಿಂದ ತಕ್ಷಣ ಬೃಂದಾವನ ಸುತ್ತ-ಮುತ್ತ ಅನಗತ್ಯ ಗಿಡ-ಗಂಟೆಗಳನ್ನು ಶುಚಿಗೊಳಿಸಬೇಕಿದೆ. ನಾವು ನಿತ್ಯ ಭಯದಲ್ಲೇ ಕೆಲಸ ಮಾಡಬೇಕಿದೆ ಎಂದು ಹಲವು ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ತಮ್ಮ ಅಳಲನ್ನು ತೋಡಿಕೊಂಡರು.

ಕೆಲಸ ಮಾಡದ ಸಿಸಿ ಕ್ಯಾಮರಾಗಳು: ಕಳೆದ ಕೆಲ ದಿನಗಳ ಹಿಂದೆ 'ಮೈಸೂರು ಮಿತ್ರ'ನಲ್ಲಿ ವಿಶ್ವವಿಖ್ಯಾತ ಪ್ರಸಿದ್ಧ ಕೆಆರ್‌ಎಸ್ ಅಣೆಕಟ್ಟೆಯ ಭದ್ರತೆ, ನಿಷ್ಕ್ರಿಯ ಸಿಸಿ ಕ್ಯಾಮರಾ ಬಗ್ಗೆ ವಿಶೇಷ ವರದಿ ಪ್ರಕಟವಾಗಿತ್ತು. ಇಷ್ಟಾದರೂ ಎಚ್ಚೆತ್ತುಕೊಳ್ಳದ ಅಧಿಕಾರಿಗಳು ಇನ್ನೂ ಕೂಡ ಸುಮಾರು 45 ಸಿಸಿ ಕ್ಯಾಮರಾಗಳನ್ನು ರಿಪೇರಿ ಮಾಡಿಸುವ ಗೋಜಿಗೆ ಹೋಗಿಲ್ಲ. ಇದರ ಪರಿಣಾಮ ಅಣೆಕಟ್ಟೆಯಲ್ಲಿ ಚಿರತೆ ಚಲನ-ವಲನದ ಬಗ್ಗೆ ದಾಖಲೆ ಇಲ್ಲ. ಒಂದು ವೇಳೆ ಸಿಸಿ ಕ್ಯಾಮರಾಗಳು ಕೆಲಸ ಮಾಡಿದ್ದರೆ ಚಿರತೆ ಯಾವ ಕಡೆಗೆ ಹೋಗಿದೆ ಎಂಬುದರ ಮಾಹಿತಿ ಪಡೆದು ಕಾರ್ಯಾಚರಣೆ ನಡೆಸಬಹುದಿತ್ತು. ಆದರೆ ಈಗ ಅದು ಸಾಧ್ಯವಿಲ್ಲ. ಇದರಿಂದ ಚಿರತೆ ಸೆರೆ ಕಾರ್ಯಾಚರಣೆ ಹಲವು ದಿನಗಳೇ ತೆಗೆದುಕೊಳ್ಳಬಹುದು ಎಂದು ಸಾರ್ವಜನಿಕರು ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ನಾಡಪ್ರಭು ಕೆಂಪೇಗೌಡ ರಥಕ್ಕೆ ಮೈಸೂರಲ್ಲಿ ಭವ್ಯ ಸ್ವಾಗತ

ಪ್ರಗತಿಯ ಪ್ರತಿಮೆಗೆ ಜಿಲ್ಲೆಯಾದ್ಯಂತ ಸಂಗ್ರಹಿಸಿದ ಪವಿತ್ರ ಮೃತ್ತಿಕೆ ಸಮರ್ಪಣೆ, ಬೈಕ್ ರ್‍ಯಾಲಿ





ಮೈಸೂರು, ಅ. 22(ಆರ್‌ಕೆ)– ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅನಾವರಣಗೊಳ್ಳಲಿರುವ ನಾಡಪ್ರಭು ಕೆಂಪೇಗೌಡರ ಕಂಚಿನ ಪ್ರತಿಮೆ ರಥವನ್ನು ಇಂದು ಮೈಸೂರಿನ ಕೊಲಂಬಿಯಾ ಏಷಿಯಾ ಆಸ್ಪತ್ರೆ ಸರ್ಕಲ್ ಬಳಿ ಅದ್ಧೂರಿಯಾಗಿ ಬರಮಾಡಿಕೊಳ್ಳಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಆದಿಚುಂಚನಗಿರಿ ಮೈಸೂರು ಶಾಖಾ ಮಠದ ಶ್ರೀ ಸೋಮನಾಥ ಸ್ವಾಮೀಜಿ, ಮೇಯರ್ ಶಿವಕುಮಾರ್, ಸಂಸದ ಪ್ರತಾಪ್ ಸಿಂಹ, ಶಾಸಕ ಎಲ್. ನಾಗೇಂದ್ರ, ಮಾಜಿ ಶಾಸಕ ವಾಸು ನೇತೃತ್ವದಲ್ಲಿ ಬೆಂಗಳೂರಿನಿಂದ ಮಧ್ಯಾಹ್ನ 3 ಗಂಟೆಗೆ ಮೈಸೂರಿಗೆ ಆಗಮಿಸಿದ ರಥಕ್ಕೆ ಜಿಲ್ಲೆಯಾದ್ಯಂತ ಸಂಗ್ರಹಿಸಿದ ಮೃತ್ತಿಕೆ (ಮಣ್ಣು)ಯನ್ನು ಸಮರ್ಪಿಸಲಾಯಿತು.

ನಂತರ 500 ಬೈಕ್‌ಗಳಲ್ಲಿ ರ್‍ಯಾಲಿ ನಡೆಸಿದ ಯುವಕರ ಪಡೆ ಅರಮನೆ ಉತ್ತರ ದ್ವಾರದ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದವರೆಗೆ ರಥವನ್ನು ಮೆರವಣಿಗೆ ಮೂಲಕ ಕರೆತಂದಿತು. ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ಕಂಚಿನ ಪ್ರಗತಿಯ ಪ್ರತಿಮೆ ಅನಾವರಣಗೊಳಿಸುವ ಪ್ರಯುಕ್ತ ರಥಯಾತ್ರೆಯು ರಾಜ್ಯದಾದ್ಯಂತ ಸಂಚರಿಸಿ ನಾಡಿನ ಪವಿತ್ರ ಮಣ್ಣು ಸಂಗ್ರಹಿಸಲಿದ್ದು, ರಥವು ಸಂಜೆ ಚಾಮರಾಜನಗರ ಕಡೆಗೆ ಪ್ರಯಾಣ ಬೆಳೆಸಿತು.

ರಾಜ್ಯ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಕೆ.ವಿ. ಶ್ರೀಧರ್, ಕಾರ್ಯಾಧ್ಯಕ್ಷ ಸಿ.ಜಿ. ಗಂಗಾಧರ, ನಿರ್ದೇಶಕ ಎಂ.ಬಿ. ಮಂಜೇಗೌಡ, ಮೈಸೂರು ಜಿಲ್ಲಾ ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಆರ್. ಜಯರಾಮ್, ಅಧ್ಯಕ್ಷ ಸಿ. ಮರಿಸ್ವಾಮಿ, ಉಪಾಧ್ಯಕ್ಷರಾದ ಆರ್. ರವಿಕುಮಾರ್, ನಿಕಟಪೂರ್ವ ಉಪಾಧ್ಯಕ್ಷ ವಿಕ್ರಾಂತ್ ಪಿ. ದೇವೇಗೌಡ, ಜಿ.ಸಿ. ಮಹೇಶ್, ಎಂ.ಇ. ಚೇತನ್, ಪದಾಧಿಕಾರಿಗಳಾದ ಜಯರಾಮು, ಆರ್. ಲೋಕೇಶ್, ಜಿ. ಮಂಜು, ಎಂ. ಶಿವಕುಮಾರ್, ಯಶಸ್ವಿನಿ ಸೋಮಶೇಖರ್, ಎನ್. ಪ್ರಕಾಶ್, ಗುರುರಾಜ್, ಪ್ರಸನ್ನ ಎನ್. ಲಕ್ಷ್ಮಣ್, ಜಿ. ಕುಮಾರಗೌಡ, ಎ. ರವಿ, ಗಿರೀಶ್‌ಗೌಡ, ಬೋರೇಗೌಡ, ಉಮೇಶ್, ನಾಗಣ್ಣ, ಗೋಪಾಲ್, ಪಿ. ಪ್ರಶಾಂತ್ ಗೌಡ, ಮಿರ್ಲೆ ಶ್ರೀನಿವಾಸಗೌಡ, ಸುಧೀರ್, ಹೆಚ್.ಕೆ. ನಾಗಣ್ಣ ರಾಜು, ಕುಮಾರ, ಸಂತೋಷ್‌ಕುಮಾರ್, ಕಾರ್ಪೊರೇಟರ್‌ಗಳಾದ ಪ್ರೇಮಾ ಶಂಕರೇಗೌಡ, ಅಶ್ವಿನಿ ಅನಂತು, ಪೈ ಶ್ರೀನಿವಾಸ್, ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಮನೆ ಮನೆಗೆ ಗ್ಯಾಸ್ ಪೈಪ್ ಲೈನ್ ಯೋಜನೆ

ಮೊದಲ ಹಂತದ 45 ಕಿ.ಮೀ ಪೈಪ್ ಲೈನ್ ಕಾಮಗಾರಿ ಪೂರ್ಣ: 200ಕ್ಕೂ ಅಧಿಕ ಮನೆಗೆ ಸಂಪರ್ಕ, ಉಳಿದದ್ದು ಸರ್ಕಾರ ಅನುಮೋದನೆ ನಂತರ ಮುಂದುವರಿಕೆ : ಪ್ರತಾಪ್ ಸಿಂಹ

ಮೈಸೂರು, ಅ.22(ಜಿಎ)– ಮೈಸೂರಿನ ಮಹಾತ್ವಾಕಾಂಕ್ಷಿ ಯೋಜನೆಯಾದ ಮನೆ ಮನೆಗೆ ಗ್ಯಾಸ್ ಪೈಪ್ ಲೈನ್ ಅಳವಡಿಕೆ ಕಾರ್ಯ ಮೊದಲ ಹಂತ ಮುಕ್ತಾಯಗೊಂಡಿದ್ದು 200ಕ್ಕೂ ಅಧಿಕ ಮನೆಗಳಿಗೆ ಗ್ಯಾಸ್ ಪೈಪ್ ಲೈನ್ ಸಂಪರ್ಕ ನೀಡಲಾಗಿದೆ.

ಕೇಂದ್ರ ಸರ್ಕಾರದ ಪೈಪ್ಡ್ ಗ್ಯಾಸ್ ಯೋಜನೆಯ ಕಾಮಗಾರಿಯು ಮೈಸೂರಿನಲ್ಲಿ ಕಳೆದ ಡಿಸೆಂಬರ್‌ನಲ್ಲಿ ಆರಂಭವಾಗಿದ್ದು, ಈಗಾಗಲೇ 45ಕಿ.ಮೀ ಕಾಮಗಾರಿ ಪೂರ್ಣಗೊಂಡಿದೆ. ಸರ್ಕಾರದ ಹಂತದಲ್ಲಿ ಮುಂದಿನ ಕಾಮಗಾರಿ ಕುರಿತಂತೆ ಚರ್ಚೆ ನಡೆಯಬೇಕಿದ್ದು, ಅದು ಪೂರ್ಣಗೊಂಡ ನಂತರ ತ್ವರಿತವಾಗಿ ಕಾಮಗಾರಿ ಮುಂದುವರೆಯಲಿದೆ.

ಮೈಸೂರಿನಲ್ಲಿ ಪೈಪ್ ಲೈನ್ ಮೂಲಕ ಗ್ಯಾಸ್ ಪೂರೈಸುವ ಯೋಜನೆಗೆ ಪಾಲಿಕೆ ಸದಸ್ಯರು ಮತ್ತು ಬಿಜೆಪಿಯ ಕೆಲ ಪ್ರತಿನಿಧಿಗಳ ಪರ-ವಿರೋಧ ಚರ್ಚೆಗಳು ನಡೆದಿತ್ತು. ಈ ಯೋಜನೆಯಿಂದ ನಗರದ ರಸ್ತೆಗಳು ಹಾಳಾಗುತ್ತವೆ. ಇದು ಅಪಾಯಕಾರಿಯಾಗಿದೆ ಎಂಬ ವಿರೋಧಗಳ ನಡುವೆಯೇ ಪಾಲಿಕೆಯ ಕೌನ್ಸಿಲ್ ಸಭೆಯಲ್ಲಿ ಈ ಯೋಜನೆಗೆ ಅನುಮೋದನೆ ದೊರೆಯಿತು.

ನಂತರ ಕಾಮಗಾರಿ ಮುಂದುವರೆಸಿ, ಪಾಲಿಕೆ ಅನುಮೋದನೆ ನೀಡಿದ 45 ಕಿ.ಮೀ ನಷ್ಟು ಉದ್ದಕ್ಕೆ ಭೂಮಿಯ ಕೆಳ ಭಾಗದಲ್ಲಿ ಗ್ಯಾಸ್ ಪೈಪ್‌ಗಳನ್ನು ಅಳವಡಿಸಲಾಗಿದ್ದು, ನಗರದ ವಿಜಯನಗರ, ಹೆಬ್ಬಾಳಿನ ಲಕ್ಷ್ಮೀಕಾಂತನಗರ, ಮಯೂರವೃತ್ತ, ಕಾವೇರಿ ವೃತ್ತದಲ್ಲಿನ ಸುಮಾರು 200ಕ್ಕೂ ಹೆಚ್ಚು ಮನೆಗಳಿಗೆ ಈಗಾಗಲೇ ಪೈಪ್‌ಲೈನ್ ಸಂಪರ್ಕ ಮತ್ತು ಮೀಟರ್‌ಗಳನ್ನು ಅಳವಡಿಸಿದ್ದಾರೆ.



> ಪಾಲಿಕೆ ಅನುಮೋದನೆ ನೀಡಿದ 45 ಕಿ.ಮೀನಲ್ಲಿ ಈಗಾಗಲೇ ಗ್ಯಾಸ್ ಪೈಪ್ ಲೈನ್ ಅಳವಡಿಸಲಾಗಿದ್ದು, ಹೆಬ್ಬಾಳು ಮತ್ತು ವಿಜಯನಗರದ ಸುತ್ತಮುತ್ತಲು 200 ಮನೆಗಳಿಗೆ ಸಂಪರ್ಕ ನೀಡಲಾಗಿದೆ. ಮುಂದಿನ ಹಂತದ ಕಾಮಗಾರಿ ವಿಚಾರವಾಗಿ ಮುಖ್ಯಮಂತ್ರಿಗಳು ಹಾಗೂ ಮುಖ್ಯಕಾರ್ಯದರ್ಶಿಗಳು ಚರ್ಚಿಸಿ ಅನುಮೋದನೆ ನೀಡಿ ಅದಕ್ಕೆ ಬೇಕಿರುವ ಹಣವನ್ನು ಬಿಡುಗಡೆ ಮಾಡಿದರೆ ಶೀಘ್ರ ಆರಂಭವಾಗಿ ತ್ವರಿತ ರೀತಿಯಲ್ಲಿ ಸಾಗಲಿದೆ.
>
> -ಪ್ರತಾಪ್ ಸಿಂಹ, ಸಂಸದ, ಮೈಸೂರು–ಕೊಡಗು

ಬೆಂಗಳೂರಿನ ಬಿಡದಿ ಮಾರ್ಗವಾಗಿ 104 ಕಿ.ಮೀ ಉದ್ದದ ನೈಸರ್ಗಿಕ ಅನಿಲ ಪೈಪ್‌ಲೈನ್ ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಸ್ಥಾವರ ತಲುಪಿ ಮುಂದೆ ಹೆಬ್ಬಾಳು ನೈಸರ್ಗಿಕ ಅನಿಲ ಸ್ಥಾವರದಿಂದ ರಿಂಗ್‌ರಸ್ತೆ ಮಾರ್ಗವಾಗಿ ಮಣಿಪಾಲ್ ಆಸ್ಪತ್ರೆವರೆಗೂ 7 ಕಿ.ಮೀ ಹಾಗೂ ಸ್ಥಾವರದಿಂದ ರಿಂಗ್ ರಸ್ತೆ ಮಾರ್ಗವಾಗಿ ಬಂಡಿಪಾಳ್ಯದವರೆಗೂ 19 ಕಿ.ಮೀ ವರೆಗೂ ಈ ನೈಸರ್ಗಿಕ ಅನಿಲದ ಪೈಪ್‌ಲೈನ್ ವಿಸ್ತರಿಸಲಾಗುತ್ತದೆ. ಇದರಿಂದ ನಗರದ ವಿವಿಧ ಭಾಗಗಳಿಗೂ ಈ ಯೋಜನೆ ತಲುಪುವ ಹಂತದಲ್ಲಿದೆ.

ಕುಕ್ಕರಹಳ್ಳಿ ಕೆರೆ ನಿರ್ವಹಣೆಯಲ್ಲಿ ಮೈಸೂರು ವಿವಿ ವೈಫಲ್ಯ ಖಂಡಿಸಿ 'ಸರಸ್ವತಿಪುರಂ ಉಳಿಸಿ' ಹೋರಾಟ

ಮಾಜಿ ಮೇಯರ್ ಆರ್.ಲಿಂಗಪ್ಪ ಎಚ್ಚರಿಕೆ



ಮೈಸೂರು, ಅ.22–ಮೈಸೂರಿನ ಕುಕ್ಕರಹಳ್ಳಿ ಕೆರೆಯು ಮೈಸೂರು ವಿಶ್ವವಿದ್ಯಾಲಯದ ಅಧೀನದಲ್ಲಿದ್ದು, ಸರಿಯಾದ ನಿರ್ವಹಣೆ ಇಲ್ಲದೆ, ಕೆರೆ ಅಪಾಯದ ಅಂಚಿಗೆ ತಲುಪಿದೆ. ಮೈಸೂರು ವಿವಿಯ ಇಂಜಿನಿಯರ್‌ಗಳು ಕೆರೆಯ ಸುರಕ್ಷತೆಗೆ ತ್ವರಿತವಾಗಿ ಕ್ರಮ ಕೈಗೊಳ್ಳದಿದ್ದರೆ 'ಸರಸ್ವತಿಪುರಂ ಉಳಿಸಿ' ಹೋರಾಟ ಕೈಗೆತ್ತಿಕೊಳ್ಳಲಾಗುವುದು ಎಂದು ಮಾಜಿ ಮೇಯರ್ ಆರ್.ಲಿಂಗಪ್ಪ ಎಚ್ಚರಿಕೆ ನೀಡಿದ್ದಾರೆ.



ಕುಕ್ಕರಹಳ್ಳಿ ಕೆರೆ ಸಂಪೂರ್ಣ ತುಂಬಿದ್ದು, ಅಪಾಯದ ಮಟ್ಟ ಮೀರಿರುವುದಾಗಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ ಎಂಬುದನ್ನು ಉಲ್ಲೇಖಿಸಿರುವ ಅವರು, ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಮಳೆಯಾಗುತ್ತಿದ್ದರೂ, ವಿವಿ ಇಂಜಿನಿಯರ್‌ಗಳು ಈ ಕೆರೆಯ ಕೋಡಿ ಮತ್ತು ತೂಬುಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳದ ಕಾರಣ ಕೆರೆಯ ನೀರು ವಿವಿಯ ಬಯಲು ರಂಗಮಂದಿರ ಹಾಗೂ ಯುಜಿಸಿ ಕಟ್ಟಡಗಳ ಹತ್ತಿರ ಹರಿದು ಬಂದಿದೆ.

ವಿವಿ ರಿಜಿಸ್ಟ್ರಾರ್ ಅವರು ಕೆರೆ ನೀರನ್ನು ಮೋಟಾರು ಮೂಲಕ ಹೊರ ಹಾಕುವುದಾಗಿ ಹೇಳಿಕೆ ನೀಡಿದ್ದು, ಇವರ ಹೇಳಿಕೆಯು ಸರಸ್ವತಿಪುರಂ ನಿವಾಸಿಗಳ ನಿದ್ದೆಗೆಡಿಸಿದೆ. ಕೆರೆಯ ನೀರನ್ನು ಫುಲ್ ಟ್ಯಾಂಕ್ ಲೆವೆಲ್‌ಗಿಂತ ಕಡಿಮೆ ಇರುವಂತೆ ಇಂಜಿನಿಯರ್‌ಗಳು ನೀರಿನ ಮಟ್ಟವನ್ನು ನಿಯಂತ್ರಿಸಬೇಕಾಗಿತ್ತು. ಆದರೆ ಇದೀಗ ಫುಲ್ ಟ್ಯಾಂಕ್ ಲೆವೆಲ್‌ಗಿಂತ ಹೆಚ್ಚಾಗಿ ಕೆರೆಯಲ್ಲಿ ನೀರು ಸಂಗ್ರಹವಾಗಿದ್ದು, ಫ್ರೀ ಬೋರ್ಡ್ ಮುಚ್ಚಿದೆ. ಅಲ್ಲದೇ ಕೆರೆ ಏರಿಯಾ ದಕ್ಷಿಣ ಭಾಗದಲ್ಲಿ ಅಲ್ಲಲ್ಲಿ ನೀರು ಜಿನುಗುತ್ತಿರುವುದು ಕಂಡು ಬಂದಿದೆ ಎಂದಿರುವ ಅವರು, ದುರದೃಷ್ಟವಶಾತ್ ಹವಾಮಾನ ವೈಪರೀತ್ಯದಿಂದ ಕೆರೆ ಏರಿ ಒಡೆದು ಹೋದರೆ ಸರಸ್ವತಿಪುರಂ ನಿವಾಸಿಗಳ ಬದುಕು ದುಸ್ತರವಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರು ವಿವಿ ಇಂಜಿನಿಯರ್‌ಗಳು ಕೆರೆ ಬಗ್ಗೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳದೇ ಹೋದರೆ ಒಂದು ವೇಳೆ ಕೆರೆ ಏರಿ ಒಡೆದು ಸರಸ್ವತಿಪುರಂಗೆ ನೀರು ನುಗ್ಗಿ ಉಂಟಾಗಬಹುದಾದ ಆಸ್ತಿ-ಪಾಸ್ತಿ ನಷ್ಟ ಹಾಗೂ ಜೀವ ಹಾನಿಗೆ ಇವರೇ ಜವಾಬ್ದಾರರಾಗಬೇಕಾಗುತ್ತದೆ. ಈ ಬಗ್ಗೆ ಮುಂದಿನ ದಿನಗಳಲ್ಲಿ ಜನ ಜಾಗೃತಿ ಮೂಡಿಸಿ 'ಸರಸ್ವತಿಪುರಂ ಉಳಿಸಿ' ಹೋರಾಟ ಕೈಗೆತ್ತಿಕೊಳ್ಳಲಾಗುವುದು ಎಂದು ಆರ್.ಲಿಂಗಪ್ಪ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಮನುಷ್ಯನ ಆರೋಗ್ಯವೃದ್ಧಿಗೆ ಆಯುರ್ವೇದ ಸಹಕಾರಿ

ಎಂಎಲ್‌ಸಿ ಸಿ.ಎನ್. ಮಂಜೇಗೌಡ ಅಭಿಮತ



ಮೈಸೂರು, ಅ.22– ಮನುಷ್ಯನ ಆರೋಗ್ಯ ವೃದ್ಧಿಗೆ ಆಯುರ್ವೇದ ಔಷಧಿಗಳು ಸಹಕಾರಿಯಾಗಿದ್ದು, ಜನರು ಹೆಚ್ಚಾಗಿ ಆಯುರ್ವೇದ ಔಷಧಿಗಳನ್ನು ಬಳಸುವುದರೊಂದಿಗೆ ಪ್ರತಿ ಮನೆಯಲ್ಲಿಯೂ ಆಯುರ್ವೇದ ಗಿಡಗಳನ್ನು ಬೆಳೆಸಬೇಕೆಂದು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಕರೆ ನೀಡಿದರು.

ಮೈಸೂರಿನ ಜಯನಗರದಲ್ಲಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಅರಿವು ಸಂಸ್ಥೆ ವತಿಯಿಂದ ನಡೆದ ಕಾರ್ಯಕ್ರಮವನ್ನು ಆಯುರ್ವೇದ ಸಸಿಗಳನ್ನು ನೆಡುವ ಮುಖಾಂತರ ಉದ್ಘಾಟಿಸಿ ಮಾತನಾಡಿದ ಅವರು, ಹಿಂದಿನ ಕಾಲದಲ್ಲಿ ಕ್ಯಾನ್ಸರ್, ಏಡ್ಸ್, ಗ್ಯಾಂಗ್ರಿನ್‌ನಂತಹ ಕಾಯಿಲೆಗಳಿಗೆ ಔಷಧಿಗಳನ್ನು ಕಂಡುಹಿಡಿಯದಿದ್ದಾಗ ಆಯುರ್ವೇದದಲ್ಲಿ ಔಷಧಿ ಕಂಡುಹಿಡಿದಿದ್ದರು. ಮಕ್ಕಳಿಗೆ ಕೆಮ್ಮು ನೆಗಡಿ, ಜ್ವರ ಬಂದರೆ. ಗಿಡಮೂಲಿಕೆ ಔಷಧಿ ಕೊಡುತ್ತಿದ್ದರು. ಈಗಿನ ಇಂಗ್ಲೀಷ್ ಔಷಧಿಗಳಿಂದ ಅಡ್ಡಪರಿಣಾಮಗಳು ಹೆಚ್ಚಾಗಿ ಕಿಡ್ನಿ ಲಿವರ್‌ಗಳು ಹಾನಿಯಾಗುತ್ತಿವೆ... ಆದರೆ. ಆಯುರ್ವೇದ ಔಷಧಿಯಲ್ಲಿ ಯಾವುದೇ ಅಡ್ಡಪರಿಣಾಮಗಳು ಆಗುವುದಿಲ್ಲ.


ಇಂಗ್ಲಿಷ್ ಔಷಧಿಗೆ ಹೆಚ್ಚು ಹಣ ಖರ್ಚಾಗುತ್ತದೆ. ಆಯುರ್ವೇದ ಔಷಧಿಗೆ ಕಡಿಮೆ ಹಣ ಖರ್ಚಾಗುವುದರಿಂದ ಜನರಿಗೆ ಅನುಕೂಲವಾಗುತ್ತದೆ. ಆಯುರ್ವೇದದಿಂದ ಸಕ್ಕರೆ ಖಾಯಿಲೆಯನ್ನು ಸಹ ಗುಣಪಡಿಸಬಹುದು ಎಂದ ಅವರು, ಸರ್ಕಾರ ಆಯುಷ್ ಇಲಾಖೆಯನ್ನು ಸ್ಥಾಪಿಸಿ, ಆಯುರ್ವೇದಕ್ಕೆ ಹೆಚ್ಚು ಪ್ರೋತ್ಸಾಹ ನೀಡುತ್ತಿರುವುದರಿಂದ ಜಿಲ್ಲಾ ತಾಲ್ಲೂಕು ಕೇಂದ್ರಗಳಲ್ಲಿಯೂ ಆಯುರ್ವೇದ ಆಸ್ಪತ್ರೆಗಳು, ಔಷಧಿಗಳು ಸಿಗುತ್ತಿರುವುದರಿಂದ ಜನರು ಹೆಚ್ಚಾಗಿ. ಆಯುರ್ವೇದಕ್ಕೆ ಪ್ರಾಮುಖ್ಯತೆ ನೀಡುತ್ತಿರುವುದರಿಂದ ಮಾರುಕಟ್ಟೆಗೆ ಆಯುರ್ವೇದ ನಕಲಿ ಔಷಧಿಗಳು ಬರುತ್ತಿದ್ದು, ಸರ್ಕಾರ ನಕಲಿ ಔಷಧಿಗಳನ್ನು ನಿಯಂತ್ರಿಸಬೇಕು ಎಂದರು.

ಈ ಸಂದರ್ಭದಲ್ಲಿ ಅರಿವು ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ್ ಕಶ್ಯಪ್, ಆಯುರ್ವೇದಿಕ್ ಕಾಲೇಜಿನ ಪ್ರಾಂಶುಪಾಲ ಗಜಾನನ ಹೆಗ್ಗಡೆ, ಜೀವಧರ ಗಿರೀಶ್, ನವೀನ್ ಕುಮಾರ್, ಮುಖ್ಯ ಶಿಕ್ಷಕ ಶಿವಕುಮಾರ್, ಸುರೇಂದ್ರ ರಾಜೇಶ್‌ಕಾಂತ್ ಸುಚೇಂದ್ರ ಇದ್ದರು.



ನಾಡಪ್ರಭು ಶ್ರೀ ಕೆಂಪೇಗೌಡರ 108 ಅಡಿ ಎತ್ತರದ ಭವ್ಯ ಕಂಚಿನ ಪ್ರಗತಿಯ ಪ್ರತಿಮೆ ಅನಾವರಣದ ಅಂಗವಾಗಿ ಮೈಸೂರಿನಲ್ಲಿ ಮೃತ್ತಿಕೆ ಸಂಗ್ರಹಣೆ ಅಭಿಯಾನದಲ್ಲಿ ಈ ವೇಳೆ ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ ಹೆಚ್.ಹರೀಶ್‌ಕುಮಾರ್, ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಂ.ಎನ್.ಸ್ವರೂಪ್, ಮೆಂಕಿಮಾಮ, ಒಕ್ಕಲಿಗರ ಸಂಘದ ನಿರ್ದೇಶಕ ದಾಸನಕೊಪ್ಪಲು ಜಯರಾಂ ಪಡುವಾರಹಳ್ಳಿಯ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕರಾದ ಎಸ್.ಕೃಷ್ಣಕುಮಾರ್, ಸುಜೀವಿಕುಮಾರ್, ದಿನೇಶ್, ಬಾಲಾಜಿ ಟೂಟ್ ಹೌಸ್ ಮಾಲೀಕ ಶ್ರೀನಿವಾಸ್, ತೇಜಸ್ ಪಾಲ್ಗೊಂಡಿದ್ದರು.

ಅರಣ್ಯ ಇಲಾಖೆ ಸಿಬ್ಬಂದಿಯ ದೌರ್ಜನ್ಯಕ್ಕೆ ಆದಿವಾಸಿ ಬಲಿ: ಪ್ರಕರಣ ಮುಚ್ಚಿಹಾಕುವ 'ಸಂಚು'



● ಎಂಎಲ್‌ಸಿ ವಿಶ್ವನಾಥ್ ಆಕ್ರೋಶ ● ಗಿರಿಜನ ಜೀವಕ್ಕೆ ಬೆಲೆ ಇಲ್ಲವೆ?

ಮೈಸೂರು, ಅ.22(ಎಂಟಿವೈ)– ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಕಳೆದ ವಾರ ಅರಣ್ಯ ಇಲಾಖೆ ಸಿಬ್ಬಂದಿಯ ದೌರ್ಜನ್ಯದಿಂದ ಆದಿವಾಸಿ ಸಾವಿಗೀಡಾದ ಪ್ರಕರಣವನ್ನು ಮುಚ್ಚಿ ಹಾಕಲು ಸಂಚು ನಡೆಸಲಾಗುತ್ತಿದ್ದು, ಕೂಡಲೇ ಹತ್ಯೆಗೆ ಸಂಬಂಧಿಸಿದಂತೆ ಆರೋಪಿಗಳಾಗಿರುವ 17 ಮಂದಿಯನ್ನು ಬಂಧಿಸಬೇಕು ಎಂದು ವಿಧಾನಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ಒತ್ತಾಯಿಸಿದ್ದಾರೆ.

ಮೈಸೂರಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರಣ್ಯ ಇಲಾಖೆ ಸಿಬ್ಬಂದಿಯ ವಶದಲ್ಲಿದ್ದಾಗ ಆದಿವಾಸಿ ಕರಿಯಪ್ಪ (ಕರಿಯಯ್ಯ) ಮೃತಪಟ್ಟಿದ್ದಾರೆ. ಘಟನೆ ನಡೆದ ದಿನ ನಾನು ಬೆಂಗಳೂರಲ್ಲಿದ್ದೆ, ವಿಷಯ ತಿಳಿದು ರಾತ್ರಿಯೇ ಬೆಂಗಳೂರಿಂದ ಹೊರಟು, ಮರುದಿನ ಮುಂಜಾನೆಯೇ ಕರಿಯಪ್ಪನ ಮನೆಗೆ ಹೋಗಿ ಸಾಂತ್ವನ ಹೇಳಿದ್ದೆ. ಅಂದು, ಹಾಡಿಯ ಯುವಕರು ರೊಚ್ಚಿಗೆದ್ದಿದ್ದರು. ಅವರನ್ನು ಸಮಾಧಾನ ಮಾಡಿ, ಅಂತ್ಯಕ್ರಿಯೆ ಮಾಡುವುದಕ್ಕೆ ಮನವೊಲಿಸಿದ್ದೆ ಎಂದರು.

ಆದಿವಾಸಿ ವ್ಯಕ್ತಿ ಸಾವಿನ ಪ್ರಕರಣ ವಿಷಯ ತಿಳಿದು ಹೆಚ್.ಡಿ.ಕೋಟೆಯ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ಸುರೇಶ್ ಸ್ಥಳಕ್ಕೆ ಬಂದು ಮರಣೋತ್ತರ ಪರೀಕ್ಷೆ ಮಾಡಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆದೇಶಿಸಿದ್ದರು. ಅದರಂತೆ ಅರಣ್ಯ ಇಲಾಖೆಯ 17 ಸಿಬ್ಬಂದಿ ವಿರುದ್ಧ ಪ್ರಕರಣ ದಾಖಲಾಗಿತ್ತು. ಸ್ವತಃ ನ್ಯಾಯಾಧೀಶರೇ ಸ್ಥಳಕ್ಕೆ ಬಂದಿದ್ದು, ಆದಿವಾಸಿಗಳ ಮೇಲೆ ನ್ಯಾಯಾಧೀಶರಿಗೆ ಇದ್ದ ಕಾಳಜಿ ಕಂಡು ಹೆಮ್ಮೆ ಎನಿಸಿತು.

> ಬುಡಕಟ್ಟು ಸಮುದಾಯಕ್ಕೆ ಸರ್ಕಾರ ಕೇವಲ ಮೀಸಲಾತಿ ಕೊಟ್ಟರೆ ಸಾಲದು. ಅವರಿಗೆ ಬದುಕು ಕಟ್ಟಿಕೊಡುವುದಕ್ಕೆ ಕ್ರಮ ಕೈಗೊಳ್ಳಬೇಕು. ಬದುಕೇ ದುಸ್ತರವಾಗಿರುವಾಗ ಮೀಸಲಾತಿ ಕೊಟ್ಟರೆ ಏನು ಉಪಯೋಗ?. ಜೀವವೇ ಇಲ್ಲದ ಮೇಲೆ ಮೀಸಲಾತಿ ತೆಗೆದುಕೊಂಡು ಏನ್ ಮಾಡೋದು. ಆದಿವಾಸಿಗಳು ಸದ್ದಿಲ್ಲದೇ ಸಾಯುತ್ತಿದ್ದಾರೆ. ಮಾನವ–ಪ್ರಾಣಿಗಳ ಸಂಘರ್ಷದಿಂದ ಹಲವು ಮಂದಿ ಸತ್ತಿದ್ದಾರೆ. ಅದರಲ್ಲಿ ಕೆಲವು ಅರಣ್ಯ ಇಲಾಖೆಯ ಗಾರ್ಡ್ ಇದ್ದಾರೆ. ಆದಿವಾಸಿಗಳ ಸಾವಿಗೆ ಲೆಕ್ಕನೂ ಇಲ್ಲ ಅವು ಯಾವುದೂ ಬೆಳಕಿಗೆ ಬರುವುದೂ ಇಲ್ಲ.
>
> - ಎ.ಹೆಚ್.ವಿಶ್ವನಾಥ್, ವಿಧಾನಪರಿಷತ್ ಸದಸ್ಯ

ಆದರೆ, ಇಂದು ಪ್ರಕರಣವನ್ನು ಮುಚ್ಚಿ ಹಾಕುವ ಸಂಚು ನಡೆಯುತ್ತಿದೆ. ರಾತ್ರೋರಾತ್ರಿ ತನಿಖಾಧಿಕಾರಿಯನ್ನೇ ಬದಲಿಸಲಾಗಿದೆ. ಆದಿವಾಸಿ ಕರಿಯಪ್ಪ ಹೃದಯಾಘಾತದಿಂದ ಸಾವನ್ನಪ್ಪಿದ್ದಾನೆ ಎಂದು ಸುಳ್ಳು ವರದಿ ತಯಾರಿಸಲಾಗುತ್ತಿದೆ ಎಂದು ಕಿಡಿಕಾರಿದರು.

ಸರ್ಕಾರ ಹಾಗೂ ಗೃಹ ಇಲಾಖೆ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಕೂಡಲೇ ತಪ್ಪಿತಸ್ಥ 17 ಮಂದಿಯನ್ನೂ ಬಂಧಿಸಬೇಕು. ಇನ್ನೂ ಆರೋಪಿಗಳು ಬಂಧನವಾಗಿಲ್ಲದಿರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ. ನ್ಯಾಯಾಧೀಶರಿಗೆ ಬೆಲೆ ಇಲ್ವೇ?. ಆ ವ್ಯಕ್ತಿಯನ್ನು ಕೊಂದದ್ದು ಪ್ರಾಣಿಗಳಲ್ಲ. ಅರಣ್ಯ ಇಲಾಖೆಯವರೇ ಆಗಿದ್ದಾರೆ. ಇನ್ನಾದರೂ ಈ ಪ್ರಕರಣದಲ್ಲಿ ಆರೋಪಿಗಳನ್ನು ರಕ್ಷಿಸಲು ಪ್ರಯತ್ನಿಸಬಾರದು. ಗೃಹ ಇಲಾಖೆ ಆರೋಪಿಗಳ ಬಂಧನಕ್ಕೆ ಸೂಚನೆ ನೀಡಬೇಕು. ಸಮರ್ಥ ಹಾಗೂ ದಕ್ಷ ತನಿಖಾಧಿಕಾರಿಯನ್ನು ನಿಯೋಜಿಸಬೇಕು ಎಂದು ಆಗ್ರಹಿಸಿದರು.

ಕರಿಯಪ್ಪ ಅವರನ್ನು ಜಿಂಕೆ ಮಾಂಸ ತೆಗೆದುಕೊಂಡು ಹೋಗುತ್ತಿದ್ದ ಎಂಬ ಕಾರಣದಿಂದ ಅರಣ್ಯ ಇಲಾಖೆ ವಶಕ್ಕೆ ಪಡೆದಿತ್ತು ಎಂದು ತಿಳಿದು ಬಂದಿದೆ. ಒಂದು ವೇಳೆ ಜಿಂಕೆ ಮಾಂಸ ತೆಗೆದುಕೊಂಡು ಹೋಗುತ್ತಿದ್ದದ್ದು ನಿಜವೇ ಆಗಿದ್ದರೆ, ಆತನನ್ನು ಹೊಡೆದು, ಬಡಿದು ಸಾಯಿಸುವುದೇ? ಆತನಿಗೆ ಬುದ್ಧಿ ಹೇಳಬಹುದಿತ್ತು. ಅದು ತಪ್ಪೆಂದು ತಿಳುವಳಿಕೆ ನೀಡಬಹುದಿತ್ತು. ಆದಿವಾಸಿಗಳೇನು ಸುಶಿಕ್ಷಿತರೇ? ಅವರಿಗೆ ಮನವರಿಕೆ ಮಾಡಿಕೊಟ್ಟು, ಮುಂದೆ ಇಂತಹ ಕೃತ್ಯಗಳನ್ನು ಮಾಡದಂತೆ ಕಿವಿಮಾತು ಹೇಳಬೇಕಾಗಿತ್ತು ಎಂದು ಅಭಿಪ್ರಾಯಪಟ್ಟರು.

ಮಾಜಿ ಸಿಎಂ ಎಸ್.ಎಂ.ಕೃಷ್ಣ ಸರ್ಕಾರದಲ್ಲಿ ಜಿಲ್ಲಾ ಮಂತ್ರಿಯಾಗಿದ್ದ ನಾನು ಅರಣ್ಯ ಪ್ರದೇಶದಲ್ಲಿ ಮೂರು ಕ್ಯಾಬಿನೆಟ್ ಮೀಟಿಂಗ್ ಮಾಡಿಸಿದ್ದೆ. ಹುಣಸೂರು, ಕೋಟೆ, ಬಿಳಿಗಿರಿರಂಗನಬೆಟ್ಟದ ಕಾಡಲ್ಲಿ ಕ್ಯಾಬಿನೆಟ್ ಮೀಟಿಂಗ್ ನಡೆಸಲಾಗಿತ್ತು. ಅಂದು ಎಸ್.ಎಂ.ಕೃಷ್ಣ ಅವರು ಆದಿವಾಸಿಗಳ ನೋವನ್ನು ಅರಿಯಲೆಂದು ಕಾಡಲ್ಲಿ ಕ್ಯಾಬಿನೆಟ್ ಮೀಟಿಂಗ್ ನಡೆಸಲು ಒಪ್ಪಿಗೆ ಸೂಚಿಸಿದ್ದರು. ಆ ನಂತರವಷ್ಟೇ ಆದಿವಾಸಿ ಜನರು ವಾಸಿಸುವ ಹಾಡಿಗಳಿಗೆ ಮೊಬೈಲ್ ಆರೋಗ್ಯ ಕೇಂದ್ರ, ಮೊಬೈಲ್ ಪಡಿತರ ಅಂಗಡಿ ಹಾಗೂ ಇನ್ನಿತರ ಸೌಲಭ್ಯ ನೀಡಲು ಕ್ರಮ ಕೈಗೊಳ್ಳಲಾಯಿತು. ಆ ಬಳಿಕ ಯಾವ ಸರ್ಕಾರಗಳೂ ಆದಿವಾಸಿಗಳ ಹಿತಕಾಯುವ ಕಾರ್ಯಕ್ರಮ ರೂಪಿಸಲಿಲ್ಲ ಎಂದು ಕಿಡಿಕಾರಿದರು.

ಮೈಸೂರು ಮಿತ್ರ

ಬೈಲಕುಪ್ಪೆಗೆ ಅರುಣಾಚಲ ಪ್ರದೇಶ ಸಿಎಂ ಪೇಮಾ ಖಂಡೋ ಭೇಟಿ

ಬೈಲಕುಪ್ಪೆ, ಅ.22– 14ನೇ ದಲೈಲಾಮಾರವರ ಪ್ರಯತ್ನ ಮತ್ತು ಮಾರ್ಗದರ್ಶನದೊಂದಿಗೆ ಲಾಮಾ ಕ್ಯಾಂಪಿನ ಸೆರಾಜ ಮಠ ಮತ್ತು ಅದರ ಸಂಸ್ಥೆಗಳು ಶ್ರೀಮಂತ ಪ್ರಾಚೀನ, ನಳಂದ ಜ್ಞಾನ ಮತ್ತು ಸಂಪ್ರದಾಯದ ಯಶಸ್ವಿ ಸಂರಕ್ಷಣೆಯಲ್ಲಿ ಭಾಗಿಯಾಗಿವೆ ಎಂದು ಅರುಣಾಚಲ ಪ್ರದೇಶದ ಮುಖ್ಯಮಂತ್ರಿ ಪೇಮಾ ಖಂಡೋ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆಯಲ್ಲಿ ಇರುವ ಟಿಬೆಟಿಯನ್ ಲಾಮಾ ಕ್ಯಾಂಪಿನಲ್ಲಿ ಸೆರಾ ಮಠದ ಮಠಾಧೀಶರು ಹಮ್ಮಿಕೊಂಡಿದ್ದ ಮಠದ ಮಾಧ್ಯಮಿಕ ಶಾಲೆಯ 'ರಜತ ಮಹೋತ್ಸವ' ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಈ ವಿಶ್ವವಿದ್ಯಾಲಯವು ಬೌದ್ಧ ಅಧ್ಯಯನದ ಜೊತೆಗೆ, ಪ್ರೌಢ ಶಿಕ್ಷಣವನ್ನು ಪಡೆದ 630 ಟಿಬೆಟಿಯನ್ ಮತ್ತು ಹಿಮಾಲಯನ್ ವಿದ್ಯಾರ್ಥಿಗಳಿಗೆ, ಪದವಿಯನ್ನು ನೀಡಿದೆ.

ಮೈಸೂರು ವಿಶ್ವವಿದ್ಯಾನಿಲಯದ ಅಡಿಯಲ್ಲಿ ಪ್ರಾಚೀನ ಟಿಬೆಟಿಯನ್ ಭಾಷೆ, ಪ್ರಾಚೀನ ತತ್ವಶಾಸ್ತ್ರ, ಪ್ರಾಚೀನ ಮನೋವಿಜ್ಞಾನ ಎಂಬ ಮೂರು ವಿಭಾಗಗಳನ್ನು ಇಟ್ಟುಕೊಂಡು, ಸಾವಿರಾರು ವಿದ್ಯಾರ್ಥಿಗಳು ಮತ್ತು ಅನ್ವೇಷಕರಿಗೆ, ಭಾರತದ ಮತ್ತು ಹೊರಗಿನಿಂದ ಬಂದವರಿಗೆ ತರಬೇತಿ ನೀಡುತ್ತಿದ್ದು, ಇತರೆ ಪ್ರಮುಖ ತತ್ವಶಾಸ್ತ್ರಗಳ ವಲಯಗಳಲ್ಲಿ ಪ್ರಾಮುಖ್ಯತೆ ಮತ್ತು ಮನ್ನಣೆಯನ್ನು ಈ ವಿಶ್ವವಿದ್ಯಾಲಯ ಪಡೆದುಕೊಂಡಿದೆ.



ಬೈಲಕುಪ್ಪೆಯಲ್ಲಿರುವ ಪ್ರವಾಸಿಗರ ನೆಚ್ಚಿನ ತಾಣ ಗೋಲ್ಡನ್ ಟೆಂಪಲ್ ಹಾಗೂ ಟಿಬೆಟಿಯನ್ ಬೌದ್ಧ ಮಂದಿರಗಳಿಗೆ ಅಲ್ಪಸಂಖ್ಯಾತ ಸಂಸದೆ ರಿಗ್ಜಿಂಗ್ ಲಾಮು ಅವರೊಂದಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.

ದಲೈಲಾಮಾ ಆಗಮಿಸುವಾಗ ತೋರುವ ಪ್ರೀತಿಯನ್ನು ಅರುಣಾಚಲ ಪ್ರದೇಶದ ಮುಖ್ಯಮಂತ್ರಿಗೆ ತೋರಿದ ಪುಟ್ಟ ಬೌದ್ಧ ಭಿಕ್ಷುಗಳು, ನೂರಾರು ಪುಟ್ಟ ವಿದ್ಯಾರ್ಥಿಗಳು ಟಿಬೆಟಿಯನ್ ಮಾದರಿಯ ಬಿಳಿ ಬಣ್ಣದ ಬಟ್ಟೆಯನ್ನು ಹಿಡಿದುಕೊಂಡು ನಿಂತಿದ್ದು ಬಂದ ಕೂಡಲೇ ತಶಿಲಕ್ ಎಂದು ಹೇಳಿ ಸ್ವಾಗತಿಸಿದರು.

ಕಾರ್ಯಕ್ರಮ ಮುಕ್ತಾಯವಾದ ಬಳಿಕ ಲಾಮಾ ಕ್ಯಾಂಪಿನ ಬೌದ್ಧ ಮಂದಿರದ ವತಿಯಿಂದ ಮುಖ್ಯಮಂತ್ರಿಗೆ ಬುದ್ಧನ ಪ್ರತಿಮೆ ನೀಡಿ ಗೌರವಿಸಲಾಯಿತು.

ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಜಿ.ಹೇಮಂತ್ ಕುಮಾರ್, ತಹಸೀಲ್ದಾರ್ ಚಂದ್ರ ಮೌಳಿ, ಟಿಬೆಟಿಯನ್ ಹೊಸತು ಪ್ರದೇಶದ ವಿಶೇಷ ಗಣ್ಯರು, ಮತ್ತು ವಿವಿಧ ಮಠಗಳ ಸನ್ಯಾಸಿಗಳ ಗಣ್ಯರು, ಐತಿಹಾಸಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕೊಂಡದ ಜಾಗ ಅಕ್ರಮ ಖಾತೆ: ಪ್ರತಿಭಟನೆ



ತಿ.ನರಸೀಪುರ, ಅ.22– ಪಟ್ಟಣದ 1ನೇ ವಾರ್ಡ್ ಹಳೇ ತಿರುಮಕೂಡಲಿನಲ್ಲಿರುವ ಶ್ರೀಚೌಡೇಶ್ವರಿ ದೇವಸ್ಥಾನದ ಮುಂಭಾಗದ ಕೊಂಡದ ಜಾಗವನ್ನು ಖಾಸಗಿ ವ್ಯಕ್ತಿಗೆ ಅಕ್ರಮವಾಗಿ ಖಾತೆ ಮಾಡಿರುವುದನ್ನು ಖಂಡಿಸಿ ಗ್ರಾಮಸ್ಥರು ಪುರಸಭಾ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಗ್ರಾಪಂ ಮಾಜಿ ಅಧ್ಯಕ್ಷ ಕರಿಯಪ್ಪ ಮಾತನಾಡಿ, ದೇವಸ್ಥಾನದ ಮುಂಭಾಗದಲ್ಲಿರುವ ಖಾತೆ ಸಂಖ್ಯೆ 140ರ ಖಾಲಿ ನಿವೇಶನ ದೇವಸ್ಥಾನಕ್ಕೆ ಸೇರಿದ್ದು, ಪುರಸಭಾ ಅಧಿಕಾರಿಗಳು ರಾಜಕೀಯ ಪ್ರಭಾವಕ್ಕೆ ಒಳಗಾಗಿ ಸದರಿ ಜಾಗವನ್ನು ಸುಧೀರ್ ಎಂಬುವರ ಹೆಸರಿಗೆ ಇ–ಸ್ವತ್ತು ನೀಡಿ, ಖಾತೆ ಮಾಡಿ ಬೇರೆ ಖಾತೆ ಸಂಖ್ಯೆ ನೀಡಿರುತ್ತಾರೆ ಎಂದು ಆರೋಪಿಸಿದ ಅವರು, ಅಕ್ರಮ ಖಾತೆ ರದ್ದುಪಡಿಸದಿದ್ದಲ್ಲಿ ಪುರಸಭೆ ಮುಖ್ಯಾಧಿಕಾರಿ ಮತ್ತು ಖಾತೆ ಮಾಡಿಸಿಕೊಂಡಿರುವ ವ್ಯಕ್ತಿ ವಿರುದ್ಧ ಕಾನೂನು ರೀತ್ಯಾ ಮೊಕದ್ದಮೆ ದಾಖಲಿಸಲಾಗುವುದು ಎಂದರು. ಪ್ರತಿಭಟನೆಯಲ್ಲಿ ಯಜಮಾನರಾದ ಚಂದ್ರೇಗೌಡ, ನಟರಾಜು, ಡಿಕೆಸಿ ಅಭಿಮಾನಿ ಬಳಗದ ಅಧ್ಯಕ್ಷ ಆರ್.ಚೇತನ್, ಗ್ರಾಪಂ ಮಾಜಿ ಉಪಾಧ್ಯಕ್ಷ ಪುಟ್ಟು, ರಮೇಶ್, ನಾಗರಾಜು, ಕೇಬಲ್ ಮಣಿಕಂಠ, ಸುನೀಲ್, ನವೀನ, ವಿನೋದ, ಸ್ವಾಮಿ, ಚೇತನ್, ಕುಮಾರ್, ಮಹೇಶ್, ಉಮೇಶ್, ಪ್ರದೀಪ್, ರವಿ, ಗಣೇಶ್, ಗುಂಡ, ಪ್ರಶಾಂತ್, ವಾಸು, ನಂದೀಶ್ ಹಾಜರಿದ್ದರು.

ಕೆರೆಗಳ ಸಂರಕ್ಷಣೆ ನಮ್ಮೆಲ್ಲರ ಹೊಣೆ



ಕಂಪಲಾಪುರ, ಅ.22– ನಮ್ಮ ಹಿರಿಯರು ನಿರ್ಮಿಸಿದ ಕೆರೆಗಳನ್ನು ಸಂರಕ್ಷಿಸುವುದು ನಮ್ಮೆಲ್ಲರ ಹೊಣೆ ಎಂದು ಶ್ರೀಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್ ಕೊಡಗು ಜಿಲ್ಲೆ ನಿರ್ದೇಶಕಿ ಲೀಲಾವತಿ ತಿಳಿಸಿದರು.

ಇಲ್ಲಿಗೆ ಸಮೀಪದ ಎಂ.ಶೆಟ್ಟಿಹಳ್ಳಿಯ ವಿಷಪರಿ ಕೆರೆಯನ್ನು 5.97 ಲಕ್ಷ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗಿದ್ದು, ತುಂಬಿದ ಕೆರೆಗೆ ಶುಕ್ರವಾರ ಬಾಗಿನ ಅರ್ಪಿಸಿ ಮಾತನಾಡಿದ ಅವರು, ಯಾವುದೇ ಕೆರೆಯ ಹೂಳೆತ್ತಿ ಅಭಿವೃದ್ಧಿಪಡಿಸಿದಾಗ ಅಲ್ಲಿ ಅಂತರ್ಜಲದ ಮಟ್ಟ ಹೆಚ್ಚಿ ರೈತರು ಬೆಳೆ ಬೆಳೆಯಲು, ಜಾನುವಾರು, ಪ್ರಾಣಿಪಕ್ಷಿಗಳಿಗೆ ಹೇರಳವಾಗಿ ನೀರು ಸಿಗುತ್ತದೆ. ಉತ್ತರಕರ್ನಾಟಕದ ಕೆಲ ಭಾಗಗಳಲ್ಲಿ ಕೆರೆಗಳ ಹೂಳೆತ್ತದೆ ಭೂಮಿಯಲ್ಲಿ ಅಂತರ್ಜಲ ಕುಸಿದಿದೆ. ಜನ, ಜಾನುವಾರುಗಳಿಗೆ ನೀರಿಲ್ಲದೆ ಪರದಾಡುತಿದ್ದಾರೆ. ದಕ್ಷಿಣ ಭಾಗದಲ್ಲಿರುವ ನಾವೇ ಪುಣ್ಯವಂತರು. ಹಳ್ಳಿಗರಲ್ಲಿ ಶಿಸ್ತು ಕಡಿಮೆಯಾದರೂ ನಮ್ಮ ಮುಂದಿನ ಪೀಳಿಗೆಯ ಉಳಿವಿಗಾದರೂ ನಾವು ಕೆರೆಗಳ ಸಂರಕ್ಷಣೆ ಮಾಡಬೇಕಿದೆ ಎಂದರು.

ಗ್ರಾಮದ ಮುಖಂಡ ಸ್ವಾಮಿಗೌಡ ಮಾತನಾಡಿ, ಸರ್ಕಾರ ಮಾಡಬೇಕಾದ ಕೆಲಸಗಳನ್ನು ಧರ್ಮಸ್ಥಳ ಸಂಸ್ಥೆ ಮಾಡುತ್ತಿರುವುದು ಶ್ಲಾಘನೀಯ. ಕೆರೆ ತುಂಬಿ 13 ವರ್ಷ ಕಳೆದಿತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಕೆರೆ ಹೂಳೆತ್ತಿ ಅಭಿವೃದ್ಧಿಪಡಿಸಲಾಗಿದ್ದು, ಕೆರೆಯೂ ತುಂಬಿದೆ ಗ್ರಾಮಕ್ಕೆ ಒಳಿತಾಗಲೆಂದು ಸಂಸ್ಥೆಯವರು ಮಾಡಿರುವ ಈ ಘನ ಕಾರ್ಯ ಉಳಿಸುವುದು ನಮ್ಮ ಜವಾಬ್ದಾರಿ ಇದಕ್ಕೆ ಎಲ್ಲರೂ ಸಹಕರಿಸಬೇಕು ಎಂದರು.

ಪಿಡಿಓ ಪರಮೇಶ್ ಮಾತನಾಡಿದರು. ಈ ವೇಳೆ ತಾಲೂಕು ಯೋಜನಾಧಿಕಾರಿ ಸುರೇಶ್ ಶೆಟ್ಟಿ, ಗ್ರಾಪಂ ಅಧ್ಯಕ್ಷ ರಮೇಶ್, ಕಾರ್ಯದರ್ಶಿ ಲೋಕೇಶ್, ಸದಸ್ಯರಾದ ಮಾಲಾಶ್ರೀ, ದಾಕ್ಷಾಯಿಣಿ, ಮಾಜಿ ಸದಸ್ಯ ರಾಮಯ್ಯ, ರಾಜಯ್ಯ, ಕೆರೆ ಸಮಿತಿ ಅಧ್ಯಕ್ಷ ಪ್ರಕಾಶ್, ಮಹೇಶ್, ಮಹದೇವ್, ಯ.ತಮ್ಮೇಗೌಡ, ಕೃಷಿ ಅಧಿಕಾರಿ ಹರೀಶ್, ಯೋಜನೆ ಮೇಲ್ವಿಚಾರಕಿ ರವಿಕಲಾಶೆಟ್ಟಿ, ಒಕ್ಕೂಟದ ಮುಖ್ಯಸ್ಥರಾದ ಅನುಪಮ, ಆಶಾ, ಕವಿತಾ, ಸೇವಾಪ್ರತಿನಿಧಿ ಪವಿತ್ರ, ರಾಧ, ರೂಪ, ಭವ್ಯ, ಆನಂದ್, ಅಶ್ವಿನಿ, ರೂಪ, ನೌಸಿನಾ ಸೇರಿದಂತೆ ಗ್ರಾಮಸ್ಥರಿದ್ದರು.



ಇತ್ತೀಚೆಗೆ ಸುರಿದ ಭಾರೀ ಮಳೆಗೆ ಬನ್ನೂರು ಸಮೀಪದ ಗಾಡಿಜೋಗಿಹುಂಡಿ ಗ್ರಾಮದ ನಿವಾಸಿ ಲಕ್ಷ್ಮಮ್ಮ ಎಂಬುವರಿಗೆ ಸೇರಿದ ಮನೆ ಕುಸಿದು ಅಪಾರ ನಷ್ಟ ಉಂಟಾಗಿದೆ. ಅಧಿಕಾರಿಗಳು ಸೂಕ್ತ ಪರಿಹಾರ ಒದಗಿಸುವಂತೆ ಲಕ್ಷ್ಮಮ್ಮ ಆಗ್ರಹಿಸಿದ್ದಾರೆ.

ರಾಜಕೀಯ ಧರ್ಮಯುದ್ಧದಲ್ಲಿ ಕಾಂಗ್ರೆಸ್ ಪುಟಿದೇಳಲಿದೆ

ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್

ಹುಣಸೂರು, ಅ.22– ಹುಣಸೂರಿನ ರಾಜಕೀಯ ಧರ್ಮಯುದ್ಧದಲ್ಲಿ ಕಾಂಗ್ರೆಸ್ ಮತ್ತೆ ಪುಟಿದೇಳಲಿದೆ ಎಂದು ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ತಿಳಿಸಿದರು.

ನಗರದ ಕಾಂಗ್ರೆಸ್ ಕಚೇರಿಯಲ್ಲಿ ಆಯೋಜಿಸಿದ್ದ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಗಳ ಸಮಿತಿಯ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹುಣಸೂರಿನಲ್ಲಿ ರಾಜಕೀಯ ಧರ್ಮಯುದ್ಧ ಪ್ರಾರಂಭವಾಗುತ್ತಿದೆ. ಈ ಯುದ್ಧದಲ್ಲಿ ಅಧರ್ಮಕ್ಕೆ ಸೋಲಾಗಿ ಧರ್ಮಕ್ಕೆ ಜಯ ಸಿಗಲಿದೆ. 3 ಬಾರಿ ಜಯ ಗಳಿಸಿರುವ ಶಾಸಕ ಹೆಚ್.ಪಿ.ಮಂಜುನಾಥ್ ಅವರು ರಾಜಕೀಯ ಧರ್ಮಯುದ್ಧದಲ್ಲಿ ಮತ್ತೆ ಗೆಲುವು ಸಾಧಿಸಿ 4ನೇ ಬಾರಿಗೆ ಶಾಸಕರಾಗಿ ಆಯ್ಕೆಯಾಗಿ ಮಂತ್ರಿಯಾಗಲಿದ್ದಾರೆ ಎಂದರು.



ಹುಣಸೂರು ಉಪ ಚುನಾವಣೆ ಹಾಗೂ ಮೇಕೆದಾಟು ಪಾದಯಾತ್ರೆ ಸೇರಿದಂತೆ ನನ್ನ ಮೇಲೆ 6 ಪ್ರಕರಣ ದಾಖಲಾಗಿದೆ. ಆದರೆ ನಾನು ಎದೆಗುಂದದೆ ಪಕ್ಷ ಸಂಘಟನೆಯಲ್ಲಿ ತೊಡಗಿದ್ದೇನೆ. ನೀವುಗಳು ಸಹ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕಾರ್ಯಕರ್ತರನ್ನು ಹುರಿದುಂಬಿಸಿದ ಅವರು, ನೇಮಕಗೊಂಡಿರುವ ಎಲ್ಲಾ ಪದಾಧಿಕಾರಿಗಳು ಸಹ ಪಕ್ಷ ಸಂಘಟನೆಗೆ ಮುಂದಾಗಬೇಕೆಂದು ಕರೆ ನೀಡಿದರು.

ಶಾಸಕ ಹೆಚ್.ಪಿ.ಮಂಜುನಾಥ್ ಮಾತನಾಡಿ, ಕಾರ್ಯಕರ್ತರು ನಿಷ್ಠೆಯಿಂದ ತಮ್ಮ ಕರ್ತವ್ಯ ನಿರ್ವಹಿಸಿದರೆ ಪಕ್ಷ ಮತ್ತಷ್ಟು ಸದೃಢವಾಗಲಿದೆ. ಸರ್ಕಾರ ಹೆಚ್ಚು ಅನುದಾನ ಕೊಡದ ಕಾರಣ ತಾಲೂಕಿನ ಅಭಿವೃದ್ಧಿ ವೇಗಕ್ಕೆ ಕಡಿವಾಣ ಹಾಕಿದಂತಾಗಿದೆ. ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ನಮ್ಮ ಕಾಂಗ್ರೆಸ್ ಅಧಿಕಾರಕ್ಕೆ ಬರಲಿದೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಬಡವರು, ಶೋಷಿತರು, ನಿರ್ಗತಿಕರು, ದೀನ ದಲಿತರಿಗೆ ನೀಡಿದ ಭಾಗ್ಯಗಳಿಗೆಲ್ಲ ಅನುದಾನ ನೀಡದೆ ನಿರ್ಲಕ್ಷಿಸಲಾಗಿದೆ. ಈ ಬಗ್ಗೆ ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯವರು ಮನೆ ಮನೆಗೆ ತೆರಳಿ ಸರ್ಕಾರದ ವೈಫಲ್ಯಗಳನ್ನು ತಿಳಿಸುವಂತೆ ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ ನಗರಸಭಾಧ್ಯಕ್ಷೆ ಗೀತಾ, ಪಂಚಾಯತ್ ರಾಜ್ ಸಂಘಟನೆ ಜಿಲ್ಲಾಧ್ಯಕ್ಷ ಮಲ್ಲೇಶ್, ತಾಲೂಕು ಅಧ್ಯಕ್ಷ ಸುರೇಶ್, ಡಿಸಿಸಿ ಉಪಾಧ್ಯಕ್ಷ ಮಂಜಣ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ನಾರಾಯಣ, ರಮೇಶ್, ದೇವರಾಜ್, ಮಾಜಿ ಅಧ್ಯಕ್ಷ ಬಸವರಾಜ್, ಕಾರ್ಯದರ್ಶಿ ಕೆಂಪರಾಜ್, ಉದ್ಯಮಿ ಹೆಚ್.ಪಿ.ಅಮರನಾಥ್, ರಾಜು, ಶಿವರಾಜೇಗೌಡ, ಗುಂಡರವಿ, ಅಜ್ಗರ್ ಪಾಷಾ, ರಾಘು, ಕುಮಾರ್, ಬಸವರಾಜಪ್ಪ, ಕುಮಾರಸ್ವಾಮಿ, ರಾಜೇಗೌಡ, ನಟರಾಜ್, ಶರವಣ ಇತರರಿದ್ದರು.

ಈಡಿಗರ ಸಮುದಾಯ ಭವನಕ್ಕೆ ಭೂಮಿ ಪೂಜೆ

ನಂಜನಗೂಡು, ಅ.22– ತಾಲೂಕು ಕೇಂದ್ರದಲ್ಲಿ ಎಲ್ಲಾ ಸಮುದಾಯಗಳ ಜನರ ಸಾಂಸ್ಕೃತಿಕ ಹಾಗೂ ಧಾರ್ಮಿಕ ಚಟುವಟಿಕೆಗಳಿಗೆ ನೆರವಾಗಲು ಸಮುದಾಯ ಭವನಗಳ ನಿರ್ಮಾಣಕ್ಕೆ ಅನುದಾನ ಹಂಚಿಕೆ ಮಾಡಲಾಗಿದೆ ಎಂದು ಶಾಸಕ ಬಿ.ಹರ್ಷವರ್ಧನ್ ತಿಳಿಸಿದರು.

ನಗರದ ಬೈಪಾಸ್ ರಸ್ತೆಯಲ್ಲಿ 30 ಲಕ್ಷ ರೂ. ವೆಚ್ಚದ ಈಡಿಗರ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡಿದರು.



ವೃತ್ತಿ ಆಧಾರಿತ ಕಸುಬುಗಳ ಮೂಲಕ ಜೀವನ ನಿರ್ವಹಣೆಯಲ್ಲಿ ತೊಡಗಿರುವ ಈಡಿಗ, ಸವಿತಾ ಸಮಾಜ, ಮಡಿವಾಳ ಸೇರಿದಂತೆ ಇತರೆ ಕೆಲ ಸಮುದಾಯಗಳಿಗೆ ನಗರದ ಪ್ರಮುಖ ಭಾಗದಲ್ಲಿ ನಿವೇಶನ ಹಂಚಿಕೆ ಮಾಡಿ ಸಮುದಾಯ ಭವನ ನಿರ್ಮಾಣ ಮಾಡಬೇಕೆಂಬುದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಆಶಯವಾಗಿದೆ. ಅವರು ಕಂದಾಯ ಸಚಿವರಾಗಿದ್ದ ವೇಳೆ ಎಲ್ಲಾ ಸಮುದಾಯಗಳಿಗೂ ನಿವೇಶನ ಹಂಚಿಕೆ ಮಾಡುವ ಮೂಲಕ ಸಾಮಾಜಿಕ ನ್ಯಾಯ ಒದಗಿಸಿದ್ದರು. ಇದೀಗ ಆ ಸಮುದಾಯ ಭವನಗಳಿಗೆ ಅನುದಾನ ಬಿಡುಗಡೆ ಮಾಡುವ ಮೂಲಕ ಭವನ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ ಎಂದರು.

ಇನ್ನು ಉಪ್ಪಾರ ಸಮುದಾಯಕ್ಕೆ ಅವಶ್ಯಕ ನಿವೇಶನ ಮಂಜೂರಾತಿ ಮಾಡಿದ ನಂತರ ಅನುದಾನ ನೀಡಲಾಗುವುದು. ಇದರೊಂದಿಗೆ ನಗರದಲ್ಲಿ ಪೌರಕಾರ್ಮಿಕರ ಸಮುದಾಯ ಭವನ ನಿರ್ಮಾಣಕ್ಕೂ ಶೀಘ್ರ ಚಾಲನೆ ನೀಡಲಾಗುವುದು ಎಂದರು.

ಶ್ರೀರಾಂಪುರ ಬಡಾವಣೆಯಲ್ಲಿ ಮಳೆಗೆ ಗರಡಿ ಮನೆ ಉರುಳಿ ಬಿದ್ದಿತ್ತು. ಹೀಗಾಗಿ ತಕ್ಷಣ ಅನುದಾನ ಬಿಡುಗಡೆ ಮಾಡಿ ಹೊಸದಾಗಿ ಗರಡಿ ಮನೆ ನಿರ್ಮಾಣ ಮಾಡಲು ಭೂಮಿ ಪೂಜೆ ನೆರವೇರಿಸಲಾಗಿದೆ ಎಂದು ತಿಳಿಸಿದರು.

ಈ ವೇಳೆ ಸಂಸದ ವಿ.ಶ್ರೀನಿವಾಸ ಪ್ರಸಾದ್, ನಗರಸಭಾಧ್ಯಕ್ಷ ಎಚ್.ಎಸ್.ಮಹದೇವಸ್ವಾಮಿ, ಉಪಾಧ್ಯಕ್ಷೆ ನಾಗಮಣಿ, ಸದಸ್ಯರಾದ ಮೀನಾಕ್ಷಿ ಮಹದೇವಮ್ಮ, ವಿಜಯಲಕ್ಷ್ಮಿ, ಕಪಿಲೇಶ್, ಮಹದೇವ ಪ್ರಸಾದ್, ಮುಖಂಡರಾದ ಪದ್ಮನಾಭ ರಾವ್, ಸುಬ್ಬಣ್ಣ ಮುಖಂಡರಾದ ಕೇಶಲಂಕಾರಿ ಸಂಘದ ಅಧ್ಯಕ್ಷ ಪುಟ್ಟರಾಜು, ಆನಂದ್, ಕೆಂಪರಾಜು, ನಾಗೇಂದ್ರ, ಡಿ.ಮಹೇಶ್, ಶಿವಪ್ರಸಾದ್, ರವಿ, ಗಿರೀಶ್, ಮಂಜುನಾಥ್, ಸೇರಿದಂತೆ ಇತರರಿದ್ದರು.

ಹುಣಸೂರು: ಇಬ್ಬರು ಕಾಡುಕೋಣ ಬೇಟೆಗಾರರ ಬಂಧನ

ಹುಣಸೂರು, ಅ.22– ಇಲ್ಲಿನ ನಾಗರಹೊಳೆ ಉದ್ಯಾನವನದಲ್ಲಿ ಕಾಡುಕೋಣ ಬೇಟೆಯಾಡಿದ್ದ ಇಬ್ಬರು ಬೇಟೆಗಾರರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಉದ್ಯಾನವನದಂಚಿನ ಪಿರಿಯಾಪಟ್ಟಣ ತಾಲೂಕಿನ ಲಕ್ಷ್ಮೀಪುರ ಗ್ರಾಮದ ನಿವಾಸಿಗಳಾದ ಅಶೋಕ, ಕಾಟಿಚಂದ್ರ ಬಂಧಿತ ಆರೋಪಿಗಳು. ಪ್ರಕರಣಕ್ಕೆ ಸಂಬಂಧಿಸಿದಂತೆ ಇನ್ನೂ 7 ಮಂದಿ ಆರೋಪಿಗಳು ತಲೆಮರೆಸಿಕೊಂಡಿದ್ದಾರೆ.



ಅ.15ರಂದು ರಾತ್ರಿ ನಾಗರಹೊಳೆ ಉದ್ಯಾನವನದ ಹುಣಸೂರು ವನ್ಯಜೀವಿ ವಲಯ ವ್ಯಾಪ್ತಿಯ ಕಚುವಿನಹಳ್ಳಿ ಶ್ರೇಣಿ ಅರಣ್ಯ ಪ್ರದೇಶದಲ್ಲಿ ಕಾಡುಕೋಣ ಬೇಟೆಯಾಡಿ ಮಾಂಸವನ್ನು ಹೊತ್ತೊಯ್ದಿದ್ದರು. ಈ ಸಂಬಂಧ ಅರಣ್ಯ ಇಲಾಖೆ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ತನಿಖೆ ಕೈಗೊಂಡಿದ್ದರು.

ಖಚಿತ ಮಾಹಿತಿ ಮೇರೆಗೆ ಹುಲಿ ಯೋಜನೆ ನಿರ್ದೇಶಕ ಹರ್ಷಕುಮಾರ್ ನರಗುಂದ, ಎಸಿಎಫ್ ದಯಾನಂದ್ ಮಾರ್ಗದರ್ಶನದಲ್ಲಿ ಅರಣ್ಯಾಧಿಕಾರಿಗಳು ದಾಳಿ ನಡೆಸಿ ಲಕ್ಷ್ಮೀಪುರದಲ್ಲಿ ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಹುಣಸೂರು ವನ್ಯಜೀವಿ ವಲಯದ ವಲಯ ಅರಣ್ಯ ಅಧಿಕಾರಿಗಳಾದ ರತನ್ ಕುಮಾರ್. ಗಣರಾಜ ಪಟಗಾರ, ಡಿಆರ್‌ಎಫ್‌ಓಗಳಾದ ಪ್ರಸನ್ನಕುಮಾರ್, ಎನ್.ಕೆ. ವೀರಭದ್ರ, ರಾಮು, ಮನೋಹರ್, ಅರಣ್ಯ ರಕ್ಷಕರಾದ ಲಾಲ್ ಮಹಮದ್, ಕೃಷ್ಣ, ಕುಶಲ್, ವಾಹನ ಚಾಲಕ ಶಿವು ಭಾಗವಹಿಸಿದ್ದರು.

ಸಾರಿಗೆ ಬಸ್ ಹರಿದು ಭಿಕ್ಷುಕ ಸಾವು

ಹೆಚ್.ಡಿ.ಕೋಟೆ, ಅ.22– ತೆವಳಿಕೊಂಡು ರಸ್ತೆ ದಾಟುತ್ತಿದ್ದ ವಿಶೇಷಚೇತನ ಭಿಕ್ಷುಕನ ಮೇಲೆ ಕೆಎಸ್‌ಆರ್‌ಟಿಸಿ ಬಸ್ ಹರಿದು ಆತ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಟ್ಟಣದ ಹ್ಯಾಂಡ್‌ಪೋಸ್ಟ್ ಸರ್ಕಲ್‌ನಲ್ಲಿ ಶನಿವಾರ ನಡೆದಿದೆ.

ತಾಲೂಕಿನ ನೇರಳೆ ಗ್ರಾಮದ ಚಿಕ್ಕಪುಟ್ಟ(60) ಸಾವನ್ನಪ್ಪಿದವರು. ಈತ ತೆವಳಿಕೊಂಡು ರಸ್ತೆ ದಾಟುತ್ತಿದ್ದ ವೇಳೆ ಸರಗೂರಿನಿಂದ ಮೈಸೂರಿನ ಕಡೆಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಹರಿದಿದೆ. ಪರಿಣಾಮ ಆತ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಹೆಚ್.ಡಿ.ಕೋಟೆ ಪೊಲೀಸರು ಪರಿಶೀಲನೆ ನಡೆಸಿ, ಶವವನ್ನು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿದರು. ಬಳಿಕ ಬಸ್ ಹಾಗೂ ಚಾಲಕನನ್ನು ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಳವಳ್ಳಿಯಲ್ಲಿ ಬಾಲಕಿ ಹತ್ಯೆ ಪ್ರಕರಣ

ಆರೋಪಿಗಳಿಗೆ ಕಠಿಣ ಶಿಕ್ಷೆಗೆ ಆಗ್ರಹಿಸಿ ಪ್ರತಿಭಟನೆ



ಹುಣಸೂರು, ಅ.22– ಮಳವಳ್ಳಿಯಲ್ಲಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರವೆಸಗಿ ಹತ್ಯೆ ಮಾಡಿರುವ ಹಾಗೂ ಮಳವಳ್ಳಿ ತಾಲೂಕಿನ ದೊಡ್ಡಎಲಚಗೆರೆ ಗ್ರಾಮದಲ್ಲಿ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರ ನಡೆಸಿದ ಆರೋಪಿಗಳಿಗೆ ಕಠಿಣ ಶಿಕ್ಷೆ ನೀಡುವಂತೆ ಒತ್ತಾಯಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಕಾರ್ಯಕರ್ತರು ನಗರದಲ್ಲಿ ಪ್ರತಿಭಟನೆ ನಡೆಸಿದರು.

ನಗರದ ತಹಸೀಲ್ದಾರ್ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಮಹಿಳೆಯರು ಮತ್ತು ಮಕ್ಕಳ ರಕ್ಷಣೆ ಮಾಡದ ರಾಜ್ಯ, ಕೇಂದ್ರ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು. ಅಲ್ಲದೇ ಅಪ್ರಾಪ್ತ ಬಾಲಕಿ ಮೇಲೆ ಅತ್ಯಾಚಾರವೆಸಗಿದ ಆರೋಪಿಗಳಿಗೆ ಗಲ್ಲು ಶಿಕ್ಷೆ ಆಗಬೇಕು ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಜನವಾದಿ ಮಹಿಳಾ ಸಂಘದ ಅಧ್ಯಕ್ಷೆ ಕೆ.ಸಿ.ಆಶಾ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಮಹಿಳೆಯರು, ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಹೆಚ್ಚಾಗುತ್ತಿದೆ. ದೇಶದಲ್ಲಿ ಕಾನೂನು ಸುವ್ಯವಸ್ಥೆ ಕುಸಿದಿದ್ದು, ಅಪರಾಧ ಚಟುವಟಿಕೆಗಳೂ ಹೆಚ್ಚಾಗುತ್ತಿವೆ. ಮಹಿಳೆ ಮತ್ತು ಮಕ್ಕಳಿಗೆ ಎಲ್ಲಿಯೂ ಸುರಕ್ಷತೆ ಇಲ್ಲ ಎಂದು ದೂರಿದರು. ಇದೇ ವೇಳೆ ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸುವಂತೆ ಒತ್ತಾಯಿಸಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಪ್ರೀತಿ ಮಾತನಾಡಿದರು. ಪ್ರತಿಭಟನೆಯಲ್ಲಿ ನಗರಸಭೆ ಉಪಾಧ್ಯಕ್ಷೆ ಆಶಾ, ಜನವಾದಿ ಮಹಿಳಾ ಸಂಘದ ಖಜಾಂಚಿ ಸಂಗೀತಾ, ಮುಖಂಡರಾದ ರಂಜಿತ, ಶಿವಮ್ಮ, ಪದ್ಮ, ವಸಂತ, ರೇಖಾ, ಪದ್ಮಮ್ಮ, ಪೂರ್ಣಿಮಾ, ಮಂಗಳಮ್ಮ, ರಾಜಮ್ಮ, ರತ್ನ ಇತರರಿದ್ದರು.

ಕಂದಾಯ ಅದಾಲತ್‌ನಲ್ಲಿ 910 ಪ್ರಕರಣ ಸ್ಥಳದಲ್ಲೇ ಇತ್ಯರ್ಥ

ಶಾಸಕ ಎಂ.ಅಶ್ವಿನ್ ಕುಮಾರ್ ವಿವರಣೆ

ತಿ.ನರಸೀಪುರ ಅ.22– ಕ್ಷೇತ್ರದ ವಿವಿಧೆಡೆ ನಡೆದ 8 ಕಂದಾಯ ಅದಾಲತ್‌ನಲ್ಲಿ 910 ಪ್ರಕರಣಗಳನ್ನು ಸ್ಥಳದಲ್ಲೇ ಇತ್ಯರ್ಥ ಪಡಿಸಲಾಗಿದೆ. ಇದರಲ್ಲಿ 2700 ಸರ್ವೇ ನಂಬರ್‌ಗಳು ಒಳಗೊಂಡಿರುತ್ತದೆ. ಇದರಿಂದ 3600 ಕುಟುಂಬಗಳಿಗೆ ಅನುಕೂಲವಾಗಿದೆ ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ತಿಳಿಸಿದರು.

ಪಟ್ಟಣದ ಮಿನಿ ವಿಧಾನಸೌಧದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನರು ಮರಣ ಪ್ರಮಾಣ ಪತ್ರಕ್ಕಾಗಿ ಕೋರ್ಟ್‌ಗೆ ಅಲೆಯುವುದನ್ನು ತಪ್ಪಿಸಲಾಗಿದೆ. ಅಲ್ಲದೇ 1600 ಮಂದಿಯ ಮರಣ ಪತ್ರವನ್ನು ಅರ್ಜಿದಾರರಿಗೆ ನೀಡಲು ಆದೇಶಿಸಲಾಗಿದೆ. ಇದರಿಂದ ಮಧ್ಯವರ್ತಿಗಳ ಹಾವಳಿಗೆ ಕಡಿವಾಣ ಹಾಕಿದಂತಾಗಿದೆ. ಅಲ್ಲದೆ ಟಪಾಲು ಶಾಖೆಯಲ್ಲಿ ರೈತರು ಕೊಟ್ಟ ಅರ್ಜಿಗಳನ್ನು ಪರಿಶೀಲಿಸಿ ಸುಮಾರು 200 ತಿದ್ದುಪಡಿ ಪ್ರಕರಣಗಳನ್ನು ಇತ್ಯರ್ಥಗೊಳಿಸಿ



ಆರ್‌ಟಿಸಿ ಸರಿಪಡಿಸಲಾಗಿದೆ. ನಾಡಕಚೇರಿಯಲ್ಲಿ ಹಣ ಪಾವತಿಸಿ ಬಗೆಹರಿಯದೇ ಹಲವು ವರ್ಷಗಳಿಂದ ಬಾಕಿ ಇದ್ದ 167 ಪ್ರಕರಣಗಳನ್ನು ಆರ್‌ಟಿಸಿ ತಿದ್ದುಪಡಿ ಮಾಡಲಾಗಿದೆ. ಇನ್ನು 100 ಪ್ರಕರಣ ಅಂತಿಮ ಹಂತದಲ್ಲಿದೆ ಎಂದರು.

ತಾಲೂಕು ಕಚೇರಿಗೆ ಖಾತೆ ತಿದ್ದುಪಡಿ ಇತ್ಯಾದಿ ಕೋರಿ ಬಂದ ಪ್ರಕರಣಗಳಲ್ಲಿ ಬಗೆಹರಿಯಲಾಗದ 600 ಪ್ರಕರಣಗಳಿಗೆ ಹಿಂಬರಹ ನೀಡಿ, ಸಾರ್ವಜನಿಕರಿಗೆ ಮಾಹಿತಿ ನೀಡಲಾಗಿದೆ. ಪ್ರತಿ ತಿಂಗಳ 1ನೇ ಶನಿವಾರದಂದು ತಾಲೂಕಿನ ಉಪ ತಹಸೀಲ್ದಾರ್, ರಾಜಸ್ವ ನಿರೀಕ್ಷಕರು, ಗ್ರಾಮಲೆಕ್ಕಿಗರು ಒಂದೇ ಸೂರಿನಡಿ ಇದ್ದು, ಸ್ಥಳದಲ್ಲೇ ಸಮಸ್ಯೆಗಳನ್ನು ಪರಿಶೀಲಿಸಿ, ಅಂದೇ ಮಂಜೂರಾತಿ ಆದೇಶ ನೀಡುವ ಪ್ರಕ್ರಿಯೆ ಜಾರಿಗೊಳಿಸಲಾಗಿದೆ. 750 ಫಲಾನುಭವಿಗಳಿಗೆ ಇದರ ಸದುಪಯೋಗವಾಗಿದೆ ಎಂದರು.

ಖಾತೆ ಪ್ರಕರಣಗಳಲ್ಲಿ ತಕರಾರು ಬಂದು ಹಲವು ವರ್ಷಗಳಿಂದ ಬಾಕಿ ಇದ್ದ ಪ್ರಕರಣಗಳನ್ನು ವಿಚಾರಣೆ ಮಾಡಿ 150 ಪ್ರಕರಣಗಳಿಗೆ ತೀರ್ಪು ನೀಡಲಾಗಿದೆ. ವಿಲ್‌ನಂತೆ ಖಾತೆ, ಮೈನರ್ ಗಾರ್ಡಿಯನ್ ಖಾತೆ, ಆಧಾರ ಖುಲಾಸೆ, ಭೋಗ್ಯ ಖುಲಾಸೆ ಅರ್ಜಿಗಳನ್ನು ನೇರವಾಗಿ ಭೂಮಿ ಶಾಖೆಯಲ್ಲಿ ಅರ್ಜಿ ಸಲ್ಲಿಸಿ, ಸ್ವೀಕೃತಿ ಪಡೆಯುವ ವ್ಯವಸ್ಥೆ ಮಾಡಲಾಗಿದೆ ಇದರಿಂದಾಗಿ ಸಾರ್ವಜನಿಕರು ಪದೇ ಪದೇ ಕಚೇರಿಗೆ ಅಲೆಯುವುದನ್ನು ನಿವಾರಿಸಲಾಗಿದೆ ಎಂದರು.

ಹಲವು ಭಿತ್ತಿಪತ್ರ ಅಂಟಿಸುವ ಮೂಲಕ ಸಾರ್ವಜನಿಕರಿಗೆ ಯಾವ ಅರ್ಜಿಗೆ ಯಾವ ದಾಖಲೆಗಳು ಸಲ್ಲಿಸಬೇಕೆಂಬ ಮಾಹಿತಿಯನ್ನು ಪ್ರಚುರಪಡಿಸಲಾಗಿರುತ್ತದೆ. ಕೆರೆಗಳ ಅಳತೆ, ಸ್ಮಶಾನ ಒತ್ತುವರಿ ತೆರವು ಕಾರ್ಯ ಪ್ರಗತಿಯಲ್ಲಿದೆ. ಹೊಸದಾಗಿ 3 ಗ್ರಾಮಗಳಿಗೆ ಸ್ಮಶಾನಕ್ಕೆ ಜಮೀನು ಗುರುತಿಸಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಮುಜರಾಯಿ ದೇವಸ್ಥಾನಕ್ಕೆ ಸೇರಿದ ಆಭರಣಗಳ ನಿಖರತೆಗಾಗಿ ಎಲ್ಲಾ ಆಭರಣಗಳನ್ನು ಡಿಜಿಟಲೈಜೇಷನ್ ಮಾಡಲಾಗಿದೆ. ಸಿಬ್ಬಂದಿಗಳ ಹಾಜರಾತಿಗಾಗಿ ಇ–ಹಾಜರಾತಿ ಜಾರಿಗೆ ತರಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ತಹಸೀಲ್ದಾರ್ ಸಿ.ಜಿ. ಗೀತಾ, ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ಜೆಡಿಎಸ್ ಕ್ಷೇತ್ರಾಧ್ಯಕ್ಷ ಚಿನ್ನಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ರಮೇಶ್, ಮಾಜಿ ಸದಸ್ಯ ರಾಜಣ್ಣ, ಸೋಸಲೆ ರಾಜೇಶ್, ಆಪ್ತ ಸಹಾಯಕ ನಾಗರಾಜು ಹಾಜರಿದ್ದರು.

ಆಯುರ್ವೇದ ಕಾಲೇಜಿನಲ್ಲಿ 'ಸಿರಿ ಸಂಭ್ರಮ'



ಮೈಸೂರು, ಅ.21– ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ 7ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಅಂಗವಾಗಿ 'ಸಿರಿ ಸಂಭ್ರಮ' ಸಿರಿಧಾನ್ಯಗಳ ಮಹತ್ವ ಮತ್ತು ಆಯುರ್ವೇದದ ಆಹಾರ ಸೂತ್ರಗಳ ಪ್ರದರ್ಶನ ಏರ್ಪಡಿಸಲಾಗಿತ್ತು.

ಶುಕ್ರವಾರ 'ಸಿರಿ ಸಂಭ್ರಮ'ವನ್ನು ಉದ್ಘಾಟಿಸಿದ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಡಾ.ದಾಕ್ಷಾಯಿಣಿ ಅವರು ಆಯುರ್ವೇದ ಆಹಾರ ಪದ್ಧತಿಯನ್ನು ಅನುಸರಿಸುವಂತೆ ಕರೆ ನೀಡಿದರು.

ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ.ಗಜಾನನ ಹೆಗಡೆ ಮಾತನಾಡಿ, ಪ್ರತಿ ಮನೆಯಲ್ಲೂ ಆಯುರ್ವೇದ ಇದೆ. ಸಾರ್ವಜನಿಕರು ಮೊದಲು ಮನೆಮದ್ದು ಬಳಸಿ, ನಂತರ ವೈದ್ಯರ ಬಳಿ ಹೋಗುತ್ತಾರೆ. ಹಾಗಾಗಿ ಆಯುರ್ವೇದ ವೈದ್ಯರು ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡಬೇಕು. ಕೊರೊನಾ ಸಂದರ್ಭದಲ್ಲಿ ಬಹಳಷ್ಟು ಜನ ಆಯುರ್ವೇದ ಆಸ್ಪತ್ರೆ ಸೌಲಭ್ಯವನ್ನು ಸದುಪಯೋಗ ಮಾಡಿಕೊಂಡರು ಎಂದು ತಿಳಿಸಿದರು.

ಶಾರಾದ ವಿಲಾಸ ಫಾರ್ಮಸಿ ಕಾಲೇಜಿನ ಪ್ರಾಂಶುಪಾಲ ಡಾ.ಹನುಮಂತಾಚಾರ್ ಜೋಶಿ ಮಾತನಾಡಿ, ಆಯುರ್ವೇದ ತಾಯಿ, ಅಲೋಪತಿ ಪತ್ನಿ ಇದ್ದಂತೆ. ಆಯುರ್ವೇದ ವೈದ್ಯ ಪದ್ಧತಿಗೆ ಸಾವಿರಾರು ವರ್ಷಗಳ ಇತಿಹಾಸವಿದೆ ಎನ್ನುವುದನ್ನು ಮರೆಯಬಾರದು. ಪ್ರತಿಯೊಬ್ಬರೂ 'ಆಹಾರ–ವಿಚಾರ–ವಿಹಾರ–ಚಿಕಿತ್ಸೆ' ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ಕಿವಿಮಾತು ಹೇಳಿದರು.

ಹಿರಿಯ ಪತ್ರಕರ್ತರಾದ ಅಂಶಿ ಪ್ರಸನ್ನ ಕುಮಾರ್, ಶ್ರೀಧರ ಆರ್.ಭಟ್, ಸರ್ಕಾರಿ ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯ ನಿರ್ದೇಶಕ ಡಾ.ಲಕ್ಷ್ಮೀನಾರಾಯಣ ಶೆಣೈ ಮಾತನಾಡಿದರು. ಸಿರಿಧಾನ್ಯ ಅಡುಗೆ ಸ್ಪರ್ಧೆಯಲ್ಲಿ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಸಾರ್ವಜನಿಕ ವಿಭಾಗದಲ್ಲಿ ಕಲ್ಪನಾ ಅರಸ್, ಕೋಕಿಲಾ, ಯದುಗಿರಿ, ವಿದ್ಯಾರ್ಥಿಗಳ ವಿಭಾಗದಲ್ಲಿ ಶಾರದಾ, ಗಯಾನ, ವಿನಿತಾ, ಜ್ಞಾನಶ್ರೀ, ಗಂಗಾಧರ್, ವಿಶಾಲ್, ಬಹುಮಾನ ಪಡೆದರು. ಆಶಾ, ಮೇಘಾ, ಮಂಜುಳಾ, ಭವಾನಿ ಸಂತೋಷ್ ಅವರು ವಿಶೇಷ ಬಹುಮಾನ ಪಡೆದರು.

ಡಾ.ವೈತ್ರಿ, ಡಾ.ಶಶಿರೇಖಾ, ಡಾ.ಸಂಜಯ್‌ಕುಮಾರ್, ಡಾ.ವಾಸುದೇವ ಚಾಟೆ, ಎಚ್.ವಿ.ನಾಗರಾಜ್, ಸುನೀತಾ, ಸಿದ್ದೇಶ್, ಜ್ಯೋತಿ ಮೂರ್ತಿ, ಡಾ.ಲಲಿತಾ, ದೀಪಿಕಾ, ಡಾ.ಕೆ.ವಿ.ವೆಂಕಟಕೃಷ್ಣ, ಡಾ.ಎಸ್.ಜಿ.ಆದರ್ಶ್, ಸಿದ್ದರಾಮ ಗುಳೇದ್ ಮತ್ತಿತರರು ಉಪಸ್ಥಿತರಿದ್ದರು.


ಪಿಂಜರಾಪೋಲ್ ಜಲಾವೃತ ಶಾಸಕ ರಾಮದಾಸ್‌ರಿಂದ ಸ್ಥಳ ಪರಿಶೀಲನೆ



ಮೈಸೂರು, ಅ.22(ಎಸ್‌ಪಿಎನ್)–ಮೈಸೂರಿನ ಚಾಮುಂಡಿ ಬೆಟ್ಟ ಹಾಗೂ ಸುತ್ತಮುತ್ತದ ಪ್ರದೇಶದಲ್ಲಿ ಸುರಿಯುವ ಮಳೆ ನೀರು, ಪಿಂಜರಾಪೋಲ್ ಬಳಿ ಶೇಖರಣೆಯಾಗಿ ಸಮಸ್ಯೆ ಉಂಟಾಗಿದ್ದ ಸ್ಥಳಕ್ಕೆ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಅಧಿಕಾರಿಗಳ ತಂಡ ಶನಿವಾರ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಚಾಮುಂಡಿಬೆಟ್ಟ ಮತ್ತು ಸುತ್ತಮುತ್ತ ಧಾರಾಕಾರ ಮಳೆ ಬಿದ್ದಾಗ ಪಿಂಜರಾಪೋಲ್ ಬಳಿ ನೀರು ಶೇಖರಣೆಯಾಗಿ ಸುತ್ತಮುತ್ತಲಿನ ನಿವಾಸಿಗಳಿಗೆ ತೀವ್ರ ತೊಂದರೆಯಾಗುತ್ತಿದೆ. ಈ ಸಮಸ್ಯೆಯನ್ನು ಬಗೆಹರಿಸುವಂತೆ ಸಾರ್ವಜನಿಕರು, ಶಾಸಕ ಎಸ್.ಎ.ರಾಮದಾಸ್ ಅವರಿಗೆ ಮನವಿ ಮಾಡಿದ್ದ ಹಿನ್ನೆಲೆಯಲ್ಲಿ ಇಂದು ಪಾಲಿಕೆ ಅಧಿಕಾರಿಗಳೊಂದಿಗೆ ಶಾಸಕರು ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಶಾಸಕರು, ಈ ಸಮಸ್ಯೆ ಶಾಶ್ವತವಾಗಿ ಬಗೆಹರಿಸಲು 10 ಕೋಟಿ ರೂ. ಮೊತ್ತದ ಅನುದಾನ ನೀಡುವಂತೆ ನಗರ ಪಾಲಿಕೆಯಿಂದ ರಾಜ್ಯ ಸರ್ಕಾರಕ್ಕ ಅಂದಾಜು ಪಟ್ಟಿ ಸಲ್ಲಿಸಲಾಗಿತ್ತು. ಇದಕ್ಕೆ ರಾಜ್ಯ ಸರ್ಕಾರ ಅನುಮೋದನೆ ನೀಡಿದ್ದು, ಇನ್ನು ಕೆಲವೇ ದಿನಗಳಲ್ಲಿ ಕಾಮಗಾರಿ ಆರಂಭಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಈ ವೇಳೆ ಪಿಂಜರಾ ಪೋಲ್ ಸೊಸೈಟಿಯ ಅಧ್ಯಕ್ಷರಾದ ಸುಮತಿ ಲಾಲ್ ಜೈನ್, ವಿನೋದ್ ಜೈನ್, ಶಂಕರ್, ಬಾಬು, ಚೇತನ್ ಹಾಗೂ ನಗರಪಾಲಿಕೆ ಅಧಿಕಾರಿಗಳು ಉಪಸ್ಥಿತರಿದ್ದರು.



ಜಾತ್ಯತೀತ ಜನತಾದಳದ ರಾಜ್ಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಕಗೊಂಡಿರುವ ಮಾಜಿ ಮೇಯರ್ ಆರ್.ಲಿಂಗಪ್ಪ ಅವರು ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಅವರನ್ನು ಅಭಿನಂದಿಸಿದರು. ಚಿತ್ರದಲ್ಲಿ ಚಂದ್ರು, ಸುನಿಲ್, ರಾಜು ಇದ್ದಾರೆ.

ಶ್ರೀ ಸುತ್ತೂರು ಕ್ಷೇತ್ರದಲ್ಲಿ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು

ಮೈಸೂರು, ಅ. 22– ಶ್ರೀ ಸುತ್ತೂರು ಕ್ಷೇತ್ರದಲ್ಲಿ ಕಾರ್ತಿಕ ಮಾಸದ ಪ್ರಯುಕ್ತ ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಮಹದೇಶ್ವರ ದೇವಸ್ಥಾನಗಳಲ್ಲಿ ಅ. 26 ರಿಂದ ನವೆಂಬರ್ 23 ರವರೆಗೆ ಪ್ರತಿದಿನ ಪ್ರಾತಃಕಾಲ ಮಹಾರುದ್ರಾಭಿಷೇಕ, ಸಹಸ್ರನಾಮ ಹಾಗೂ ಅಷ್ಟೋತ್ತರ ಬಿಲ್ವಾರ್ಚನೆ ಮತ್ತು ಮಹಾಮಂಗಳಾರತಿ ಹಾಗೂ ಪ್ರತಿ ಸೋಮವಾರ ದೀಪೋತ್ಸವ ಇನ್ನಿತರೆ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಸೇವಾರ್ಥ ಸಲ್ಲಿಸಲು ಅಪೇಕ್ಷಿಸುವ ಭಕ್ತಾದಿಗಳು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಅಥವಾ ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯಾಲಯದಲ್ಲಿ ನೇರವಾಗಿ ಅಥವಾ (ಮಾಹಿತಿ ಕೇಂದ್ರ) 8896964242, 08221 –232223, 0821 – 2548212 ದೂರವಾಣಿಗಳ ಮೂಲಕ ಸಂಪರ್ಕಿಸಬಹುದಾಗಿದೆ.

ಸ್ಥೌಲ್ಯಹರ ಚಿಕಿತ್ಸಾ ಶಿಬಿರ

ಮೈಸೂರು, ಅ. 22– ಮೈಸೂರಿನ ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಅ. 24 ರಿಂದ 31 ರವರೆಗೆ ಸ್ಥೌಲ್ಯಹರ (ಬೊಜ್ಜು ನಿರ್ವಹಣಾ) ಚಿಕಿತ್ಸಾ ಶಿಬಿರವನ್ನು ಬೆಳಗ್ಗೆ 9.30 ರಿಂದ ಸಂಜೆ 4.30ರವರೆಗೆ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 9916483919, ದೂ. 0821–2548231 ಸಂಪರ್ಕಿಸಬಹುದು.

ಪ್ರಕಟಣೆ


ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ ಮೈಸೂರು – 570 029, ಜಾನಕಿ ನಗರ ಬ್ಲಾಕ್ ನಂ. 18, ಮನೆ ನಂ. 19 ರಲ್ಲಿ ವಾಸವಾಗಿರುವ ಲೇಟ್ ಸಿ.ಎಂ. ಪೂವಯ್ಯ ರವರ ಮಗನಾದ ಶ್ರೀ. ಅಕ್ಷಯ್ ವಿಘ್ನೇಶ್ ಸಿ.ಪಿ.ಕೆ. (ಹಳೆ ಹೆಸರು ಶ್ರೀ. ಸಿ.ಪಿ. ಕಾವೇರಪ್ಪ), [Aadhar No. 6923 9097 2437) ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದ ವ್ಯಕ್ತಿಗಲ್ಲದೆ ಬೇರೆ ಯಾರಿಗಾದರು, ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ, ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ ಈ ಕೆಳಕಂಡವರನ್ನು ಈ ದಿನದಿಂದ ಏಳು (7) ದಿನಗಳ ಒಳಗಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ಸಂಪರ್ಕಿಸುವುದು. ಇಲ್ಲವಾದಲ್ಲಿ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಮೇಲೆ ಕಾಣಿಸಿದವರಗಲ್ಲದೆ ಬೇರೆ ಯಾರಿಗೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ ಯಾಗಲೀ ಇಲ್ಲವೆಂದೇ ಪರಿಗಣಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುವರು.

ಷೆಡ್ಯೂಲ್ ಸ್ವತ್ತು

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ರಮ್ಮನಹಳ್ಳಿ ಗ್ರಾಮಕ್ಕೆ ಸೇರಿದ ಶ್ರೀ. ಅಕ್ಷಯ್ ವಿಘ್ನೇಶ್ ಸಿ.ಪಿ.ಕೆ (ಹಳೆ ಹೆಸರು ಸಿ.ಪಿ. ಕಾವೇರಪ್ಪ) ರವರ ಹೆಸರಿನಲ್ಲಿ ಖಾತಾ ನಂ. 732 ನ್ನು ಹೊಂದಿರುವ ಸರ್ವೆ ನಂ. 134/1, ವಿಸ್ತೀರ್ಣ 1 ಎಕರೆ 15 ಗುಂಟೆ, ಅಸೆಸ್‌ಮೆಂಟ್ ರೂ. 1.24, ಸರ್ವೆ ನಂ. 134/2, ವಿಸ್ತೀರ್ಣ 0–28 ಗುಂಟೆ, ಅಸೆಸ್‌ಮೆಂಟ್ ರೂ. 0.63 ಮತ್ತು ಸರ್ವೆ ನಂ. 134/3, ವಿಸ್ತೀರ್ಣ 0–32 ಗುಂಟೆ, ಅಸೆಸ್‌ಮೆಂಟ್ ರೂ. 0.72 ಇದರ ಒಟ್ಟು ವಿಸ್ತೀರ್ಣ 2 ಎಕರೆ 35 ಗುಂಟೆ ಖುಷ್ಕಿ ಜಮೀನು ಮತ್ತು ಈ ಸ್ವತ್ತಿಗೆ ಚೆಕ್ಕುಬಂದಿ : ಪೂರ್ವಕ್ಕೆ : ಸರ್ಕಾರಿ ಓಣಿ, ಪಶ್ಚಿಮಕ್ಕೆ : ಹಂಚ್ಯಾ ಗ್ರಾಮಕ್ಕೆ ಹೋಗುವ ರಸ್ತೆ, ಉತ್ತರಕ್ಕೆ : ಶ್ರೀ. ಮರಟ್ಟ ಮಂಚಯ್ಯ ರವರ ಜಮೀನು, ದಕ್ಷಿಣಕ್ಕೆ: ಶ್ರೀಮತಿ. ಕರಿಯಮ್ಮ ಸಿದ್ದಮ್ಮ ರವರ ಜಮೀನು.

ಸಹಿ/– ಕೆ.ಎಲ್. ಮಹಾದೇವಸ್ವಾಮಿ, ಬಿ.ಎಸ್‌ಸಿ., ಎಲ್.ಎಲ್.ಬಿ., ವಕೀಲರು ಮತ್ತು ನೋಟರಿ, ರೂಂ ನಂ. ಎಫ್–1 & 2, ಒಂದನೇ ಮಹಡಿ, 5ನೇ ಕ್ರಾಸ್, ಅಲ್ಲಮ್ಮ ಪ್ರಭು ಕೃಪ ಕಾಂಪ್ಲೆಕ್ಸ್, ರಾಮಾನುಜ ರಸ್ತೆ, ಮೈಸೂರು–570 004. Mob: 94482–22522, Office : 0821-4287998.

ದಿನಾಂಕ: 21.10.2022



6ನೇ ವರ್ಷದ ಪುಣ್ಯಸ್ಮರಣೆ

ನೀವು ನಮ್ಮನ್ನು ಅಗಲಿ ಆರು ವರ್ಷಗಳಾದರೂ ಸದಾ ನಿಮ್ಮ ನೆನಪಿನಲ್ಲಿರುವ

ಲಾರಿ ಚಿಕ್ಕಣ್ಣ

ಮಂಚೇಗೌಡನಕೊಪ್ಪಲು, ಹೆಬ್ಬಾಳ್ (ಭೈರವೇಶ್ವರ ದೇವಸ್ಥಾನ)

ಪತ್ನಿ–ಸುಶೀಲಮ್ಮ, ಮಗ: ಕುಮಾರ–ಲಕ್ಷ್ಮೀ, ಚಂದ್ರು(ಲಾರಿ)–ರೂಪ, ಹೆಣ್ಣುಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗ



ಶ್ರೀ ಗಜಾನನ ಡ್ರಾಮಾ ಥೇಟರ್, ಸ್ಟೇಷನ್ ರೋಡ್, ಹುಬ್ಬಳಿ, ಕ್ಯಾಂಪ್, ಮೈಸೂರು

ಶ್ರೀ ಶರಣ ಬಸವೇಶ್ವರ ಕಲಾ ಸಂಘ ಲಕ್ಷ್ಮೇಶ್ವರ ಇವರಿಂದ ಜಯಮ್ಮ ಮಲ್ಲೇಗೌಡ ಹಾಲ್ ಸಂದೇಶ ಪ್ರಿನ್ಸ್ ಹೋಟೆಲ್ ಪಕ್ಕ, ನಜರ್‌ಬಾದ್ ಮೈಸೂರಿನಲ್ಲಿ

ಪ್ರತಿದಿನ ಮಧ್ಯಾಹ್ನ 3-15ಕ್ಕೆ ಮತ್ತು ಸಂಜೆ 6-15ಕ್ಕೆ 2 ಪ್ರದರ್ಶನಗಳು

ಯಶಸ್ವಿ ಜನಭರಿತ 7ನೇ ಪ್ರಯೋಗದತ್ತ

ಕಿವುಡ ಮಾಡಿದ ಕಿತಾಪತಿ

ಎಂಬ ಹಾಸ್ಯಭರಿತ ಸಾಮಾಜಿಕ ನಾಟಕ

ಟಿಕೆಟ್ ದರ ಖುರ್ಚಿ ರೂ.100

BALAJI NAVODAYA

Premium plots at Bogadi Road, 75% Bank Loan available futuristic location, attached to State Highway, Ready to Registration and Construction storm concrete Road, Rain water harvesting system.

Call for free site visit

99804 91145



ಯಶಸ್ವಿ ಪ್ರದರ್ಶನ

ಪದ್ಮ ಚಿತ್ರಮಂದಿರ

ದೀಪಾವಳಿ ಪ್ರಯುಕ್ತ ಶರಣ್ ನಟಿಸಿರುವ

ಗುರು ಶಿಷ್ಯರು (ಕನ್ನಡ)

ದಿನ 4 ಪ್ರದರ್ಶನ 10.30 1.30 4.30 7.30

ಸೈಟು ಬೇಕಾಗಿದೆ

40x60

ಲಾಲ್ ಬಹದ್ದೂರ್ ಶಾಸ್ತ್ರಿನಗರದಲ್ಲಿ ಶಾಂತಿವೇರಿಗೋಪಾಲಗೌಡ ನಗರದಲ್ಲಿ, ಮಾಲೀಕರು ಸಂಪರ್ಕಿಸಿ:

9741624588 / 9686714571

Exchange Offer from

SAI SOFA MAKERS

Change your Old Sofa to Brand New Luxury Sofa

7760787625

NEW HOUSE FOR SALE

30x50 N/E,G &1st Floor, 5 BHK with Car Parking, Individual House, Italian Kitchen with all Interiors, Attached bath Rooms, Wardrobes, with Borewell at Kandaya Nagara, Srirampura 3rd Stage, Mysore. Price: 1.60 Crores (Nego).

Contact :9606227202/ 9611449951/9845003451

43 ಮೈಸೂರು ಮಿತ್ರ 43

ಜಾಹೀರಾತಿಗಾಗಿ ಸಂಪರ್ಕಿಸಿ:

Ph: 0821-2496522 / 23

Email:ad@mysurumithra.com

ಕೈಲಾಸ ಶಿವಗಣಾರಾಧನ ಆಹ್ವಾನಪತ್ರಿಕೆ



ಇವರು ದಿ. 12.10.2022ರಂದು ಲಿಂಗೈಕ್ಯರಾಗಿದ್ದು ತತ್ಸಂಬಂಧವಾಗಿ ದಿ. 24.10.2022ರ ಸೋಮವಾರ ಬೆಳಿಗ್ಗೆ 10.30 ಗಂಟೆಗೆ ಕೈಲಾಸ ಶಿವಗಣಾರಾಧನೆ ಕಾರ್ಯವನ್ನು ನಂಜನಗೂಡು ತಾಲ್ಲೂಕು ಚಿಕ್ಕಯ್ಯನ ಛತ್ರ ಹೋಬಳಿ, ಆಲತ್ತೂರು ಗ್ರಾಮದ ಸ್ವಗೃಹದಲ್ಲಿ ಏರ್ಪಡಿಸಿದ್ದು, ಆಹ್ವಾನಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ

ಶ್ರೀಮಾನ್ ಸತೀಶ್ ಎ.ಆರ್

ಮಾಜಿ ಗ್ರಾ. ಪಂ. ಸದಸ್ಯರು ಹಾಗೂ ಕೇಬಲ್ ಮಾಲೀಕರು

ದುಃಖತಪ್ತರು: ತಂದೆ: ಶ್ರೀ ಗೌ. ರಾಜಶೇಖರ, ತಾಯಿ: ಪದ್ಮ, ಮೃತರ ಪತ್ನಿ: ಶ್ರೀಮತಿ ನಂದಿನಿ, ಮಹದೇವಸ್ವಾಮಿ & ಸಹೋದರರು, ಮಕ್ಕಳು ಹಾಗೂ ಕುಟುಂಬವರ್ಗದವರು

HOUSE FOR SALE

30x40 N/E, G &1st Floor, Italian Kitchen with all Interiors, Behind Sankalp Apartment, LIC Colony, Srirampura 2nd Stage, Mysore. Price: 1.30 Crores (Negotiable)

Contact : 9606227202 / 9611449951 9845003451

HOUSE FOR SALE

20x30 Duplex House Three (3) BHK MUDA approved Layout, Near Dattagalli, Mysore. Contact: Mail: pantanginarasimharao@gmail.com

8310259191 8618255505

ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಗೆ ಡ್ರೈವರ್‌ಗಳು ಬೇಕಾಗಿದ್ದಾರೆ.

9513066625

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಬಯಸುವುದೇನೆಂದರೆ, ನನ್ನ ಕಕ್ಷಿದಾರರಾದ ನೆಲೆ ಗೃಹನಿರ್ಮಾಣ ಸಹಕಾರ ಸಂಘ ನಿಯಮಿತ, ನಂ.200 ಇ.ಡಬ್ಲ್ಯೂ.ಎಸ್, ಕೆ.ಹೆಚ್.ಬಿ 1ನೇ ಹಂತ, ಕುವೆಂಪುನಗರ, ಮೈಸೂರು–570023 ರವರು, ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೆಂಚಲಗೂಡು ಗ್ರಾಮದಲ್ಲಿನ ಸರ್ವೆ ನಂ.124/1ರಲ್ಲಿನ 2 ಎಕರೆ 04 ಗುಂಟೆ ಜಮೀನನ್ನು (ಈ ಕೆಳಗೆ ಐಟಂ ನಂ.1 ರಲ್ಲಿ ನಮೂದಿಸಿರುವ ಸ್ವತ್ತನ್ನು) ಇದರ ಪ್ರಸ್ತುತ ಮಾಲೀಕರಾದ ಶ್ರೀಮತಿ ಜಿ.ಆರ್. ಮಂಜುಳ ರವರಿಂದ ಖರೀದಿಸಲು ಇಚ್ಛೆಯನ್ನು ವ್ಯಕ್ತಪಡಿಸಿರುತ್ತಾರೆ.

ಅದೇ ರೀತಿ ನನ್ನ ಕಕ್ಷಿದಾರರು ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಧನಗಳ್ಳಿ ಗ್ರಾಮದಲ್ಲಿನ ಸರ್ವೆ ನಂ.28/2ಬಿ ರಲ್ಲಿನ 1 ಎಕರೆ 02 ಗುಂಟೆ ಜಮೀನನ್ನು (ಈ ಕೆಳಗೆ ಐಟಂ ನಂ.2 ರಲ್ಲಿ ನಮೂದಿಸಿರುವ ಸ್ವತ್ತನ್ನು) ಇದರ ಪ್ರಸ್ತುತ ಮಾಲೀಕರಾದ ಶ್ರೀ ನಿತೀನ್ ದೇವೂರ್ ರವರಿಂದ ಖರೀದಿಸಲು ಇಚ್ಛೆಯನ್ನು ವ್ಯಕ್ತಪಡಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ಯಾರಿಗಾದರು, ಯಾವುದೇ ತರಹದ ಹಕ್ಕು–ಬಾಧ್ಯತೆಗಳು ಇದ್ದ ಪಕ್ಷದಲ್ಲಿ, ಸದರಿ ವ್ಯಕ್ತಿಗಳು ಸಂಬಂಧಪಟ್ಟ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ನಿಮ್ಮ ಹಕ್ಕು–ಬಾಧ್ಯತೆಗಳನ್ನು ಈ ಸಾರ್ವಜನಿಕ ಪ್ರಕಟಣೆಯ ದಿನಾಂಕದಿಂದ 7 ದಿನಗಳ ಒಳಗಾಗಿ ತಿಳಿಸತಕ್ಕದು. ತಪ್ಪಿದಲ್ಲಿ ಯಾವುದೇ ಹಕ್ಕು–ಬಾಧ್ಯತೆಗಳು ಇರುವುದಿಲ್ಲವೆಂದು ಭಾವಿಸಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಖರೀದಿಸುತ್ತಾರೆ ಎಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್ ಸ್ವತ್ತುಗಳ ವಿವರ

ಐಟಂ ನಂ.1:

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೆಂಚಲಗೂಡು ಗ್ರಾಮದಲ್ಲಿರುವ ಸರ್ವೆ ನಂ.124/1 ರಲ್ಲಿನ 2 ಎಕರೆ 04 ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ನಿಂಗನಾಯಕ ವಗ್ಗೈರೆ ರವರ ಜಮೀನು, ಪಶ್ಚಿಮಕ್ಕೆ : ಧನಗಳ್ಳಿ ಎಲ್ಲೆ, ಉತ್ತರಕ್ಕೆ: ದ್ಯಾವನಾಯಕ ವಗ್ಗೈರೆ ರವರ ಜಮೀನು, ದಕ್ಷಿಣಕ್ಕೆ : ಸರ್ವೆ ನಂ.123 ರ ಜಮೀನು.

ಐಟಂ ನಂ.2:

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಧನಗಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.28/2 ಬಿ ರಲ್ಲಿನ 1 ಎಕರೆ 02 ಗುಂಟೆ ಖುಷ್ಕಿ ಜಮೀನಿಗೆ ಚೆಕ್ಕುಬಂದಿ: ಪೂರ್ವಕ್ಕೆ: ಶಿವಪ್ರಕಾರ್ ರವರ ಸ್ವತ್ತು ಮತ್ತು ಸರ್ವೆ ನಂ.124/1ರ ಜಿ.ಆರ್.ಮಂಜುಳ ರವರ ಜಮೀನು, ಪಶ್ಚಿಮಕ್ಕೆ: ಸರ್ವೆ ನಂ.28/2ಎ ರ ದೇವಣ್ಣ ರವರ ಜಮೀನು, ಉತ್ತರಕ್ಕೆ ಸರ್ವೆ ನಂ.28/3ರ ಚಂದ್ರಮ್ಮ ರವರ ಜಮೀನು, ದಕ್ಷಿಣಕ್ಕೆ: ರಸ್ತೆ ನಂತರ ಖಾಸಗಿ ಸ್ವತ್ತು.

ಸಹಿ/– ಕೆ.ಎಸ್ ಮಹದೇವ ಪ್ರಸಾದ್, ವಕೀಲರು, ನಂ.1028, ಸಿ.ಹೆಚ್–20/ಡಿ, ರೂಮ್ ನಂ.2 ಮತ್ತು 3, 1ನೇ ಮಹಡಿ, ಜಯಲಕ್ಷ್ಮಿ ವಿಲಾಸ ರಸ್ತೆ, ಚಾಮರಾಜಪುರಂ, ಮೈಸೂರು–570005. ಮೊಬೈಲ್ ನಂ. 9164277766

ದಿನಾಂಕ: 22.10.2022

ಗೌರವಾನ್ವಿತ ಮೈಸೂರು ಜಿಲ್ಲಾ ಜಿಲ್ಲಾಧಿಕಾರಿರವರ / ಪ್ರಾದೇಶಿಕ ಭೂ–ದಾಖಲೆಗಳ ಜಂಟಿ ನಿರ್ದೇಶಕರ ನ್ಯಾಯಾಲಯ, ಮೈಸೂರು ವಿಭಾಗ, ಮೈಸೂರು

ಆರ್.ಪಿ. ಸಂ 630/2021–22

ಮೇಲ್ಮನವಿದಾರರು: ಶ್ರೀಮತಿ ವನಮಾಲ ಪೈ ಕೋಂ. ಉತ್ತಮ್‌ಕುಮಾರ್ ಪೈ ವಯಸ್ಕರು, ವಾಸ: ಮನೆ ನಂ.423, 'ದಾಮೋದರ ಕೃಪ' ಕಾಂಟೂರ್ ರಸ್ತೆ, ಆಲನಹಳ್ಳಿ ಬಡಾವಣೆ, ಆಲನಹಳ್ಳಿ, ಮೈಸೂರು.

ವಿರುದ್ಧ

ಎದುರುದಾರರು: ಎಂ. ಪ್ರಕಾಶ್ ಬಿನ್ ಕೆ. ಪುಟ್ಟಸಾಮಯ್ಯ, ವಯಸ್ಕರು, ವಾಸ: ವಾಜಮಂಗಲ ಗ್ರಾಮ ವರುಣಾ ಹೋಬಳಿ, ಮೈಸೂರು ತಾಲ್ಲೂಕು ಮತ್ತು ಇತರ 6 ಜನ ಎದುರುದಾರ ಸಂಖ್ಯೆ–6, ಬಿ.ಕೆ. ಲೋಕೇಶ್ ಬಿನ್ ಬಿ.ಟಿ. ಕೆಂಪೇಗೌಡ ವಯಸ್ಕರು ವಾಸ: ಮನೆ ನಂ.3208, ಒಕ್ಕಲಿಗರ ಬೀದಿ, ರಾಮಮಂದಿರ ಹಿಂಭಾಗ, ಪೇಟೆ ಬೀದಿ, ಮಳವಳ್ಳಿ ಟೌನ್, ಮಂಡ್ಯ ಜಿಲ್ಲೆ

ತಿಳುವಳಿಕೆ ಪತ್ರ

ಮೈಸೂರು ತಾಲ್ಲೂಕು, ವರುಣಾ ಹೋಬಳಿ, ವಾಜಮಂಗಲ ಗ್ರಾಮದ ಸರ್ವೆ ನಂ.8 ರಲ್ಲಿ ಪೋಡಿಗೂ ಮೊದಲು ಒಟ್ಟು ವಿಸ್ತೀರ್ಣ 6 ಎಕರೆ 35 ಗುಂಟೆ ಜಮೀನಿದ್ದು, ಸರ್ವೆ ನಂ.8/1 ರಲ್ಲಿ 6 ಎಕರೆ 11 ಗುಂಟೆಗೆ ತಂದು 2ನೇ ಹಿಸ್ಸೆಗೆ 24 ಗುಂಟೆ ತಂದು, ಒಂದನೇ ಹಿಸ್ಸೆಯಲ್ಲಿ 3ನೇ ಹಿಸ್ಸೆಗೆ 1 ಎಕರೆ 20 ಗುಂಟೆ ಮಾಡುವಾಗ ವಿಸ್ತೀರ್ಣ ಕೈಬಿಟ್ಟು ವಿಸ್ತೀರ್ಣ ಅನುಭವಕ್ಕೂ ಮತ್ತು ದಾಖಲೆಗಳಿಗೂ ವ್ಯತ್ಯಾಸ ಉಂಟಾಗಿ ತಪ್ಪಾಗಿ ಹಿಸ್ಸಾ ದುರಸ್ತಪಡಿಸಿರುವುದನ್ನು ರದ್ದುಪಡಿಸಿ, ಸರ್ವೆ ನಂ.8/1 ರಿಂದ ಸರ್ವೆ ನಂ. 8/2 ಮತ್ತು 8/3 ಆಗಿರುವ 3 ಹಿಸ್ಸೆಗಳನ್ನು ರದ್ದುಪಡಿಸಿ, ಅನುಭವದಂತೆ ಹಾಗೂ ದಾಖಲೆಗಳನ್ವಯ ಹೊಸದಾಗಿ ಅಟ್ಲಾಸ್ ಮತ್ತು ಹಿಸ್ಸಾ ಟಿಪ್ಪಣಿಗಳನ್ನು ಸರಿಪಡಿಸುವಂತೆ ಕೋರಿ ಮೇಲ್ಮನವಿದಾರರು ಎದುರುದಾರರ ವಿರುದ್ಧ ಮೇಲ್ಕಂಡ ಮೇಲ್ಮನವಿಯನ್ನು ಘನ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. 4ನೇ ಎದುರುದಾರರಿಗೆ ಮೇಲ್ಕಂಡ ಪ್ರಕರಣಕ್ಕೆ ಹಾಜರಾಗುವಂತೆ ಘನ ನ್ಯಾಯಾಲಯದಿಂದ ನೀಡಿದ್ದ ನೋಟೀಸ್ ಜಾರಿಯಾಗಿರುವುದಿಲ್ಲ. ಈ ಕಾರಣ 4ನೇ ಎದುರುದಾರರು ಮೇಲ್ಕಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ 03/11/2022 ರಂದು ಮಧ್ಯಾಹ್ನ 3 ಗಂಟೆಗೆ ಖುದ್ದಾಗಿ ಆಗಲಿ ಅಥವಾ ವಕೀಲರ ಮೂಲಕವೇ ಆಗಲಿ ಹಾಜರಾಗತಕ್ಕದ್ದು, ತಪ್ಪಿದಲ್ಲಿ ಮೇಲ್ಕಂಡ ಮೇಲ್ಮನವಿಯನ್ನು ಘನ ನ್ಯಾಯಾಲಯವು ನಿಯಮಾನುಸಾರ ಅಂತಿಮಗೊಳಿಸಿ ತೀರ್ಮಾನ ಮಾಡುತ್ತದೆಂದು ತಿಳಿಯತಕ್ಕದ್ದು.

ನ್ಯಾಯಾಲಯದ ಆದೇಶದ ಮೇರೆಗೆ ಸಹಿ/– ಪ್ರಾದೇಶಿಕ ಭೂದಾಖಲೆಗಳ ಜಂಟಿ ನಿರ್ದೇಶಕರು, ಮೈಸೂರು ವಿಭಾಗ, ಮೈಸೂರು


ಮೇಲ್ಮನವಿದಾರರ ಪರ ವಕೀಲರು

ವಿಜಯಶ್ರೀ ಲಾ ಅಸೋಸಿಯೇಟ್ಸ್

ಎಂ.ಸಿ. ದಿಲೀಪ್‌ಕುಮಾರ್ ಬಿ.ಕಾಂ.,ಎಲ್.ಎಲ್.ಬಿ. ನಂ. ಕೆಎಆರ್ –2541/1999 ಕಛೇರಿ ಸಂಖ್ಯೆ ಕೆ–8/1 ಮತ್ತು ಕೆ–8/1ಎ 2ನೇ ಮಹಡಿ, ವಿ.ವಿ. ಮುಖ್ಯರಸ್ತೆ, ಕೆ.ಆರ್. ಮೊಹಲ್ಲಾ, ಮೈಸೂರು

ಸ್ಥಳ: ಮೈಸೂರು ದಿನಾಂಕ: 20–10–2022

3ನೇ ವರ್ಷದ ಸವಿನೆನಪು



ಗಂಗೆ ಮರಿಯಪ್ಪ ಬೋರೆಗೌಡರ ಮಗ

ನಾಗಯ್ಯ ಉ॥ ನಾಗಣ್ಣ

ಇಂತಿ– ದುಃಖತಪ್ತರು ಕುಟುಂಬವರ್ಗದವರು

ಕೆ.ಜಿ. ಕೊಪ್ಪಲು, ಮೈಸೂರು. ಮೊ: 9902241363

SITE FOR SALE

30x51

East Facing, MUDA approved Near Mahadeshwara Layout, Hulahally Road, Nanjangud. Contact:

9902225551 / 8971793193

SITES FOR SALE *New Layout Launch*

20x30 N/F & S/F

20x40 N/F & S/F

SHREE VINAYAKA GREEN CITY

Adjacent to Vijayanagar 4th Stage

SOURISH LAYOUT

Mob: 9686573798, 9343248739, 9900466811

43 ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

HOUSE FOR SALE

40x30

N/W, 3BR, 2H, 2 Balconies, Modular Kitchen, 4 Toilets, Solar, Duplex with Car Parking at Millenium Enclave, Off KRS Road, Near J K Tyres, Mettagalli.

9972753433

PUBLIC NOTICE

My client are negotiating to purchase the schedule mentioned property more fully described in the below schedule from its owner - **1. SHRI.PADMANABHA MURALI**, son of LATE. D. PADMANABHA RAO, [AADHAR CARD NO.9749 8961 5761] & [PAN NO.ABQPM 1967 K], Aged about 67 years, **2. SMT.PADMA MURALI,** Wife of Shri.Padmanabha Murali, [AADHAR CARD NO.5112 6724 4090], Aged about 59 years; and **3.SMT.PRATHIBHA MURALI**, Daughter of Shri. Padmanabha Murali, [AADHAR CARD NO.5465 5277 3666], Aged about 34 years residing at No.18/A, 2924/2, Ganesha Sadana, 6th Main Road, 12th Cross, V V Mohalla, Mysuru-570 002.

If any person has got any claim of right, title interest over the schedule mentioned property or dispute over the same, they are hereby requested/called upon to lodge their whatsoever claim with documentary proof to the undersigned Advocate within 7 (Seven) days, otherwise, my client will proceed to finalize the sale transaction and any claim made thereafter, will not affect the right of my client in any manner.

SCHEDULE OF THE PROPERTY

SCHEDULE-"A" PROPERTY

All the piece and parcel of the property bearing Property bearing No. 2924 / 2A, D - 18/A, situated at 6th Main Road, 12th Cross, V.V.Mohalla, Mysore. MEASURING East to West : 75 feet and North to South : 42 feet. BOUNDED ON : East : 12th Cross Road, West: Corporation lane, North: Private property, South: Private property.

SCHEDULE-"B" PROPERTY.

The total Undivided share is 882 Square Feet.

SCHEDULE-"C" PROPERTY.

APARTMENT NO.A-1 IN GROUND FLOOR "AAKAR SUMUKHA"-IN SCHEDULE - A PROPERTY WITH A SUPER BUILT AREA OF 1880 SQUARE FEET IN PROPERTY BEARING NO.2924/2A D-18/A, 6TH MAIN ROAD, 12TH CROSS, V V MOHALLA, MYSURU. BOUNDED ON-East: Road, West: Corporation lane, North: Private property, South: Private property.

Sd/- K.V. Prasanna, B.Com., LL.B., Advocate, No.34/1', NPD Complex, Vinobha Road, Shivrampet, Mysore- 570 001. Mob: +91 94485 72781.

Date: 21.10.2022 Place: Mysore.



ONLY ONE WAY TAXI CHARGE

MYSORE to BANGALORE City drop or Pick up

BANGALORE to MYSORE Airport drop or Pick up

Shakthi Nagar MYSURU

9611177599

Srinidhi Enclave Layout

SITES FOR SALE *Ready for Registration*

15 ACRES LAYOUT

Near Excel Soft School, Behind Hyundai Car Showroom, Opp. to Shahi Garments, Belawadi, Mysore

20x33, 20x40, 30x50

Bank loan upto 80%

9686573798, 7795271659

BOOKINGS OPEN FOR

Construction of Brand New Architecture Designed Houses

MUDA APPROVED

20'x40 - 30 Lakhs

30'x40' - 44.99 Lakhs

Near St. Joseph's Central School, Hunsur Road, Mysore.

9740767576, 8884001233

ಸಾರ್ವಜನಿಕರ ಗಮನಕ್ಕಾಗಿ

ನನ್ನ ಕಕ್ಷಿದಾರರ ಇರಾದೆಯ ಮೇರೆಗೆ,

ಏನೆಂದರೆ, ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಸಂಬಂಧ ಮೈಸೂರು ನಗರ, ಸಿದ್ಧಾರ್ಥನಗರ, "ಸತ್ಯ ಮಾರ್ಗ", ಮನೆ ನಂ. 1 ರಲ್ಲಿ ವಾಸವಾಗಿರುವ ಲೇಟ್ ಎಂ ಅನಂತರಾಮಯ್ಯ ರವರ ಮಗನಾದ ಸುಮಾರು 48 ವರ್ಷ ವಯಸ್ಸಿನ ಶ್ರೀ ಎ ರಾಮಚಂದ್ರರವರೊಂದಿಗೆ ಕ್ರಯದ ಕರಾರಿನ ಮೂಲಕ ಒಡಂಬಡಿಕೆ ಮಾಡಿಕೊಂಡಿದ್ದು, ಸದರಿ ಜಮೀನನ್ನು ನನ್ನ ಕಕ್ಷಿದಾರರು ಕ್ರಯಕ್ಕೆ ಪಡೆಯಲು ಇಚ್ಛಿಸಿದ್ದು, ಮೇಲ್ಕಂಡ ಮಾಲೀಕರು ಸಹ ಕ್ರಯಪತ್ರ ಬರೆದುಕೊಡಲು ಸಿದ್ಧರಿದ್ದು, ಈಗಾಗಲೇ ಕೆಲವು ದಾಖಲಾತಿಗಳನ್ನು ನನ್ನ ಕಕ್ಷಿದಾರರಿಗೆ ನೀಡಿದ್ದು, ಹಾಗಾಗಿ ನನ್ನ ಕಕ್ಷಿದಾರರು ನೋಂದಾಯಿತ ಕ್ರಯಪತ್ರ ಪಡೆದುಕೊಳ್ಳಲು ಸಿದ್ಧರಿದ್ದು, ಸದರಿ ಜಮೀನಿನ ಸಂಬಂಧ ಯಾರಿಗಾದರೂ ಯಾವುದೇ ರೀತಿಯ ಹಕ್ಕು ಹಿತಾಸಕ್ತಿ ಇದ್ದಲ್ಲಿ ಸಂಬಂಧಪಟ್ಟವರು ಈ ಪತ್ರಿಕಾ ಪ್ರಕಟಣೆ ಹೊರಡಿಸಿದ 5 ದಿವಸದೊಳಗಾಗಿ ನನ್ನ ಕಕ್ಷಿದಾರರಿಗಾಗಲೀ, ನನಗಾಗಲೀ ಲಿಖಿತವಾಗಿ ಸಂಬಂಧಪಟ್ಟ ದಾಖಲಾತಿಗಳೊಡನೆ ನನ್ನ ಕೆಳಕಂಡ ವಿಳಾಸದ ಕಛೇರಿಯ ಸಮಯದಲ್ಲಿ ಹಾಜರಾಗಿ ತಮ್ಮ ಅಹವಾಲು ಹಾಗೂ ತಕರಾರನ್ನು ಸಲ್ಲಿಸತಕ್ಕದ್ದು. ಮೇಲ್ಕಂಡ ಸಮಯದೊಳಗೆ ಯಾವುದೇ ತಕರಾರು ಬರದೇ ಇದ್ದ ಪಕ್ಷದಲ್ಲಿ ನನ್ನ ಕಕ್ಷಿದಾರರು ಕೆಳಕಂಡ ಜಮೀನಿನ ಸಂಬಂಧಪಟ್ಟ ಹಾಗೆ ಯಾವುದೇ ಅಡಚಣೆ, ತಕರಾರು, ಇಲ್ಲವೆಂದು ಪರಿಗಣಿಸಿ ಮೇಲ್ಕಂಡ ಮಾಲೀಕರಿಂದ ಕ್ರಮಬದ್ಧವಾದ ನೋಂದಣಿ ಕ್ರಯಪತ್ರವನ್ನು ಪಡೆದುಕೊಂಡು ಮುಂದುವರೆಯಲು ಇಚ್ಛಿಸಿದ್ದು, ಸದರಿ ಜಮೀನಿನ ಸಂಬಂಧ ಮುಂದೆ ಯಾವುದೇ ತಂಟೆ ತಕರಾರುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ನಗರ್ತಹಳ್ಳಿ ಗ್ರಾಮಕ್ಕೆ ಸೇರಿದ ವ್ಯವಸಾಯೇತರ ವಸತಿ ಉದ್ದೇಶಕ್ಕೆ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆದೇಶ ಸಂಖ್ಯೆ ಎ.ಎಲ್. ಎನ್ (3) ಸಿ.ಆರ್. 345/2012–13 ದಿನಾಂಕ: 26.02.2013 ರ ಮೇರೆಗೆ ವ್ಯವಸಾಯೇತರ ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆಯಾಗಿರುವ ಸರ್ವೆ ನಂ. 53/3 ರಲ್ಲಿ 1 –04 (ಒಂದು ಎಕರೆ ನಾಲ್ಕು ಗುಂಟೆ) ಸ್ವತ್ತಿಗೆ ಚೆಕ್ಕುಬಂದಿ: ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಸರ್ವೆ ನಂ.54 ರಲ್ಲಿ ಮಹಾದೇವು ರವರ ಜಮೀನು ಮತ್ತು ರೈಲ್ವೆ ಬಡಾವಣೆ, ಉತ್ತರಕ್ಕೆ : ಸರ್ವೆ ನಂ.53/1 ಮತ್ತು 53/2 ರಲ್ಲಿ ಸಣ್ಣಹೈದೇಗೌಡ ರವರ ಹಾಗೂ ಇತರರ ಜಮೀನು ಹಾಗೂ ಖಾಸಗಿ ಬಡಾವಣೆ, ದಕ್ಷಿಣಕ್ಕೆ : ಸರ್ವೆ ನಂ.42 ರಲ್ಲಿ ಮಹದೇವು, ಶಿವಮ್ಮ ಹಾಗೂ ಕಂಬಿಗೌಡರವರ ಜಮೀನು.

ಕಕ್ಷಿದಾರರು

ವಾದಿಯ ಪರ ವಕೀಲರು

ಸಹಿ/– **ಶ್ರೀ ಪಾಲಾಕ್ಷ,** ವಕೀಲರು, ನಂ. 645, ಮೊದಲನೇ ಮಹಡಿ, ಸೀತಾ ವಿಲಾಸ ಛತ್ರ, ನಾರಾಯಣಶಾಸ್ತ್ರಿ ರಸ್ತೆ, ಮೈಸೂರು.

ದಿನಾಂಕ: 22.10.2022

ನಿಸರ್ಗ ಪ್ಯಾರಡೈಸ್

DEVELOPED PLOTS

ONE OF THE HIGHTECH LAYOUT IN MYSURU

50 ACRES TOWNSHIP PROJECT



ಸರ್ವರಿಗೂ ದೀಪಾವಳಿ ಹಬ್ಬದ ಶುಭಾಶಯಗಳು

✱ ತಕ್ಷಣ ಕ್ರಯ

✱ ಎಲ್ಲಾ ಸೌಲಭ್ಯಗಳನ್ನೊಳಗೊಂಡಿರುವ

ಬುಕ್ಕಿಂಗ್ ತೆರೆದಿದೆ

ತ್ವರೆ ಮಾಡಿ..! ಕೆಲವೇ ಸೈಟ್‌ಗಳು ಮಾತ್ರ

30X40 30X50 40X60

ಬ್ಯಾಂಕ್ ಸಾಲ ಸೌಲಭ್ಯವಿದೆ

ಹೈಲ್ಯಾಂಡ್ ಪ್ರಾಪರ್ಟೀಸ್

ಹುಣಸೂರು– ಮೈಸೂರು ಮುಖ್ಯ ರಸ್ತೆ, ಮೈಸೂರು

90713 86615 95133 01854

DEEPAWALI SHOPPING MELA

Regd. by : O/o. D.C.H. Ministry of India

Mob: 93429 12819

20th Oct to 30th Oct 2022 | Daily 10.00 am to 9.00 pm

CRAFTS FROM ALL INDIAN STATES AVAILABLE



VISIT SOON

Exhibition-cum-sale of Over 10,000 Varieties of Handlooms & Handicrafts from all over the Country.

ALL CARDS ACCEPTED

Paytm ACCEPTED HERE

PARKING & ENTRY FREE

VENUE: OPEN GROUND, OPP AISHWARYA PETROL BUNK, VIJAYANAGAR 2ND STAGE, HUNSUR ROAD, MYSORE - 17